ಅಧ್ಯಾತ್ಮಗ್ರಂಥಾವಳಿ

ಇಂದ್ರಾಕ್ಷೀಸ್ತೋತ್ರಸಹಿತ

# ಶಿವಕವಚ

(ಅರ್ಥ-ವಿವರಣೆಗಳ ಸಮೇತ)

ಬರೆದವರು:
ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಸಂಪಾದಕ:
ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ

ಕ್ರಮಾಂಕ ೫೯

ಪ್ರಕಾಶಕರು:
ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.
೧೯೯೯

ನಾಲ್ಕನೆಯ ಸಂಸ್ಕರಣ 1985 - 1500 ಪ್ರತಿಗಳು
ಐದನೆಯ ಸಂಸ್ಕರಣ - 1999 - 2000 ಪ್ರತಿಗಳು

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

ಅಕ್ಷರ ಜೋಡಣೆ
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ. 213, ಬಾಲಾಜಿ ರಸ್ತೆ,
ತ್ಯಾಗರಾಜನಗರ, ಬೆಂಗಳೂರು - 28
ದೂ : 667016

ಮುದ್ರಣಸ್ಥಾನ:
**ಶ್ರೀ ಗಣೇಶಮಾರುತಿ ಪ್ರಿಂಟರ್ಸ್**
76, 3ನೇ ಬ್ಲಾಕ್, 6ನೇ ಮೇನ್
ತ್ಯಾಗರಾಜನಗರ, ಬೆಂಗಳೂರು - 560 028
ದೂ : 6528542

# ಮುನ್ನುಡಿ

ಪರಮಪೂಜ್ಯ ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳವರು ಪರಮಹಂಸಪರಿವ್ರಾಜಕರೂ ವೇದಾಂತವಿಜ್ಞಾನ ಸುನಿಶ್ಚಿತಾರ್ಥರೂ ಆಗಿದ್ದ ಮಹಾಪುರುಷರು. ಆ ಮಹನೀಯರು ಅರ್ಥ ವಿವರಣೆಗಳೊಡನೆ ಕಾರ್ಯಾಲಯದ ಮೂಲಕ ಪ್ರಕಟಿಸಿದ್ದ **'ಶಿವಕವಚ'** ಗ್ರಂಥದ ನಾಲ್ಕು ಮುದ್ರಣಗಳ ಪ್ರತಿಗಳೆಲ್ಲವೂ ಮಾರಾಟವಾಗಿಬಿಟ್ಟಿದ್ದರಿಂದ ಈಗ ಐದನೆಯ ಮುದ್ರಣವನ್ನು ಹೊರತರಲಾಗಿದೆ.

ಅಧ್ಯಾತ್ಮಪ್ರಕಾಶಕಾರ್ಯಾಲಯವು ವಿಶೇಷವಾಗಿ ಕನ್ನಡಭಾಷೆಯಲ್ಲಿ ಅಧ್ಯಾತ್ಮಗ್ರಂಥಗಳ ಪ್ರಕಟನೆ - ಪ್ರಚಾರಗಳನ್ನು ಕೈಗೊಂಡು ಸುಮಾರು ಎಪ್ಪತ್ತೊಂಭತ್ತು ವರ್ಷಗಳು ಕಳೆದಿದ್ದರೂ ಇನ್ನೂ ಕನ್ನಡನಾಡಿನ ಬಹು ಜನರಿಗೆ ಈ ಸಂಸ್ಥೆಯ ಕಾರ್ಯಚಟುವಟಿಕೆಗಳ ಪರಿಚಯವಾಗಿಲ್ಲ. ಅದಕ್ಕಾಗಿಯೇ ಗ್ರಂಥಗಳ ಮೂಲಕ ಮಹಾಜನರನ್ನು ಸಂಸ್ಪರ್ಶಮಾಡಲು ಶಕ್ತಿಮೀರಿ ಪ್ರಯತ್ನಿಸಲಾಗುತ್ತಿದೆ. ಉದಾರಾಶಯರ ನೆರವು ದೊರೆತಂತೆಲ್ಲ ಹೆಚ್ಚುಹೆಚ್ಚು ಸ್ತೋತ್ರಸಾಹಿತ್ಯ, ಕರ್ಮ ಕಾಂಡ, ಪೌರಾಣಿಕವ್ರತಕಥೆಗಳ ವಿವರವುಳ್ಳ ಗ್ರಂಥಗಳನ್ನೂ ಅಧ್ಯಾತ್ಮಗ್ರಂಥಗಳ ಜೊತೆಗೇ ಪ್ರಕಟಿಸುವ ಉದ್ದೇಶವಿದೆ. ಈಗಾಗಲೆ ಹತ್ತಾರು ಸ್ತೋತ್ರಗ್ರಂಥಗಳನ್ನೂ ಹೊರತರಲಾಗಿದೆ. ಶ್ರೀರುದ್ರಭಾಷ್ಯಾದಿ ವೈದಿಕಮಂತ್ರಾರ್ಥವಿವರಣೆಗಳುಳ್ಳ ಒಂದೆರಡು ಪುಸ್ತಕಗಳೂ ಪ್ರಕಾಶಿತವಾಗಿವೆ. ಈ ಗ್ರಂಥಗಳನ್ನು ಮಹಾಜನರು ಕೊಂಡು ಹಾಗೂ ಬಂಧುಮಿತ್ರರಲ್ಲಿ ಹಂಚಿ ಅಧ್ಯಾತ್ಮಪ್ರಸಾರಕಾರ್ಯಕ್ಕೆ ಸಹಾಯಕರಾಗಬೇಕೆಂದು ಪ್ರಾರ್ಥಿಸಿದೆ.

ಈ ಗ್ರಂಥದ ಮುದ್ರಣಕ್ಕೆ ನವದೆಹಲಿಯ ಕ್ವಾಲ್ ಅಪಾರ್ಟ್‌ಮೆಂಟ್ಸ್, ನಂ. 106, ಇಂದ್ರಪ್ರಸ್ಥಬಡಾವಣೆ, ಪತ್ತರ್‌ಗಂಜ್, ನವದೆಹಲಿ - 92 ಈ ವಿಳಾಸದಲ್ಲಿ ವಾಸವಾಗಿರುವ ಶ್ರೀಮತಿ ಎಸ್. ಸಂಧ್ಯಾರವರು ತಮ್ಮ ಪೂಜ್ಯ ಪಿತೃವರ್ಯರಾದ ದಿ|| ಎಸ್. ಸಿದ್ಧವೀರಯ್ಯ, ತುಮಕೂರು - ಇವರ

ಸ್ಮರಣಾರ್ಥವಾಗಿ ರೂ. 3,000/- (ಮೂರು ಸಾವಿರರೂಪಾಯಿ)ಗಳನ್ನು ಉದಾರವಾಗಿ ದಾನಮಾಡಿರುತ್ತಾರೆ. ಇವರಿಗೆ ಕಾರ್ಯಾಲಯದ ಪರವಾಗಿ ಕೃತಜ್ಞತಾ ಪೂರ್ವಕ ಅಭಿನಂದನೆಗಳನ್ನು ಈ ಮೂಲಕ ಸಮರ್ಪಿಸಲಾಗಿದೆ.

ವಾಚಕರು ಎಂದಿನಂತೆ ಈ ಗ್ರಂಥವನ್ನು ಆದರದಿಂದ ಬರಮಾಡಿಕೊಂಡು ಪ್ರೋತ್ಸಾಹಿಸುವರೆಂದು ನಂಬಿದ್ದೇನೆ.

ಇತಿ -

ಹೊಳೆನರಸೀಪುರ, ಸಜ್ಜನವಿಧೇಯ,

6 - 7- 1999 **ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ,**

ಸಂಪಾದಕ.

|| ಓಂ ನಮಃ ಶಿವಾಯ ||

# ಶಿವಕವಚ

ಭಕ್ತನು ತನ್ನ ಇಷ್ಟದೇವತೆಯು ಯಾವದೋ ಅದಕ್ಕೆ ಸಂಬಂಧಪಟ್ಟ ಗೀತಾ, ಸಹಸ್ರನಾಮ, ಸ್ತವ, ಕವಚ, ಹೃದಯ - ಎಂಬ ಐದು ಅಂಗಗಳನ್ನು ಪಠಿಸುತ್ತಿರಬೇಕು ; ಇದಕ್ಕೆ **ಪಂಚಾಂಗಸೇವನ**ವೆಂಬ ಹೆಸರನ್ನು ಮಂತ್ರ ಯೋಗದಲ್ಲಿ ಕೊಟ್ಟಿರುತ್ತಾರೆ. ಶಿವನ ಸಂಬಂಧವಾಗಿ ಶಿವಗೀತೆ, ಶಿವಸಹಸ್ರನಾಮ, ಶಿವಕವಚ - ಇವು ಮೂರೂ ಲೋಕಪ್ರಸಿದ್ಧವಾಗಿವೆ ; ಆದರೆ ಶಿವಸ್ತವ, ಶಿವಹೃದಯ - ಇವುಗಳನ್ನು ಅಷ್ಟಾಗಿ ಜನರು ಪಠಿಸುವದು ಕಂಡುಬರುವದಿಲ್ಲ. ಅದು ಹೇಗಾದರೂ ಇರಲಿ, ಮಿಕ್ಕ ದೇವತೆಗಳಿಗೆ ಸಂಬಂಧಪಟ್ಟ ಕವಚಗಳಿಗಿಂತಲೂ 'ಶಿವಕವಚ'ವು ನಮ್ಮ ದೇಶದಲ್ಲಿ ಬಹಳ ಪ್ರಸಿದ್ಧವಾಗಿರುತ್ತದೆ. ಅದರ ಅರ್ಥವಿಚಾರವನ್ನು ಮಾಡುವದೇ ಈಗಿನ ನಮ್ಮ ಉದ್ದೇಶವು.

ಇಷ್ಟದೇವತೆಯನ್ನು ಪ್ರಸನ್ನವಾಗಿಸಿಕೊಂಡು ಆ ದೇವತೆಯು ತನ್ನನ್ನು ರಕ್ಷಿಸುವಂತೆ ಮಾಡುವದಕ್ಕೆ ಉಪಯೋಗಿಸುವ ಸ್ತೋತ್ರಕ್ಕೆ **'ಕವಚ'** ಎಂದು ಸಂಸ್ಕೃತದಲ್ಲಿ ಹೆಸರು. ಕವಚವೆಂದರೆ ಯುದ್ಧಕಾಲದಲ್ಲಿ ವೀರರು ಶತ್ರುಗಳ ಬಾಣಗಳೇ ಮುಂತಾದವು ತಮ್ಮ ಮೈಮೇಲೆ ಬಿದ್ದು ಗಾಯಗೊಳಿಸದಂತೆ ಉಪಯೋಗಿಸುತ್ತಿದ್ದ ಕಬ್ಬಿಣದ ಅಂಗಿಯು. ಈ ಸ್ತೋತ್ರವನ್ನು ಭಕ್ತಿಯಿಂದ ಜಪಿಸುತ್ತಿರುವಾತನಿಗೆ ಯಾವದೊಂದರ ಅಂಜಿಕೆಯೂ ಇಲ್ಲವೆಂಬುದನ್ನು 'ಕವಚ' ಎಂಬ ಮಾತು ಸೂಚಿಸುವದು.

ಶಿವಕವಚವನ್ನು ಪಠಿಸುವಾತನು ಇದರ ಸಂಬಂಧವಾಗಿ ಹದಿನಾಲ್ಕು ವಿಷಯಗಳನ್ನು ನೆನಪಿನಲ್ಲಿಡಬೇಕು :-

೧. ಈ ಮಹಾಮಂತ್ರವನ್ನು **ಋಷಭಯೋಗೀಶ್ವರನೆಂಬ ಋಷಿ**ಯು ಉಪದೇಶಿಸಿರುತ್ತಾನೆ. ಯಾವ ಮಂತ್ರವೇ ಆಗಲಿ, ಮೊಟ್ಟಮೊದಲು ಯಾವ ಋಷಿಯಿಂದ ಲೋಕದಲ್ಲಿ ಪ್ರಚಾರವಾಯಿತೋ, ಯಾವಾತನು ಅದರ

ಸಿದ್ಧಿಯನ್ನು ತಾನೂ ಪಡೆದು ಮತ್ತೊಬ್ಬರಿಗೂ ಅನುಗ್ರಹಿಸಬಲ್ಲವನಾಗಿದ್ದನೋ, ಆತನ ಸ್ವತ್ತೇ ಅದಾಗಿರುತ್ತದೆ. ಆತನ ಸ್ಮರಣೆಯನ್ನು ಮಾಡಿಕೊಂಡು ನಾವು ಆ ಮಂತ್ರವನ್ನು ಜಪಿಸುವದರಿಂದ ಮಂತ್ರಕ್ಕೆ ವೀರ್ಯವು ಬರುತ್ತದೆ. ಆತನ ದಿವ್ಯಶಕ್ತಿಯನ್ನೂ ಸಾತ್ತ್ವಿಕಬುದ್ಧಿಯನ್ನೂ ಶ್ರದ್ಧೆಯಿಂದ ಸ್ಮರಣೆಗೆ ತಂದುಕೊಂಡ ಮಾತ್ರದಿಂದಲೇ ನಮ್ಮ ಚಿತ್ತವು ನಿರ್ವಿಘ್ನವಾದ ಪ್ರಶಾಂತವಾದ ಒಂದಾನೊಂದು ಅಂತಸ್ತನ್ನು ಮುಟ್ಟುವದು.

೨. ಇದರ **ಛಂದಸ್ಸು** ತ್ರಿಷ್ಟುಪ್ಪು. ಕವಚದ ಪ್ರಾರಂಭಶ್ಲೋಕಗಳೂ ಮಹಿಮೆಯನ್ನು ಹೇಳುವ ಶ್ಲೋಕಗಳೂ ಅನುಷ್ಟುಪ್‌ಛಂದಸ್ಸಿಗೆ ಸೇರಿವೆ ಯಾದರೂ 'ಕವಚ'ವನ್ನು ಹೇಳುವ ಭಾಗವು ಹನ್ನೊಂದಕ್ಷರದ ಪಾದದ ತ್ರಿಷ್ಟುಪ್ಪೆಂಬ ಛಂದಸ್ಸಿನಲ್ಲಿಯೇ ಇದೆ. ಛಂದಸ್ಸನ್ನು ನೆನಪಿನಲ್ಲಿಟ್ಟರೆ ಸರಾಗವಾಗಿ ವೃತ್ತವನ್ನು ಪಠಿಸುವದಕ್ಕೆ ಆಗುತ್ತದೆ. ಇದರಿಂದ ಛಂದೋಭಿಮಾನಿದೇವತೆಗಳ ಅನುಗ್ರಹವೂ ಆಗುವದೆಂದು ಕೆಲವರ ನಂಬಿಕೆಯಿದೆ.

೩. ಸದಾಶಿವನೇ ಇದರ **ದೇವತೆಯು.** ಒಂದೊಂದು ಮಂತ್ರದಲ್ಲಿಯೂ ದೇವತೆಯು ಇಂಥದ್ದೆಂದು ತಿಳಿದು ಧ್ಯಾನಿಸಬೇಕು. ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ - ಎಂಬ ಐದು ಬ್ರಹ್ಮಮೂರ್ತಿಗಳು ಪೃಥಿವ್ಯಾದಿ ಪಂಚಭೂತಗಳಿಗೂ ಅಧಿಕಾರಿಗಳೆಂದು ಆಗಮವಚನವಿರುತ್ತದೆ. ಆದರೆ ಪ್ರಕೃತದಲ್ಲಿ ಈ ರೂಪದ ಸದಾಶಿವನನ್ನೇ ಇಲ್ಲಿ ವಿಷಯವಾಗಿಟ್ಟು ಕೊಂಡಿಲ್ಲವೆಂಬುದು ಸ್ತೋತ್ರದ ಅರ್ಥದಿಂದಲೇ ಮುಂದೆ ಗೊತ್ತಾಗುತ್ತದೆ. ಯಾವಾಗಲೂ ಮಂಗಳವನ್ನುಂಟುಮಾಡುವ ಪರಮಶಿವನನ್ನೇ ಇಲ್ಲಿ ಸದಾಶಿವ ನೆಂದು ಕರೆದಿರುತದೆಯೆಂದು ಎಣಿಸಿದರೆ ತಪಾಗದು.

೪-೫-೬ ಬೀಜ, ಶಕ್ತಿ, ಕೀಲಕಗಳು. ಮಂತ್ರದ ಯಾವ ಭಾಗದಲ್ಲಿ ಪ್ರಧಾನಭಾಗವು ಹುಟ್ಟುವದೋ ಅದಕ್ಕೆ **ಬೀಜ**ವೆಂದು ಹೆಸರು; ನಮ್ಮನ್ನು ನಿರ್ದಿಷ್ಟವಾದ ಧ್ಯೇಯದವರೆಗೆ ಕರೆದೊಯ್ಯಲು ಯಾವದಕ್ಕೆ ಸಾಮರ್ಥ್ಯ ವಿರುವದೋ ಅದಕ್ಕೆ **ಶಕ್ತಿ**ಯೆಂದು ಹೆಸರು; **ಶಕ್ತಿ**ಯನ್ನು ಧ್ಯೇಯಕ್ಕೆ

ಸಂಬಂಧಪಡಿಸುವ ಭಾಗವೇ **ಕೀಲಕವು.** ಇವು ಮೂರೂ ಸ್ತೋತ್ರದ ಭಾಗವಾಗಿಯೇ ಇರಬಹುದು, ಅಥವಾ ಬೀಜಾಕ್ಷರರೂಪವಾಗಿಯಾದರೂ ಇರಬಹುದು. ಬೀಜಾಕ್ಷರಗಳು ಈಗಿನ ಪುಸ್ತಕಗಳಲ್ಲಿ ಬೇರೆಬೇರೆಯಾಗಿರುತ್ತವೆ. ಆದ್ದರಿಂದ ಸಂಪ್ರದಾಯವನ್ನೂ ಶಿವಕವಚದ ಸಿದ್ಧಿಯನ್ನೂ ಬಲ್ಲವರಿಂದ ಇವುಗಳನ್ನು ರಹಸ್ಯಸಮೇತವಾಗಿ ತಿಳಿದುಕೊಳ್ಳಬೇಕು. ಅದಾಗದಿದ್ದರೆ ಇವುಗಳನ್ನು ಹೇಳಿಕೊಳ್ಳದೆ ಇರುವದೇ ಒಳ್ಳೆಯದು. ಷಡಕ್ಷರಮಂತ್ರದ ಉಪದೇಶವಿದ್ದವರು ಅದರ ಬೀಜಾದಿಗಳನ್ನೇ ಉಚ್ಚರಿಸಬಹುದು.

೭. **ವಿನಿಯೋಗ** ಎಂದರೆ ಸ್ತೋತ್ರವನ್ನು ಯಾವ ಉದ್ದೇಶಕ್ಕೆ ಉಪಯೋಗಿಸುತ್ತೇವೆಂಬುದು. ಶ್ರೀಸದಾಶಿವನನ್ನು ಪ್ರಸನ್ನನಾಗಿ ಮಾಡಿ ಕೊಳ್ಳುವದೇ ಈ ಮಂತ್ರದ ಉದ್ದೇಶವು. ಇದರಲ್ಲಿ 'ಸರ್ವವಿಧದಿಂದಲೂ ಎಲ್ಲೆಲ್ಲಿಯೂ ಯಾವಾಗಲೂ ಪರಮೇಶ್ವರನು ನನ್ನನ್ನು ಕಾಪಾಡಲಿ' ಎಂಬ ಪ್ರಾರ್ಥನೆಯು ಕಂಡುಬಂದರೂ ಸ್ತೋತ್ರವನ್ನು ಇಂಥಿಂಥ ವಿಶೇಷವಾದ ಇಷ್ಟಕಾಮ್ಯಾರ್ಥಕ್ಕಾಗಿ ಎಂದು ಸಂಕಲಮಾಡಿಕೊಂಡು ಕೆಲವರು ಉಪ ಯೋಗಿಸುವದುಂಟು. ಸರ್ವಕಾಮಗಳನ್ನೂ ನೆರವೇರಿಸುವ ಈಶ್ವರನನ್ನು ಇಂಥದ್ದೊಂದು ಕಾಮವನ್ನು ಸಲ್ಲಿಸಬೇಕೆಂದು ಕೇಳಿಕೊಳ್ಳುವದು ಕಡಿಮೆಯ ಅಂತಸ್ತಿನ ಪ್ರಾರ್ಥನೆಯೆಂದು ಹೇಳಬೇಕಾದದ್ದೇ ಇಲ್ಲ. ಇದಕ್ಕಿಂತಲೂ ಮೇಲಿನ ಅಂತಸ್ತನ್ನು ಏರಲಾರದವರು ತಮ್ಮ ಬೇಡಿಕೆಯನ್ನು ಪರಮೇಶ್ವರನಲ್ಲಿ ಮಾಡುವದು ತಪ್ಪಲ್ಲ. ಯಾರು ಪರಮೇಶ್ವರನ ನಿಜವಾದ ಭಕ್ತಿಯನ್ನು ಪಡೆದಿರುವರೋ ಅವರು ಪರಮೇಶ್ವರನಲ್ಲಿ 'ಇಂಥದ್ದೊಂದು ಇಷ್ಟವನ್ನು ಈಡೇರಿಸಿದರೆ ನಿನ್ನ ಸ್ತೋತ್ರವನ್ನು ಮಾಡುವೆನು' ಎಂಬಂಥ ವ್ಯಾಪಾರದ ಕೃತ್ಯವನ್ನು ಎಂದಿಗೂ ಕೈಕೊಳ್ಳಲಾರರು. ಅವರಿಗೆ ಪರಮೇಶ್ವರನ ಪ್ರೀತಿಯೊಂದೇ ಬೇಕಾಗಿರುವದು ; ಶ್ರದ್ಧಾಭಕ್ತಿಯಿಂದ ಆತನ ಸ್ಮರಣೆಯನ್ನು ಮಾಡುವದರಿಂದಾಗುವ ಆನಂದವೊಂದೇ ಅವರಿಗೆ ಸಾಕಾಗಿರುತ್ತದೆ.

೮. **ಅಂಗನ್ಯಾಸ.** ಇಲ್ಲಿ 'ಓಂ ಓಂ ರಾಂ ಸರ್ವಶಕ್ತಿಧಾಮ್ನೇ ಅಂಗುಷ್ಠಾಭ್ಯಾಂ ನಮಃ' ಎಂದುಮುಂತಾಗಿ ಓಂಕಾರ

ಪೂರ್ವಕವಾಗಿ ಷಡಕ್ಷರಿಯ ಭಾಗಗಳನ್ನೂ ಬೀಜಾಕ್ಷರಗಳನ್ನೂ ಪರಮಾತ್ಮನ ಬೇರೆಬೇರೆಯ ಬ್ರಹ್ಮಮೂರ್ತಿಗಳ ನಾಮಧೇಯವನ್ನೂ ಕರನ್ಯಾಸದಲ್ಲಿಯೂ ಹೃದಯಾದಿನ್ಯಾಸದಲ್ಲಿಯೂ ಉಪಯೋಗಿಸುವದು ಕೆಲವರಲ್ಲಿ ಸಂಪ್ರದಾಯ ವಿದೆ. ಇದರ ರಹಸ್ಯವನ್ನು ಮಂತ್ರವೇತ್ತರಿಂದಲೇ ತಿಳಿದುಕೊಳ್ಳಬೇಕು. ಇಲ್ಲದಿದ್ದರೆ ಬರಿಯ ಷಡಕ್ಷರನ್ಯಾಸದಿಂದಲೇ ತೃಪ್ತರಾಗಬಹುದು. ಸ್ತೋತ್ರದಲ್ಲಿ ''ಷಡಕ್ಷರನ್ಯಾಸಸಮಾಹಿತಾತ್ಮಾ'' (ಷಡಕ್ಷರನ್ಯಾಸದಿಂದ ಚಿತ್ತಸಮಾಧಾನವನ್ನು ಹೊಂದಿ ಶಿವಕವಚವನ್ನು ಪಠಿಸಬೇಕು) ಎಂದೇ ಇರುವದರಿಂದ ಅಷ್ಟರಿಂದಲೇ ಫಲವಾಗುವದರಲ್ಲಿ ಸಂಶಯವಿಲ್ಲ.

೯. **ದಿಗ್ಬಂಧ.** 'ಓಂಭೂರ್ಭುವಃ ಸ್ವರೋಮ್'' ಎಂದು ದಿಗ್ಬಂಧವನ್ನು ಮಾಡಬೇಕು. ಓಂಕಾರವೂ ವ್ಯಾಹೃತಿಗಳೂ ಸರ್ವವ್ಯಾಪಿಯಾದ ಪರಮಾತ್ಮನನ್ನೇ ಹೇಳುವದರಿಂದ ಅವುಗಳ ಸ್ಮರಣೆಯಿಂದ ಯಾವ ದಿಕ್ಕಿನಲ್ಲಿಯೂ ನಮಗೆ ವಿರೋಧಿಯಾದ ಪ್ರತಿಬಂಧಕಸಾಮಗ್ರಿಗೆ ಎಡೆಯಿಲ್ಲದೆ ಹೋಗುವದು. ಆದ್ದರಿಂದ ಇದಕ್ಕೆ ದಿಗ್ಬಂಧವೆಂದು ಹೆಸರು.

ಇದುವರೆಗೆ ಹೇಳಿದ್ದು ಶಿವಕವಚಕ್ಕೆ ಪೀಠಿಕಾಭಾಗವು. ಶಿವಕವಚದಲ್ಲಿಯೇ ಇವಿಷ್ಟೂ ಸೂಚಿತವಾಗಿದ್ದರೂ ಪುರಶ್ಚರಣವಿದ್ಯೆಯನ್ನು ಬಲ್ಲವರು ತಾಂತ್ರಿಕ ರೀತಿಯಿಂದ ಮೇಲೆ ಹೇಳಿದ ನ್ಯಾಸಾದಿಗಳನ್ನು ಜೋಡಿಸಿರುತ್ತಾರೆ. ಈಚೆಗೆ ಈ ನ್ಯಾಸಾದಿಗಳ ರಹಸ್ಯವನ್ನು ಬಲ್ಲವರ ಸಂಖ್ಯೆಯು ತೀರ ಕಡಿಮೆಯಾಗುತ್ತಾ ಬಂದಿರುವದರಿಂದ ಬರಿಯ ಅಕ್ಷರೋಚ್ಚಾರಣೆಯೇ ಈ ಭಾಗದಲ್ಲಿ ನಿಂತಿರುವಂತಾಗಿದೆ ; ಆ ಉಚ್ಚಾರಣೆಯೂ ಅಲ್ಪಜ್ಞರ ಆಲಸ್ಯ, ಅನಾದರ - ಮುಂತಾದ ಕಾರಣಗಳಿಂದ ಅಪಪಾಠವಾಗಿಬಿಟ್ಟಿದೆ. ಆದ್ದರಿಂದ ಸರಿಯಾದ ಸಂಪ್ರದಾಯವನ್ನು ಬಲ್ಲ ಗುರುವು ಸಿಕ್ಕದೆ ಇದ್ದರೆ ಇವುಗಳನ್ನು ಹೇಳಿಕೊಳ್ಳದೆ ಇದ್ದರೂ ಬಾಧಕವಿಲ್ಲ. ಮುಖ್ಯವಾಗಿ ತನ್ನಲ್ಲಿಯೂ ಹೊರಗೂ ಎಲ್ಲೆಲ್ಲಿಯೂ ಮಂತ್ರವನ್ನೂ ಅದರ ಅಧಿದೇವತೆಯನ್ನೂ ವ್ಯಾಪಿಸಿರುವಂತೆ ಭಾವಿಸಿಕೊಳ್ಳಬೇಕು ; ಎಲ್ಲೆಲ್ಲಿಯೂ ಈಶ್ವರಭಾವನೆಯಿಂದ ಮನಸ್ಸಿಗೆ ಶಾಂತಿಸಮಾಧಾನಗಳನ್ನು

ತಂದುಕೊಂಡು ಸ್ತೋತ್ರವನ್ನು ಹೇಳಬೇಕು - ಎಂಬುದೇ ಇಲ್ಲಿ ರಹಸ್ಯವು. ಇದು ಶಿವಕವಚದ ಮೊದಲನೆಯ ನಾಲ್ಕು ಶ್ಲೋಕಗಳ ಅಭಿಪ್ರಾಯದಿಂದ ವ್ಯಕ್ತವಾಗುತ್ತದೆ. ಅರ್ಥಾನುಸಂಧಾನವಿಲ್ಲದೆ ಶ್ರದ್ಧೆಯಿಂದ ಪಠಿಸುವವರಿಗೂ ಸ್ವಲ್ಪ ಪ್ರಯೋಜನವುಂಟಾದರೂ ಅರ್ಥಾನುಸಂಧಾನದಿಂದ ಸ್ತೋತ್ರಕ್ಕೆ ವೀರ್ಯವು ಬರುತ್ತದೆ ; ಅದು ಮನಸ್ಸಿನಮೇಲೆ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಆಗಲೇ ನಿಜವಾದ ಉಪಾಸನೆಯ ಸವಿಯು ಸಾಧಕನಿಗೆ ತಿಳಿಯಬರುತ್ತದೆ.

ಈ ಸ್ತೋತ್ರವು ಸ್ಕಾಂದಮಹಾಪುರಾಣದ ಬ್ರಹ್ಮೋತ್ತರಖಂಡದ ಹನ್ನೆರಡನೆಯ ಅಧ್ಯಾಯದಲ್ಲಿರುತ್ತದೆ. ಅದರ ಹಿಂದಿನ ಅಧ್ಯಾಯದಲ್ಲಿ **ಋಷಭ ಯೋಗೀಶ್ವರರು ಭದ್ರಾಯು**ವೆಂಬ ರಾಜಕುಮಾರನಿಗೆ ಬಗೆ ಬಗೆಯ ಧರ್ಮೋಪದೇಶವನ್ನು ಮಾಡಿದ ಬಳಿಕ ಶಿವಕವಚವನ್ನು ಹೇಳುವದಕ್ಕೆ ಪೀಠಿಕೆಯಾಗಿ ಹೇಳಿರುವದೇನೆಂದರೆ :

**ಅಥಾಪರಂ ಸರ್ವಪುರಾಣಗುಹ್ಯಂ**
**ನಿಶ್ಶೇಷಪಾಪೌಘಹರಂ ಪವಿತ್ರಮ್** ।
**ಜಯಪ್ರದಂ ಸರ್ವವಿಪತ್ಪ್ರಮೋಚನಂ**
**ವಕ್ಷ್ಯಾಮಿ ಶೈವಂ ಕವಚಂ ಹಿತಾಯ ತೇ** ॥

**ಭಾವಾರ್ಥ :-** ''ಇನ್ನೊಂದು ವಿಷಯವನ್ನು ಹೇಳುತ್ತೇನೆ. ಅದು ಪುರಾಣಗಳಲ್ಲೆಲ್ಲ ರಹಸ್ಯವಾದದ್ದು, ಪಾಪಗಳ ರಾಶಿಯನ್ನೆಲ್ಲ ಸ್ವಲ್ಪವೂ ಉಳಿಯದಂತೆ ನಾಶಪಡಿಸಬಲ್ಲದ್ದು, ಪವಿತ್ರವಾದದ್ದು, ಜಯಪ್ರದವಾದದ್ದು, ಎಲ್ಲಾ ಬಗೆಯ ಆಪತ್ತುಗಳಿಂದಲೂ ಬಿಡುಗಡೆ ಮಾಡತಕ್ಕದ್ದು. ಇಂಥ ಶಿವಕವಚವನ್ನು ನಿನ್ನ ಹಿತಕ್ಕಾಗಿ ಹೇಳುತ್ತೇನೆ.''

ಎಷ್ಟೇ ಧರ್ಮಗಳನ್ನು ಮಾಡಲಿ, ಮನುಷ್ಯನು ಕೇವಲ ತನ್ನ ಶಕ್ತಿಯಿಂದಲೇ ಧರ್ಮದ ಪೂರ್ಣಫಲವನ್ನು ಪಡೆಯುವದಕ್ಕೆ ಆಗುವದಿಲ್ಲ. ಧರ್ಮಗಳಿಗೆಲ್ಲ ಮೂಲವಾಗಿರುವ, ಅವುಗಳನ್ನು ಆಚರಿಸುವಷ್ಟು ಉತ್ಸಾಹವನ್ನೂ ಧೈರ್ಯವನ್ನೂ ಬಲವನ್ನೂ ಕೊಡಬಲ್ಲ, ಅವುಗಳನ್ನು ಅನುಷ್ಠಾನಮಾಡಿದವರಿಗೆ ತಕ್ಕ ಫಲವನ್ನೂ

ಕೊಡಬಲ್ಲ, ಸರ್ವಜ್ಞನೂ ಸರ್ವಶಕ್ತನೂ ಕರುಣಾಮಯನೂ ಪ್ರೇಮಮೂರ್ತಿಯೂ ಆದ ಪರಮೇಶ್ವರನ ಸಹಾಯದಿಂದಲೇ ಮನುಷ್ಯನು ಧರ್ಮವನ್ನು ಅನುಷ್ಠಾನಮಾಡಲು ಶಕ್ತನಾಗುತ್ತಾನೆ. ಇದನ್ನು ಸಕಲಪುರಾಣಗಳಲ್ಲಿಯೂ ಹೇಳಿರುತ್ತದೆ ; ಈ ವಿಷಯವನ್ನು ಮನಗಾಣದಿದ್ದರೆ ನಾವು ಮಾಡುವ ಪುರಾಣ ಶ್ರವಣವು ವ್ಯರ್ಥ ; ಶಿವನನ್ನು ಶರಣುಹೊಕ್ಕರೆ ಉತ್ತಮವಾದ ಒಂದು ಕವಚವನ್ನು ಧರಿಸಿ ಯುದ್ಧಕ್ಕೆ ನಿಂತಂತೆ. ಜೀವನಸಂಗ್ರಾಮದಲ್ಲಿ ಮನುಷ್ಯನನ್ನು ಬಗೆಬಗೆಯ ಪಾಪಪ್ರವೃತ್ತಿಗಳೂ ಅವುಗಳಿಗೆ ಉತ್ತೇಜಕವಾದ ವಿಷಯಗಳೂ ಎದುರಿಸುತ್ತಿರುವವು ; ಅವುಗಳನ್ನೆಲ್ಲ ತೊಲಗಿಸುವದಕ್ಕೆ ಮಂಗಲಕರವಾದ ಈ ಕವಚವನ್ನು ಧರಿಸುವಾತನೇ ಶಕ್ತನು. ಮನುಷ್ಯನು ತನ್ನ ಈಗಿನ ಸ್ವಭಾವದಿಂದ ಅತ್ಯಂತ ಅಶುಚಿಯಾಗಿರುತ್ತಾನೆ, ಆತನ ಚಿತ್ತದಲ್ಲಿ ಕಶ್ಮಲವಾದ ಪಾಪವಾಸನೆಗಳು ಮೆತ್ತಿಕೊಂಡಿರುತ್ತವೆ. ಆದರೆ ಶಿವನನ್ನು ಶರಣುಹೊಕ್ಕರೆ ಕೂಡಲೆ ಇವುಗಳೆಲ್ಲ ತೊಳೆದುಹೋಗಿ ಚಿತ್ತವು ಶುದ್ಧವಾಗುತ್ತದೆ. ಅಂಥ ಪವಿತ್ರವಾದದ್ದು, ಶಿವನ ಶರಣಾಗತಿಯು. ಈ ಶಿವಕವಚವನ್ನು ಧರಿಸಿದವನಿಗೆ ಎಲ್ಲೆಲ್ಲಿಯೂ ಜಯವೇ, ಇವನಲ್ಲಿ ಅಂಥ ಧೈರ್ಯವು ಉಕ್ಕೇರುವದು ; ಇವನಿಗೆ ಯಾವ ಬಗೆಯ ವಿಪತ್ತುಗಳೂ ಸಂಭವಿಸುವದಿಲ್ಲ. ಲೋಕದಲ್ಲಿರುವ ವಿಪತ್ತುಗಳೆಲ್ಲವೂ ಶಿವನ ಕವಚವನ್ನು ಧರಿಸದಿರುವದರಿಂದಲೇ, ಎಂದರೆ ಶಿವಭಾವನೆಯಿಲ್ಲದಿರುವದರಿಂದಲೇ, ನಮಗೆ ಬಂದೊದಗುತ್ತಿರುವವು. ಆದ್ದರಿಂದ ಶಿವಕವಚವನ್ನು ಧರಿಸಿ ಆತ್ಮರಕ್ಷಣೆಯನ್ನು ಮಾಡಿಕೊಳ್ಳುವ ಬಗೆಯನ್ನು ಹೇಳುತ್ತೇನೆ - ಎಂದು ಋಷಭಯೋಗೀಶ್ವರರು ಹೇಳಿರುತ್ತಾರೆ.

## ೧೦. ಧ್ಯಾನ

೧೦. ಶಿವಕವಚವನ್ನು ಪಠಿಸುವ ಮುಂಚೆ ಧ್ಯಾನವನ್ನು ಅವಶ್ಯವಾಗಿ ಮಾಡಬೇಕು. ಈ ಕವಚದಲ್ಲಿರುವ ೨೭ ಶ್ಲೋಕಗಳಲ್ಲಿ ಮೊದಲನೆಯ ನಾಲ್ಕರಲ್ಲಿ ಈ ಧ್ಯಾನವನ್ನು ಹೇಳಿರುತ್ತದೆ.

**ಋಷಭ ಉವಾಚ -**

**ನಮಸ್ಕೃತ್ವಾ ಮಹಾದೇವಂ ವಿಶ್ವವ್ಯಾಪಿನಮೀಶ್ವರಮ್ ।**
**ವಕ್ಷ್ಯೇ ಶಿವಮಯಂ ವರ್ಮ ಸರ್ವರಕ್ಷಾಕರಂ ನೃಣಾಮ್ ॥೧॥**

೧. 'ಮಹಾದೇವನನ್ನು, ವಿಶ್ವವನ್ನೇ ವ್ಯಾಪಿಸಿರುವ ಈಶ್ವರನನ್ನು, ನಮಸ್ಕರಿಸಿ ಜನರಿಗೆ ಸರ್ವರಕ್ಷೆಯನ್ನೂ ಅನುಗೊಳಿಸುವ ಶಿವಮಯಕವಚವನ್ನು ಹೇಳುತ್ತೇನೆ.''

ಋಷಭಯೋಗೀಶ್ವರರು ಬರಿಯ ಉಪನ್ಯಾಸಕರಲ್ಲ ; 'ಬಹಳ ಚೆನ್ನಾಗಿ ಮಾತನಾಡಿದರು' ಎಂದು ಕೇಳಿದವರ ಮೆಚ್ಚುಗೆಯನ್ನು ಹೊಂದಿ ತೃಪ್ತರಾಗ ಬೇಕೆಂದು ಬಯಸುವ ವಾಗ್ಮಿಗಳಲ್ಲ. ಅವರು ತಮ್ಮ ಅನುಭವದಲ್ಲಿದ್ದ ಶಿವಕವಚವನ್ನು ರಾಜಪುತ್ರನಾದ ಭದ್ರಾಯುವಿಗೆ ಕರುಣೆಯಿಂದ ಉಪದೇಶಿಸಿ ರುತ್ತಾರೆ. ಇದನ್ನು ಧರಿಸುವದೆಂದರೆ ಪರಮೇಶ್ವರನ ಧ್ಯಾನಪೂರ್ವಕವಾಗಿಯೇ ಧರಿಸಬೇಕು - ಎಂಬುದನ್ನು ಅವರು ಬರಿಯ ಬಾಯಿಮಾತಿನಿಂದ ಹೇಳದೆ ತಾವೇ ಮೊದಲು ಪರಮೇಶ್ವರನನ್ನು ಧ್ಯಾನಮಾಡಿ ಉಪದೇಶಿಸಿರುತ್ತಾರೆ. ಆತನು ಮಹಾದೇವನು, ದೇವತೆಗಳಿಗೆಲ್ಲ ದೇವನು; ವಿಶ್ವವ್ಯಾಪಿಯು, ಸಮಸ್ತಲೋಕ ಗಳನ್ನೂ ಅಂತರ್ಯಾಮಿಯಾಗಿ ವ್ಯಾಪಿಸಿಕೊಂಡಿರುವಾತನು ಈಶ್ವರನು, ಸರ್ವಸ್ವತಂತ್ರನು. ಇಂಥವನನ್ನು ಧ್ಯಾನಿಸಿದವರಿಗೆ ಮಾತ್ರ ಶಿವಮಯವಾದ ಈ ಕವಚದ ಸ್ವರೂಪವು ತಿಳಿಯಬರುವದು.

**ಶುಚೌ ದೇಶೇ ಸಮಾಸೀನೋ ಯಥಾವತ್ಕಲ್ಪಿತಾಸನಃ ।**
**ಜಿತೇನ್ದ್ರಿಯೋ ಜಿತಪ್ರಾಣಶ್ಚಿನ್ತಯೇಚ್ಛಿವಮವ್ಯಯಮ್ ॥೨॥**

೨. ''ಶುದ್ಧವಾದ ಸ್ಥಳದಲ್ಲಿ ನಿಯಮಪೂರ್ವಕವಾಗಿ ಆಸನವನ್ನು ಹಾಕಿ ಕುಳಿತುಕೊಂಡು ಜಿತೇಂದ್ರಿಯನಾಗಿ ಪ್ರಾಣಾಯಾಮವನ್ನು ಮಾಡಿ ಅವ್ಯಯ ನಾದ ಶಿವನನ್ನು ಧ್ಯಾನಿಸಬೇಕು.''

ಯಾರು ಪರಮೇಶ್ವರನ ಸ್ವರೂಪದಲ್ಲಿ ಅಭೇದನಿಷ್ಠೆಯನ್ನು ಹೊಂದಿರು ವರೋ ಅಂಥ ಮಹಾತ್ಮರಿಗೆ ಹೊರಗಿನ ಸಹಾಯವೇನೂ ಬೇಕಿರುವ ದಿಲ್ಲ.

ವಿಷಯಕಲುಷಿತಚಿತ್ತರಾದ ನಮ್ಮಂಥವರಿಗೆ ಹೊರಗಿನ ಸನ್ನಿವೇಶಗಳು ಶುಚಿಯಾಗಿ ಸುಂದರವಾಗಿ ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತಿದ್ದರೆ ಮಾತ್ರ ಧ್ಯಾನವು ಸುಲಭವಾಗಿ ವಶವಾಗುವದು. ಆದ್ದರಿಂದ ದೇಶಶುದ್ಧಿ, ಕಾಲಶುದ್ಧಿ, ಆಸನಶುದ್ಧಿ, ಇಂದ್ರಿಯಶುದ್ಧಿ - ಮುಂತಾದ ಬಹಿರಂಗಸೌಕರ್ಯಗಳನ್ನು ತತ್ಕಾಲಕ್ಕಾದರೂ ಹೊಂದಿಸಿಕೊಳ್ಳಬೇಕು. ಮನೆಯಲ್ಲಿ ಒಂದು ಧ್ಯಾನಮಂದಿರವನ್ನು ಮಾಡಿಕೊಂಡು, ಸ್ಥಳವನ್ನು ಸಾರಿಸಿ ಗುಡಿಸಿ ರಂಗವಲ್ಲಿಯೇ ಮುಂತಾದವುಗಳಿಂದ ಅಲಂಕರಿಸಿಕೊಂಡು ಧೂಪಾದಿಗಳಿಂದ ಮನೋಹರವಾಗುವಂತೆ ಮಾಡಿಕೊಳ್ಳಬೇಕು. ಸಂಧ್ಯಾಕಾಲವೇ ಮುಂತಾದ ಪ್ರಸನ್ನಕಾಲವನ್ನು ಆರಿಸಿಕೊಳ್ಳಬೇಕು. ಪದ್ಮಾಸನವೇ ಮುಂತಾದವುಗಳಲ್ಲಿ ಸ್ಥಿರಸುಖವಾದ ಒಂದು ಆಸನವನ್ನು ಅಭ್ಯಾಸದಿಂದ ಅಳವಡಿಸಿಕೊಳ್ಳಬೇಕು. ಇಂದ್ರಿಯಗಳ ಚಾಂಚಲ್ಯವನ್ನು ಸ್ವಲ್ಪ ಹೊತ್ತಿನವರೆಗಾದರೂ ತಡೆದುಕೊಳ್ಳಬೇಕು. ಪ್ರಾಣಾಯಾಮವನ್ನು ಮನಃಸಮಾಧಾನಾರ್ಥವಾಗಿ ಸಾಧನವಾಗಿ ಉಪಯೋಗಿಸಿ ಕೊಳ್ಳಬೇಕು.

**ಹೃತ್ಪುಂಡರೀಕಾನ್ತರಸನ್ನಿವಿಷ್ಟಂ**
**ಸ್ವತೇಜಸಾ ವ್ಯಾಪ್ತನಭೋಽವಕಾಶಮ್ ।**
**ಅತೀನ್ದ್ರಿಯಂ ಸೂಕ್ಷ್ಮಮನನ್ತಮಾದ್ಯಂ**
**ಧ್ಯಾಯೇತ್ಪರಾನನ್ದಮಯಂ ಮಹೇಶಮ್ ॥ ೩ ॥**

೩. "ಹೃದಯಕಮಲದ ನಡುವೆ ಕುಳಿತಿರುವನಾಗಿಯೂ ತನ್ನ ಕಾಂತಿಯಿಂದ ಆಕಾಶವನ್ನೆಲ್ಲ ವ್ಯಾಪಿಸಿರುವನಾಗಿಯೂ ಇಂದ್ರಿಯಗಳನ್ನು ಮೀರಿರುವ ಸೂಕ್ಷ್ಮನಾಗಿಯೂ ಅಂತರಹಿತನಾಗಿಯೂ ಸಕಲಕ್ಕೂ ಕಾರಣನಾಗಿಯೂ ಇರುವ ಪರಮಾನಂದಮಯನಾದ ಮಹೇಶ್ವರನನ್ನು ಧ್ಯಾನಿಸಬೇಕು."

ಪರಮೇಶ್ವರನು ಸಗುಣನೂ ನಿರ್ಗುಣನೂ ಆಗಿರುತ್ತಾನೆ; ಸಾಕಾರನೂ ನಿರಾಕಾರನೂ ಆಗಿರುತ್ತಾನೆ. ಅವನು ಸ್ವರೂಪದಿಂದ ನಿರ್ಗುಣನಿರಾಕಾರನೇ ಆಗಿರುವನಾದರೂ, ಭಕ್ತರ ಅನುಗ್ರಹಕ್ಕಾಗಿ ಸಗುಣಸಾಕಾರರೂಪವನ್ನು ಲೀಲಾಮಾತ್ರದಿಂದ ಧರಿಸಬಲ್ಲವನಾಗಿರುವನು.

# ಧ್ಯಾನ

ಪರಮಾತ್ಮನ ಸ್ವರೂಪವು ಮನಸ್ಸಿಗೂ ಸಾಕ್ಷಿಯಾದ ಶುದ್ಧಚೈತನ್ಯ ರೂಪವಾಗಿರುತ್ತದೆ ; ಆ ರೂಪವನ್ನೇ ಧ್ಯಾನಮಾಡುವದಕ್ಕೆ ಆಗದವರು ಶಿವ ಪುರಾಣಾದಿಗಳಲ್ಲಿ ವರ್ಣಿತವಾಗಿರುವ ತಮಗೆ ಇಷ್ಟವಾದ ಒಂದು ಮಂಗಲರೂಪವನ್ನು ಹೃದಯಕಮಲದಲ್ಲಿ ಧ್ಯಾನಿಸಬೇಕು. ಪರಮೇಶ್ವರನು ತನ್ನ ಚೈತನ್ಯಪ್ರಕಾಶದಿಂದ ಸಕಲಭೂತಗಳನ್ನೂ ವ್ಯಾಪಿಸಿರುವ ಆಕಾಶವನ್ನು ಕೂಡ ವ್ಯಾಪಿಸಿರುತ್ತಾನೆ. ಸಾಕಾರರೂಪವನ್ನು ಧ್ಯಾನಿಸುವವರು ತೇಜೋಮಯವಾದ ರೂಪದಿಂದ ಕಾಂತಿಯು ಹೊರಟು ಎಲ್ಲೆಲ್ಲಿಯೂ ವ್ಯಾಪಿಸಿರುವಂತೆ ಕಲ್ಪಿಸಿಕೊಳ್ಳಬೇಕು.

ಪರಮೇಶ್ವರನು ತನ್ನ ಸ್ವರೂಪದಿಂದ ಅತೀಂದ್ರಿಯನಾಗಿರುತ್ತಾನೆ ; ಏಕೆಂದರೆ ಸಕಲ ಇಂದ್ರಿಯಗಳ ಮತ್ತು ಅಂತಃಕರಣದ ವೃತ್ತಿಗಳನ್ನೂ ಆತನ ಚೈತನ್ಯಪ್ರಕಾಶವೇ ಬೆಳಗುತ್ತದೆ. ಸಾಕಾರಧ್ಯಾನಿಗಳು ಪರಮೇಶ್ವರನ ಆಕಾರವು ಇಂದ್ರಿಯವೇದ್ಯವಾದ ಭೂತಗಳ ವಿಕಾರವೆಂದು ಎಂದಿಗೂ ಚಿಂತಿಸಬಾರದು, ಅದು ವಿಜ್ಞಾನಘನವಾದ ಲೀಲಾವಿಗ್ರಹವು - ಎಂದೇ ಚಿಂತಿಸಬೇಕು.

ಯಾವದು ಇಂದ್ರಿಯಗಳಿಗೆ ಗೋಚರವಲ್ಲವೋ ಅದಕ್ಕೆ ಸೂಕ್ಷ್ಮವೆಂದು ಹೆಸರು ; ಪರಮೇಶ್ವರನ ಸ್ವರೂಪವು ಇಂಥದ್ದಾಗಿರುವದರಿಂದ ಸಾಕಾರಧ್ಯಾನದಲ್ಲಿಯೂ ಆತನ ರೂಪವು ಸೂಕ್ಷ್ಮವೆಂದೇ ಭಾವಿಸಬೇಕು. ಆದರೆ ಸೂಕ್ಷ್ಮವೆಂದರೆ ಸಣ್ಣದೆಂದಾಗಲಿ ಅಣುರೂಪವೆಂದಾಗಲಿ ಭಾವಿಸಬಾರದು.

ಪರಮಾತ್ಮನ ಸ್ವರೂಪವು ಅನಂತವಾಗಿರುತ್ತದೆ, ಎಂದರೆ ದೇಶಕಾಲ ನಿಮಿತ್ತಗಳ ಪರಿಚ್ಛೇದವಿಲ್ಲದೆ ಇರುತ್ತದೆ. ದೇಶಕಾಲನಿಮಿತ್ತಗಳೆಲ್ಲವೂ ಮನೋಗೋಚರವಾಗಿರುತ್ತವೆ. ಮನಸ್ಸಿಗೂ ಸಾಕ್ಷಿಯಾಗಿರುವ ಚೈತನ್ಯ ಸ್ವರೂಪವು ಹೇಗೆತಾನೆ ಈ ದೇಶಕಾಲನಿಮಿತ್ತಗಳಿಂದಾದ ಅಳತೆಗೆ ಸಿಕ್ಕೀತು ? 'ಆ ಅಪರಿಚ್ಛಿನ್ನ ರೂಪವೇ ನನ್ನ ಅನುಗ್ರಹಕ್ಕಾಗಿ ಹೃದಯಕಮಲದಲ್ಲಿ ರೂಪುಗೊಂಡಂತೆ ಕುಳಿತಿದೆಯಾದ್ದರಿಂದ ಇದು ನಿಜವಾಗಿಯೂ ಪರಿಚ್ಛಿನ್ನವಾಗಿರುವದಲ್ಲ' ಎಂದು ಸಾಕಾರಚಿಂತಕನೂ ಭಾವಿಸಬೇಕು.

ಪರಮೇಶ್ವರನು ಪರಮಾನಂದಮಯನಾಗಿರುತ್ತಾನೆ. ಅವನಲ್ಲಿ ಸುಖ ದುಃಖಗಳ ಏರುಪೇರುಗಳು ಒಂದಿಷ್ಟೂ ಇರುವದಿಲ್ಲ. ಸುಖದುಃಖಗಳೆಂಬಿವು ಮನಸ್ಸಿನ ವೃತ್ತಿಗಳಾಗಿರುತ್ತವೆ; ಅವಸ್ಥಾತ್ರಯಕ್ಕೆ ಅತೀತವಾಗಿರುವ ಪರಮೇಶ್ವರನ ಶುದ್ಧಚೈತನ್ಯದಲ್ಲಿ ಸುಖದ ಅಥವಾ ದುಃಖದ ಸೋಂಕು ಹೇಗೆ ಇದ್ದೀತು ? ಅಲೆಗಳಿಲ್ಲದ ಮಹಾಶಾಂತಸಮುದ್ರದಂತಿರುವ ಆನಂದಸಾಗರನಾದ ಆ ಪರಮೇಶ್ವರನೇ ನನಗೆ ಈ ರೂಪದಿಂದ ತೋರಿಕೊಳ್ಳುತ್ತಿದ್ದಾನೆ - ಎಂದು ಸಾಕಾರ ಧ್ಯಾನಿಯು ಯೋಚಿಸಿಕೊಳ್ಳಬೇಕು.

ಇಂಥ ಪರಮೇಶ್ವರನ ರೂಪವನ್ನು ಯಥಾಶಕ್ತಿಯಾಗಿ ಸ್ವರೂಪವಾದ ನಿರ್ಗುಣನಿರಾಕಾರರೂಪದಲ್ಲಿಯೋ ಲೀಲಾವಿಗ್ರಹದಿಂದೊಡಗೂಡಿದ ಸಗುಣ ಸಾಕಾರರೂಪದಲ್ಲಿಯೋ ಮೊದಲು ಚಿಂತಿಸಿಕೊಳ್ಳಬೇಕು. ಆಮೇಲೆಯೇ ಈ ಶಿವಕವಚವನ್ನು ಪಠಿಸಬೇಕು.

**ಧ್ಯಾನಾವಧೂತಾಖಿಲಕರ್ಮಬಂಧ-**
**ಶ್ಚಿರಂ ಚಿದಾನನ್ದನಿಮಗ್ನಚೇತಾಃ ।**
**ಷಡಕ್ಷರನ್ಯಾಸಸಮಾಹಿತಾತ್ಮಾ**
**ಶೈವೇನ ಕುರ್ಯಾತ್ ಕವಚೇನ ರಕ್ಷಾಮ್ ॥ ೪ ॥**

೪. "ಧ್ಯಾನದಿಂದ ಕರ್ಮಬಂಧವನ್ನೆಲ್ಲವನ್ನೂ ಹೋಗಲಾಡಿಸಿ ಕೊಂಡು, ಬಹುಕಾಲ ಚಿದಾನಂದದಲ್ಲಿ ಚಿತ್ತವನ್ನು ಮುಳುಗಿಸಿದ್ದ ಬಳಿಕ ಷಡಕ್ಷರನ್ಯಾಸದಿಂದ ಚಿತ್ತಸಮಾಧಾನವನ್ನು ಹೊಂದಿ ಶಿವಕವಚದಿಂದ ರಕ್ಷೆಯನ್ನು ಮಾಡಿಕೊಳ್ಳಬೇಕು."

ಪರಮೇಶ್ವರನ ಧ್ಯಾನವನ್ನು ಯಥಾವತ್ತಾಗಿ ಮಾಡಿದರೆ ಕರ್ಮದ ಕಟ್ಟು ಕಳಚಿಕೊಳ್ಳುವದು. ಬಹುಕಾಲದವರೆಗೆ ನಾವು ವ್ಯವಹಾರದಲ್ಲಿ 'ನಾನು', 'ನಾನು' - ಎಂದು ಚಿಕ್ಕದೊಂದು ಅಹಂಕಾರೋಪಾಧಿಯ ಚಿದಾಭಾಸರೂಪವನ್ನೇ ಅಭಿಮಾನದಿಂದ ನಂಬಿಕೊಂಡಿರುತ್ತೇವೆ. ಇದರಿಂದ ನಮಗೆ ವ್ಯವಹಾರವು ಒಂದು ಭಾರವಾದ ಹೊರೆಯಾಗಿರುತ್ತದೆ. ಆದರೆ ಸರ್ವದೇಹಕರಣಸಾಕ್ಷಿಯಾಗಿರುವ ಆ

ಪರಮಾತ್ಮನಲ್ಲಿ ಚಿತ್ತವನ್ನು ಇಟ್ಟು ನಮ್ಮ ಅಹಂತೆಯನ್ನು ಮರೆತರೆ ಕರ್ಮದ ಕಟ್ಟು ತಾನೇ ಬಿಚ್ಚಿಕೊಂಡಂತಾಗುವದು. ನಮ್ಮ ಮೇಲಿಂದ ಒಂದು ದೊಡ್ಡ ಹೊರೆಯನ್ನು ಕೆಳಕ್ಕೆ ಇಳಿಸಿಕೊಂಡಂತೆ ಆಗುವದು.

ಧ್ಯಾನದಲ್ಲಿ ಚೈತನ್ಯರೂಪವಾದ ಸುಖದುಃಖಗಳ ಏರುಪೇರಿಲ್ಲದ ಪರಮಾತ್ಮನ ಆನಂದದಲ್ಲಿ ನಾವು ಮುಳುಗುವದರಿಂದ ನಮಗೆ ಒಂದು ಬಗೆಯ ಅಮೃತದ ಸೇಕವನ್ನು ಮಾಡಿದಂತೆ ಆಗುತ್ತದೆ. ಧ್ಯಾನದಿಂದ ಹೊರ ಮುಖರಾದಮೇಲೂ ನಮ್ಮ ಚಿತ್ತದಲ್ಲಿಯೂ ದೇಹೇಂದ್ರಿಯಗಳಲ್ಲಿಯೂ ಒಂದು ಬಗೆಯ ಪ್ರಸನ್ನತೆಯು ತೋರಿಬರುತ್ತದೆ. ನಮ್ಮ ನರಗಳಿಗೆ ಅಮೃತವನ್ನು ಬಳಿದಂತೆ ಒಂದು ಬಗೆಯ ಪುಷ್ಟಿಯು ಬರುತ್ತದೆ.

ಆ ಪರಮಾತ್ಮನ ಷಡಕ್ಷರಮಂತ್ರ ಪ್ರಭಾವವನ್ನು ಅಕ್ಷರನ್ಯಾಸಮೂಲಕವಾಗಿ ಮೈಕೈಯಲ್ಲೆಲ್ಲ ವ್ಯಾಪಿಸುವಂತೆ ಮಾಡಿಕೊಳ್ಳಬೇಕು. ಆಗ ಒಳಗೂ ಹೊರಗೂ ಶಿವಮಯವಾದ ಭಾಸವೊಂದು ಮನಸ್ಸಿಗೆ ಹತ್ತುವದು. ಶಿವ ಕವಚಧಾರಣೆಗೆ ಆಗ ನಾವು ಸಿದ್ಧರಾದಂತಾಯಿತು.

## ೧೧. ಕವಚ

**ಮಾಂ ಪಾತು ದೇವೋऽಖಿಲದೇವತಾತ್ಮಾ**
**ಸಂಸಾರಕೂಪೇ ಪತಿತಂ ಗಭೀರೇ ।**
**ತನ್ನಾಮ ದಿವ್ಯಂ ವರಮಂತ್ರಮೂಲಂ**
**ಧುನೋತು ಮೇ ಸರ್ವಮಘಂ ಹೃದಿಸ್ಥಮ್ ॥೫॥**

೫. ''ಸಮಸ್ತದೇವತಾತ್ಮನಾದ ಆ ದೇವನು ಆಳವಾದ ಸಂಸಾರಕೂಪದಲ್ಲಿ ಬಿದ್ದಿರುವ ನನ್ನನ್ನು ಕಾಪಾಡಲಿ! ಶ್ರೇಷ್ಠವಾದ ಮಂತ್ರಗಳಿಗೆ ಮೂಲವಾದ ಆತನ ದಿವ್ಯನಾಮವು ನನ್ನ ಹೃದಯದಲ್ಲಿರುವ ಪಾಪವನ್ನೆಲ್ಲ ತೊಳೆದುಹಾಕಲಿ!''

ಶಿವಕವಚದಲ್ಲಿ ಧ್ಯಾನಿಸುತ್ತಿರುವ ದೇವನನ್ನು ಅನೇಕದೇವತೆಗಳ ಜೊತೆಗೆ ಈತನೂ ಒಬ್ಬನೆಂದು ಭಾವಿಸಬಾರದು. ಈತನು ಸಕಲದೇವತಾತ್ಮನು ; ಎಂದರೆ ಮರದಲ್ಲಿಯೇ ಕೊಂಬೆಗಳೂ ಕವಲುಗಳೂ ಅಡಕವಾಗಿರುವಂತೆ ಈತನ ವಿಭೂತಿಗಳೇ ಮಿಕ್ಕ ದೇವತೆಗಳಾಗಿರುವರು. ಈ ಪರಮೇಶ್ವರನ ಒಂದೊಂದು ಶಕ್ತಿ ವಿಶೇಷವನ್ನು ಹೊರಪಡಿಸುವ ವಿಭೂತಿಯನ್ನು ಒಂದೊಂದು ದೇವತೆಯೆಂದು ನಾವು ಭಾವಿಸಿರುವೆವು. ನಿಜವಾಗಿ ಸಕಲದೇವತೆಗಳಿಗೂ ಇವನೇ ಆತ್ಮನು.

ಈ ಆತ್ಮನ ಸ್ವರೂಪವನ್ನು ಅರಿತುಕೊಳ್ಳಲಾರದೆಯೇ ನಾವು ಅವಿದ್ಯಾ ಕಾಮಕರ್ಮಗಳ ಪಾಲಾಗಿ ಜನನಮರಣಜರಾರೋಗಮಯವಾದ ಸಂಸಾರವೆಂಬ ಆಳವಿಲ್ಲದ ಗುಂಡಿಯಲ್ಲಿ ಬಿದ್ದಿರುವೆವು. 'ಆತನ ಸ್ಮರಣೆಯು ನನ್ನನ್ನು ಈ ಗುಂಡಿಯಿಂದ ಮೇಲಕ್ಕೆ ಎತ್ತಲಿ !' - ಎಂದು ನಾವು ಹೃತ್ಪೂರ್ವಕವಾಗಿ ಹಂಬಲಿಸಬೇಕು.

ಆತನ ನಾಮಮಂತ್ರವನ್ನು ಉಚ್ಚಾರಮಾಡಿದಮಾತ್ರದಿಂದ ಅಂತಃಕರಣ ದಲ್ಲಿರುವ ಸಕಲಪಾಪಗಳೂ ನಾಶವಾಗುವವು. ಆತನ ನಾಮವು ದಿವ್ಯವಾಗಿರುವದು, ವಿಷಯನಾಮಗಳಂತೆ ಪ್ರಕೃತಿಯ ಲೋಕಕ್ಕೆ ಸಂಬಂಧಪಟ್ಟದ್ದಲ್ಲ; ಅದರ ಪ್ರಭಾವವು ನಮ್ಮ ಮೇಲೆ ಆದಂತೆಲ್ಲ ಪಾಪವಾಸನೆಗಳು ಕಳೆಯುವವು. ಆ ನಾಮಸ್ಮರಣೆಯಲ್ಲಿ ನಮಗೆ ನಿಜವಾದ ಆಸೆಯು ಹುಟ್ಟಬೇಕು.

**ಸರ್ವತ್ರ ಮಾಂ ರಕ್ಷತು ವಿಶ್ವಮೂರ್ತಿ-**
**ರ್ಜ್ಯೋತಿರ್ಮಯಾನನ್ದಘನಶ್ಚಿದಾತ್ಮಾ ।**
**ಅಣೋರಣೀಯಾನುರುಶಕ್ತಿರೇಕಃ**
**ಸ ಈಶ್ವರಃ ಪಾತು ಭಯಾದಶೇಷಾತ್ ॥ ೬ ॥**

೬. '' ವಿಶ್ವಮೂರ್ತಿಯೂ ಜ್ಯೋತಿಸ್ವರೂಪನೂ ಆನಂದದ ಗಟ್ಟಿಯೂ ಆಗಿರುವ ಚಿನ್ಮೂರ್ತಿಯು ನನ್ನನ್ನು ಎಲ್ಲೆಲ್ಲಿಯೂ ಕಾಪಾಡಲಿ ! ಸೂಕ್ಷ್ಮವಾದದ್ದಕ್ಕಿಂತಲೂ ಸೂಕ್ಷ್ಮನಾಗಿರುವ ಆ ನಿರುಪಮ - ಮಹಾಶಕ್ತಿಯಾದ ಈಶ್ವರನು ಎಲ್ಲಾ ಬಗೆಯ ಅಂಜಿಕೆಯಿಂದಲೂ ನನ್ನನ್ನು ಕಾಪಾಡಲಿ !''

# ಕವಚ

ಪರಮಾತ್ಮನು ತನ್ನ ಸ್ವರೂಪದಿಂದ ಚೈತನ್ಯಜ್ಯೋತಿಯಾಗಿರುವನು ಎಂದರೆ ನಮ್ಮೊಳಗೆ ಜ್ಞಾನರೂಪವಾಗಿ ತೋರಿಕೊಳ್ಳುವದೆಲ್ಲದಕ್ಕೂ ತಿರುಳಾಗಿರುತ್ತಾನೆ. ಇದರಂತೆ ಅವನು ಆನಂದದ ಗಟ್ಟಿಯಾಗಿರುತ್ತಾನೆ, ಎಂದರೆ ಕಲ್ಲುಸಕ್ಕರೆಯ ಯಾವ ಭಾಗವನ್ನು ನವಿನೋಡಿದರೂ ಸಿಹಿಯೇ ಆಗಿರುವಂತೆ ಆತ್ಮಸ್ವರೂಪದಲ್ಲಿ ಎಲ್ಲಿ ನೋಡಿದರೂ ಆನಂದವೊಂದೇ ಇರುವದು. ನಮ್ಮಲ್ಲಿ ತೋರಿಕೊಳ್ಳುವ ಎಲ್ಲಾ ಬಗೆಯ ಸುಖವಿಶೇಷಗಳೂ ಈ ಆನಂದದ ಗಟ್ಟಿಯ ಚೂರುಗಳೇ ಆಗಿರುವವು. ಈ ಸಚ್ಚಿದಾನಂದಮೂರ್ತಿಯಾದ ಆತನ ಬೆಳಕಿನಲ್ಲಿ ಎಲ್ಲವೂ ನಮಗೆ ತೋರುತ್ತಿರುವದು, ಆತನ ಆನಂದದ ಹೊದ್ದಿಕೆಯಿಂದಲೇ ವಸ್ತುಗಳು ಸುಂದರವಾಗಿಯೂ ಆನಂದಕರವಾಗಿಯೂ ತೋರಿಕೊಳ್ಳುತ್ತಾ ನಮ್ಮ ಪ್ರೇಮವನ್ನು ಸೆರೆಹಿಡಿಯುತ್ತಿರುವವು. ಆದ್ದರಿಂದ ಆತನೇ ಈ ಬಗೆಬಗೆಯ ರೂಪಗಳಿಂದ ನಮ್ಮ ಸುತ್ತಲೂ ತೋರಿಕೊಳ್ಳುತ್ತಲಿರುವನೆಂದು ನಾವು ನಂಬಿದರೆ, ನಾವು ಎಲ್ಲಿದ್ದರೂ ಆತನು ನಮ್ಮನ್ನು ಕಾಪಾಡುತ್ತಾನೆ, ಆನಂದದಾಯಕ ನಾಗಿರುತ್ತಾನೆ.

ಯಾರು ಹೊರಗೆ ಹೀಗೆ ಪರಮಾತ್ಮನ ವಿಭೂತಿಯನ್ನೇ ಕಾಣುವ ಶಕ್ತಿಯುಳ್ಳವರಾಗಿರುವರೋ ಅವರಿಗೆ ವಿಶ್ವವೆಲ್ಲವೂ ಆ ಪರಮೇಶ್ವರನ ಮೂರ್ತಿಯೆಂದೇ ತೋರುವದು, ಅಂಥವರಿಗೆ ಜಗತ್ತೆಲ್ಲವೂ ಸುಖಮಯವಾಗಿರುತ್ತದೆ. ಆದರೆ ಈ ಶಿವಭಾವನೆಯನ್ನು ಪಡೆದುಕೊಳ್ಳುವದಕ್ಕೆ ಉಪಾಯವೇನು ? ಎಂದರೆ ಮೊಟ್ಟಮೊದಲು ನಮ್ಮೊಳಗೆ ಆತನನ್ನು ಕಂಡುಕೊಳ್ಳಬೇಕು. ಆತನು ಅಣುವಿಗಿಂತಲೂ ಅಣುವಾಗಿರುವನು. ವೈಶೇಷಿಕರೇ ಮುಂತಾದವರು ಜಗತ್ತೆಲ್ಲವೂ ಅತೀಂದ್ರಿಯವಾದ ಪರಮಾಣುಗಳಿಂದ ಆಗಿದೆಯೆಂದು ಹಿಂದಿನ ಕಾಲದಲ್ಲಿ ಭಾವಿಸಿದ್ದರು ; ಈಗಿನ ಕಾಲದಲ್ಲಿ ವಿಜ್ಞಾನಶಾಸ್ತ್ರದವರು ಭೌತಿಕವಸ್ತುಗಳೆಲ್ಲವೂ ಪರಮಾಣುಗಳಿಂದಾಗಿರುವವೆಂಬ ನಂಬಿಕೆಯನ್ನೂ ದಾಟಿ ಈ ಪರಮಾಣುಗಳಿಗಿಂತಲೂ ವಿದ್ಯುತ್ಕಣಗಳು ಸೂಕ್ಷ್ಮವಾಗಿರುವವೆಂದೂ ಅವುಗಳ ವ್ಯಾಪಾರಗಳಿಂದಲೇ ಭೌತಿಕಜಗತ್ತು ಉಂಟಾಗಿರುವದೆಂದೂ ಹೇಳುತ್ತಿದ್ದಾರೆ. ಇದರ ತತ್ತ್ವವು ಎಲ್ಲಿಯವರೆಗಾದರೂ ಹೋಗಲಿ, ಇಂಥ ಅತ್ಯಂತಸೂಕ್ಷ್ಮವಾದ

ಪರಮಾಣುಗಳಿಗಿಂತಲೂ ಸೂಕ್ಷ್ಮವಾಗಿರುವ - ಎಂದರೆ ಅತೀಂದ್ರಿಯ ವಾಗಿರುವ, ಚಿದಾನಂದಸ್ವರೂಪ ದಿಂದಲೇ ಪರಮೇಶ್ವರನೇ ಈ ಜಗತ್ತಿಗೆಲ್ಲಕ್ಕೂ ಪರಮಕಾರಣನೆನಿಸಿರುವನೆಂದೂ ಆತನೊಬ್ಬನೇ ಸಕಲಜೀವರಿಗೂ ಆತ್ಮನಾಗಿರು ವನೆಂದೂ ಆತನ ಅಚಿಂತ್ಯಶಕ್ತಿಯಿಂದಲೇ ಜಗತ್ತೆಲ್ಲವೂ ನಿಂತಿರುವದೆಂದೂ ಶಾಸ್ತ್ರದ ಡಂಗುರವು ಮೊಳಗುತ್ತಿರುವದು. ಇದನ್ನು ಯಾವಾತನು ಕಂಡುಕೊಳ್ಳುವನೋ ಅವನಿಗೆ ಜಗತ್ತೆಲ್ಲವೂ ಆ ಮಹಾಮಹಿಮನ ವಿಭೂತಿಯೆಂಬುದು ಸ್ಪಷ್ಟವಾಗು ವದು. ಆಗ ಆ ಪರಮಾತ್ಮನಿಗಿಂತ ಬೇರೆಯಾಗಿ ಯಾವದೊಂದೂ ಇಲ್ಲದಿರುವದ ರಿಂದಲೂ ಆತನೇ ನಮ್ಮ ಆತ್ಮಗಳ ತಿರುಳಾಗಿರುವದರಿಂದಲೂ ನಮಗೆ ಅಂಜಿಕೆಯ ಕಾರಣವೇ ಇಲ್ಲವೆಂಬುದು ಮನವರಿಕೆಯಾಗುವದು. ಆ ಜ್ಞಾನವು ಈಗ ನಮಗೆ ಇಲ್ಲದಿದ್ದರೂ ಶಾಸ್ತ್ರಶ್ರದ್ಧೆಯಿಂದ ಆ ಭಾವನೆಯನ್ನಾದರೂ ತಂದುಕೊಳ್ಳಬೇಕು. ಇದರಿಂದಲೂ ನಮ್ಮ ಅಂಜಿಕೆಯು ತೊಲಗುವದು.

**ಯೋ ಭೂಸ್ವರೂಪೇಣ ಬಿಭರ್ತಿವಿಶ್ವಂ**
**ಪಾಯಾತ್ಸ ಭೂಮೇರ್ಗಿರಿಶೋಽಷ್ಟಮೂರ್ತಿಃ ।**
**ಯೋಽಪಾಂ ಸ್ವರೂಪೇಣ ನೃಣಾಂ ಕರೋತಿ**
**ಸಂಜೀವನಂ ಸೋಽವತು ಮಾಂ ಜಲೇಭ್ಯಃ ॥ ೭ ॥**

೭. "ಯಾವಾತನು ಭೂಮಿಯ ರೂಪದಿಂದ ಜಗತ್ತೆಲ್ಲವನ್ನೂ ಹಿಡಿದೆತ್ತಿರುವನೋ ಆ ಅಷ್ಟಮೂರ್ತಿಯಾದ ಗಿರಿಶನು ನನ್ನನ್ನು ಭೂಮಿಯ ಅಂಜಿಕೆಯಿಂದ ಕಾಪಾಡಲಿ ! ಯಾವಾತನು ಅಪ್ಪಿನ ರೂಪದಿಂದ ಜನರನ್ನು ಸಂಜೀವನಗೊಳಿಸುತ್ತಿರುವನೋ ಆತನು ನನ್ನನ್ನು ಜಲಗಳ ಅಂಜಿಕೆಯಿಂದ ಕಾಪಾಡಲಿ !"

ಮನುಷ್ಯನಿಗೆ ಪಂಚಭೂತಗಳಿಂದಲೂ ಅಂಜಿಕೆಯುಂಟು. ಭೂಮಿಯು ಕುಸಿದುಕೊಳ್ಳುವದು, ಬೆಟ್ಟದ ಕಲ್ಲುಗಳು ಮೈಮೇಲೆ ಉರುಳಿಕೊಳ್ಳುವದು, ನೆಲದ ತಗ್ಗುತಿಟ್ಟುಗಳಿಂದ ಕಾಲು ಉಳುಕುವದು - ಮುಂತಾದವು ಭೂಮಿಯಿಂದಾಗ ಬಹುದಾದ ತೊಂದರೆಗಳು. ನದಿಯ ನೀರು ಅಥವಾ ಸಮುದ್ರದ ನೀರು ಮೇರೆದಪ್ಪಿ ಮೇಲಕ್ಕೆ ನುಗ್ಗುವದು, ತಾನೇ ನೀರಿನಲ್ಲಿ ಮುಗ್ಗರಿಸಿ ಬೀಳುವದು,

ಈಜುವದಕ್ಕೆ ಬಾರದೆ ಆಳವಾದ ನೀರಿನಲ್ಲಿ ಬಿದ್ದು ಮುಳುಗಿ ಸಾಯುವದು, ಮಳೆ ಅಥವಾ ಆಲಿಕಲ್ಲು ಭೂಮಿಗೆ ಹೊಡೆಯುವದರಿಂದ ಸಂಕಟವಾಗುವದು - ಇವೇ ಮುಂತಾದವು ನೀರಿನಿಂದ ಆಗಬಹುದಾದ ತೊಂದರೆಗಳು. ಭೂಮಿಯ ವಿಕಾರವಾದ ಅನ್ನದ ಮೂಲಕವೂ ಅಪ್ಪಿನ ವಿಕಾರವಾದ ದ್ರವವಸ್ತುಗಳ ಮೂಲಕವೂ ಆಗುವ ಕಷ್ಟಪರಂಪರೆಗಳನ್ನೂ ಇಂಥ ತೊಂದರೆಗಳ ಸಾಲಿಗೇ ಸೇರಿಸಿಕೊಳ್ಳಬೇಕು. ಹೀಗೆಯೇ ತೇಜಸ್ಸು, ವಾಯು, ಆಕಾಶ-ಎಂಬ ಭೂತಗಳ ದೆಸೆಯಿಂದಲೂ ಮನುಷ್ಯನಿಗೆ ಆಗಬಹುದಾದ ಅಪಾಯಗಳು ಅನಂತವಾಗಿರುವವು. ಆದರೆ ಈ ಅಪಾಯಗಳು ಯಾರಿಗೆ ಆಗುತ್ತವೆ ? ಎಂದರೆ ಯಾರು ಪಂಚಭೂತಗಳನ್ನು ಪರಮೇಶ್ವರನಿಗಿಂತ ಬೇರೆಯೆಂದೂ ತನಗಿಂತ ಆ ಪರಮೇಶ್ವರನು ಬೇರೆಯೆಂದೂ ತಿಳಿದುಕೊಳ್ಳುವರೋ ಅಂಥ ಅಲ್ಪಮತಿಯುಳ್ಳ ಜನರಿಗೇ.

ಆದರೆ ಯಥಾರ್ಥವೇನೆಂದರೆ ಆ ಪರಮೇಶ್ವರನು **ಅಷ್ಟಮೂರ್ತಿಯು.** ಸೂರ್ಯ, ಚಂದ್ರ, ಪಂಚಭೂತಗಳು, ಚೇತನನಾದ ಪುರುಷ - ಈ ಎಂಟು ರೂಪಗಳಿಂದಲೂ ತೋರಿಕೊಳ್ಳುತ್ತಿರುವವನು ಆತನೇ. ಆದ್ದರಿಂದ ಪಂಚಭೂತಗಳು ಪರಮಾರ್ಥವಾಗಿ ಆತನೇ ಎಂದು ನಂಬಿದವರಿಗೆ ಭೌತಿಕಬಾಧೆಗಳು ಉಂಟಾಗಲಾರವು. ಆತನು ಭೂಮಿಯಾಗಿ ಎಲ್ಲವನ್ನೂ ಧರಿಸಿರುವನು, ನೀರಾಗಿ ನಮ್ಮ ಜೀವನಕ್ಕೆ ನೆರವಾಗಿರುವನು, ಅಗ್ನಿಯಾಗಿ ನಮ್ಮ ಶರೀರಕ್ಕೆ ಉಷ್ಣವನ್ನು ಕೊಟ್ಟು ಕಾಪಾಡುತ್ತಿರುವನು, ವಾಯುವಾಗಿ ನಮ್ಮಗಳ ಪ್ರಾಣದ ಉಸಿರಾಗಿರುವನು, ಆಕಾಶವಾಗಿ ನಾವಿರುವದಕ್ಕೆ ಸ್ಥಳವನ್ನು ಕಲ್ಪಿಸಿಕೊಟ್ಟಿರುವನು, ಅವನೇ ಸೂರ್ಯನಾಗಿ ನಮಗೆ ಬೇಕಾದ ಬಿಸಿಲು, ಬೆಳಕು, ಮಳೆ-ಮುಂತಾದವುಗಳಿಗೆ ಕಾರಣನಾಗಿರುತ್ತಾನೆ ; ಚಂದ್ರನಾಗಿ ಸಸ್ಯಗಳಿಗೆ ತನ್ನ ಅಮೃತಹಸ್ತಗಳಿಂದ ಪುಷ್ಟಿಯನ್ನು ಎರೆಯುತ್ತಾನೆ. ಇವೆಲ್ಲಕ್ಕಿಂತಲೂ ಮಿಗಿಲಾಗಿ ನಮ್ಮಗಳೆಲ್ಲರ ಆತ್ಮನಾಗಿ ನಮ್ಮಲ್ಲಿಯೇ ಇದ್ದುಕೊಂಡು ನಮ್ಮ ಮನಸ್ಸಿನ ಮತ್ತು ಇಂದ್ರಿಯಗಳ ಮೂಲಕ ವ್ಯಾಪಾರಮಾಡುತ್ತಿರುವ ಇಚ್ಛಾಶಕ್ತಿ, ಕ್ರಿಯಾಶಕ್ತಿ, ಜ್ಞಾನಶಕ್ತಿ- ಇವೆಲ್ಲಕ್ಕೂ ಜೀವಕಳೆಯನ್ನು ತನ್ನ ಸನ್ನಿಧಿಮಾತ್ರದಿಂದ ಕೊಡುತ್ತಿರುವ ಸಾಕ್ಷಿಚೈತನ್ಯವಾಗಿರುತಾನೆ.

**ಕಲ್ಪಾವಸಾನೇ ಭುವನಾನಿ ದಗ್ಧ್ವಾ**
**ಸರ್ವಾಣಿ ಯೋ ನೃತ್ಯತಿ ಭೂರಿಲೀಲಃ ।**
**ಸ ಕಾಲರುದ್ರೋಽವತು ಮಾಂ ದವಾಗ್ನೇ -**
**ವಾ ೯ತ್ಯಾದಿಭೀತೇರಖಿಲಾಚ್ಚ ತಾಪಾತ್ ॥೮॥**

೮. "ಕಲ್ಪವು ಮುಗಿಯುವ ಪ್ರಲಯಕಾಲದಲ್ಲಿ ಲೋಕಗಳೆಲ್ಲವನ್ನೂ ಸುಟ್ಟು ಯಾವ ಮಹಾಲೀಲಾಮಯನು ನರ್ತನಮಾಡುತ್ತಿರುವನೋ ಆ ಕಾಲರುದ್ರನು ಕಾಡುಕಿಚ್ಚಿನಿಂದಲೂ ಸುಂಟರುಗಾಳಿಯೇ ಮುಂತಾದವುಗಳ ಅಂಜಿಕೆಯಿಂದಲೂ ಎಲ್ಲಾ ಬಗೆಯ ತಾಪದಿಂದಲೂ ನನ್ನನ್ನು ಕಾಪಾಡಲಿ!"

ಪರಮೇಶ್ವರನು ಪಂಚಭೂತಗಳ ಆತ್ಮನೇ ಆಗಿರುವದರಿಂದ ಆ ಭೂತಗಳ ಉಗ್ರರೂಪದಿಂದ ಕೂಡ ಅವನಿಗೆ ಅಂಜಿಕೆಯಿರುವದಿಲ್ಲ. ಅದಕ್ಕೆ ಬದಲು ಅವೇ ಆತನ ಮಹಾಲೀಲೆಗೆ ಉಪಾಯಗಳಾಗುತ್ತವೆ. ಈ ಜಗತ್ತನ್ನು ಸೃಷ್ಟಿಸಿ ಅದರಲ್ಲಿರುವ ಪ್ರಾಣಿಗಳ ಕರ್ಮಫಲವು ನೆರವೇರುವವರೆಗೂ ಅದನ್ನು ಕಾಪಾಡಿಕೊಂಡಿದ್ದು ಬಳಿಕ ಅದನ್ನೇ ಕಲ್ಪಾಂತದಲ್ಲಿ ಪ್ರಚಂಡವಾಗಿ ಹತ್ತಿಕೊಂಡು ಧಗಧಗಿಸುವ ಬೆಂಕಿಯಿಂದ ಸುಟ್ಟು ಬೂದಿಗೈಯುತ್ತಾನೆ ; ಆಮೇಲೆ ಅದರ ಮೇಲೆ ಕುಂಭದ್ರೋಣದ ಮಳೆಯನ್ನು ಕರೆದು ಎಲ್ಲೆಲ್ಲಿಯೂ ನೀರಿನ ಕಡಲನ್ನು ಮೇರೆದಪ್ಪಿ ಉಕ್ಕುವಂತೆ ಮಾಡುತ್ತಾನೆ; ಜಿರ್‍ರನೆ ಬೀಸುವ ಬಿರುಗಾಳಿಯಿಂದ ಎಲ್ಲವನ್ನೂ ಒಣಗಿಸಿ ಹಾರಿಸುತ್ತಾನೆ ; ಹೀಗೆ ಪ್ರಾಣಿಗಳ ಜನ್ಮಸ್ಥಿತಿಗಳ ಕಾರಣವಾಗಿರುವ ಮಹಾಭೂತಗಳೇ ಇಡಿಯ ಜಗತ್ತನ್ನು ನುಂಗುವ ಪೆಡಂಭೂತಗಳಾದಾಗಲೂ ಅವುಗಳನ್ನೇ ತನ್ನ ಲೀಲೋಪಕರಣವಾಗಿ ಮಾಡಿಕೊಂಡು ಧೀರನಾಗಿ ನರ್ತನ ಮಾಡುತ್ತಿರುವ ಆತನ ಪರಾಕ್ರಮವನ್ನೂ ಧೈರ್ಯವನ್ನೂ ವರ್ಣಿಸುವದೇನು ? ಅಂಥವನು ಸ್ಥಿತಿಕಾಲದಲ್ಲಿ ಆಗಾಗ ಕಾಣಿಸಿಕೊಳ್ಳುವ ಕಾಡುಗಿಚ್ಚು, ಸುಂಟರಗಾಳಿ - ಮುಂತಾದ ಭೌತಿಕವಾದ ಉತ್ಪಾತಗಳನ್ನೂ ಪ್ರಾಣಿಗಳಿಗೆ ಆಗಾಗ್ಗೆ ಸಾಮಾನ್ಯವಾಗಿ ಒದಗುವ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ - ಎಂಬ ತಾಪತ್ರಯಗಳನ್ನೂ ನಿವಾರಿಸಲಾರನೆ ? ಖಂಡಿತವಾಗಿಯೂ ನಿವಾರಿಸಬಲ್ಲನು.

ಆದ್ದರಿಂದ ಸಿಂಹದ ಮರಿಗಳು ತಾಯಿ ಸಿಂಹದ ಬಳಿಯಲ್ಲಿ ಎಲ್ಲಾ ಅಂಜಿಕೆಗಳನ್ನೂ ತೊರೆದಿರುವಂತೆ ನಾವೂ ಕಾಲರುದ್ರನಾದ ಆ ಪರಮೇಶ್ವರನ ಸನ್ನಿಧಿಯನ್ನು ನೆನಪಿಗೆ ತಂದುಕೊಂಡರೆ ಯಾವ ಉತ್ಪಾತಗಳಿಗೂ ಅಂಜದೆ ಸುಖವಾಗಿ ಬಾಳಬಹುದು.

ಹಿಂದಿನ ಶ್ಲೋಕದಲ್ಲಿ ಭೂಮಿಜಲಗಳ ಅಂಜಿಕೆಯಿಲ್ಲದಂತೆ ಮಾಡಲಿ! ಎಂದು ಪ್ರಾರ್ಥಿಸಿದೆ. ಈ ಶ್ಲೋಕದಲ್ಲಿ ಅಗ್ನಿವಾಯುಗಳ ಅಂಜಿಕೆಯಿಂದ ಕಾಪಾಡಲಿ!- ಎಂದು ಪ್ರಾರ್ಥಿಸಿದೆ.

**ಪ್ರದೀಪ್ತವಿದ್ಯುತ್ಕನಕಾವಭಾಸೋ**
**ವಿದ್ಯಾವರಾಭೀತಿಕುಠಾರಪಾಣಿಃ ।**
**ಚತುರ್ಮುಖಸ್ತತ್ಪುರುಷಸ್ತ್ರಿಣೇತ್ರಃ**
**ಪ್ರಾಚ್ಯಾಂ ಸ್ಥಿತಂ ರಕ್ಷತು ಮಾಮಜಸ್ರಮ್ ॥ ೯ ॥**

೯. ಥಳಗುಟ್ಟುವ ಮಿಂಚಿನಂತೆಯೂ ಚಿನ್ನದಂತೆಯೂ ಹೊಳೆಯುತ್ತಾ ವಿದ್ಯೆಯನ್ನೂ ವರವನ್ನೂ ಅಭಯವನ್ನೂ ಕೊಡಲಿಯನ್ನೂ ಕೈಯಿಂದ ತೋರಿಸುತ್ತಿರುವವನಾಗಿ ನಾಲ್ಕು ಮುಖಗಳಿಂದ ಕೂಡಿರುವ **ತತ್ಪುರುಷ**ನೆಂಬ ಮುಕ್ಕಣ್ಣನು ಪೂರ್ವದಿಕ್ಕಿನಲ್ಲಿರುವ ನನ್ನನ್ನು ಯಾವಾಗಲೂ ಕಾಪಾಡಲಿ!

ಪರಮೇಶ್ವರನು ವಿಶ್ವತೋಮುಖನು ; ಯಾವ ಕಡೆಗೆ ನೋಡಿದರೂ ಆತನ ಮುಖವು ನಮ್ಮ ಕಡೆಗೆ ತಿರುಗಿರುವದು. ಇದನ್ನು ತಿಳಿಸುವದಕ್ಕೆ ಆತನನ್ನು ತತ್ಪುರುಷಾದಿನಾಮಗಳಿಂದ ವರ್ಣನೆಮಾಡುವ ಸಂಪ್ರದಾಯವು ಉಂಟು. ತತ್ಪುರುಷಾದಿಮೂರ್ತಿಗಳೂ ವೇದದಲ್ಲಿ ಪ್ರತಿಪಾದಿತವಾಗಿವೆ ; ಅವನ್ನೇ ಪುರಾಣಗಳಲ್ಲಿಯೂ ವರ್ಣಿಸಿರುತ್ತದೆ.

**ಕುಠಾರಖೇಟಾಂಕುಶಪಾಶಶೂಲ-**
**ಕಪಾಲಢಕ್ಕಾಕ್ಷಗುಣಾನ್ ದಧಾನಃ ।**
**ಚತುರ್ಮುಖೋ ನೀಲರುಚಿಸ್ತ್ರಿಣೇತ್ರಃ**
**ಪಾಯಾದಘೋರೋ ದಿಶಿ ದಕ್ಷಿಣಸ್ಯಾಮ್ ॥ ೧೦ ॥**

೧೦. ಕೊಡಲಿ, ಗುರಾಣಿ, ಅಂಕುಶ, ಪಾಶ, ಶೂಲ, ಕಪಾಲ, ಢಕ್ಕೆ, ಅಕ್ಷಸೂತ್ರ - ಇವುಗಳನ್ನು ಧರಿಸಿರುವವನಾಗಿಯೂ ನಾಲ್ಕುಮುಖವುಳ್ಳವನಾಗಿಯೂ ಕಪ್ಪುಬಣ್ಣದವನಾಗಿಯೂ ಮೂರು ಕಣ್ಣುಗಳುಳ್ಳವನಾಗಿಯೂ ಇರುವ **ಅಘೋರನು** ದಕ್ಷಿಣದಿಕ್ಕಿನಲ್ಲಿ ಕಾಪಾಡಲಿ!

ಮೇಲಿನ ಎರಡು ಶ್ಲೋಕಗಳಲ್ಲಿ ಹೇಳಿರುವ ಆಯುಧಗಳನ್ನೆಲ್ಲ ಸುಮ್ಮನೆ ಅಲಂಕಾರಗಳೆಂದು ತಿಳಿಯಬಾರದು. ಅವುಗಳು ಭಕ್ತರ ಉದ್ಧಾರಕ್ಕಾಗಿ ಬೇರೆಬೇರೆಯ ಸಂದರ್ಭಗಳಲ್ಲಿ ಪರಮೇಶ್ವರನು ಧರಿಸಿದವುಗಳಾಗಿರುತ್ತವೆ. ಅವುಗಳ ನೆನಪಿನಿಂದ ನಮ್ಮ ಬಗೆಬಗೆಯ ಭಯಗಳೆಲ್ಲ ಹಾರಿಹೋಗುತ್ತವೆ. ಕೊಡಲಿಯಿಂದ ತುಂಡುಮಾಡುವದು, ಗುರಾಣಿಯಿಂದ ಬಂದ ಅಪಾಯಗಳನ್ನು ಅಡ್ಡಹಾಯ್ದು ತಪ್ಪಿಸಿಕೊಳ್ಳುವದು, ಅಂಕುಶದಿಂದ ಶತ್ರುವನ್ನು ಚುಚ್ಚಿ ವ್ಯಥೆಗೊಳಿಸುವದು, ಪಾಶದಿಂದ ಹಗೆಯನ್ನು ಸರಿಗುಣಿಕೆಯಲ್ಲಿ ಸಿಕ್ಕಿಸಿಕೊಳ್ಳುವದು, ಶೂಲದಿಂದ ತಿವಿಯುವದು - ಹೀಗೆ ಒಂದೊಂದು ಆಯುಧದಿಂದ ಒಂದೊಂದು ಪ್ರಯೋಜನವು ಯುದ್ಧದಲ್ಲಿ ಆಗುತ್ತದೆಯಲ್ಲವೆ? ಹಾಗೆಯೇ ನಮಗೆ ಇಂಥ ಎಡರುಗಳು ಬಂದರೂ, ಇಂಥ ಅಪಾಯಗಳು ಬಂದೊದಗಿದರೂ, ಇಂಥ ಸಂಕಟಗಳು ಸಂಪ್ರಾಪ್ತವಾದರೂ ಅವಕ್ಕೆಲ್ಲ ತಕ್ಕ ಪ್ರತೀಕಾರವು ಪರಮೇಶ್ವರನಲ್ಲಿರುವದೆಂಬುದನ್ನು ಈ ಆಯುಧಗಳು ನೆನಪಿಗೆ ತರುತವೆ.

ಪರಮೇಶ್ವರನ **ಕಪಾಲವು** ವೈರಾಗ್ಯದ ಮಹಿಮೆಯ ಗುರುತು. ಮಹಾಮಹಿಮನಾದ ಪರಮೇಶ್ವರನು ಸಕಲೈಶ್ವರ್ಯವೂ ತನ್ನ ವಶದಲ್ಲಿದ್ದರೂ ವೈರಾಗ್ಯಕ್ಕಿಂತ ಹೆಚ್ಚಿನ ಸಂಪತ್ತಿಲ್ಲವೆಂಬುದನ್ನು ತನ್ನ ಕಪಾಲದಿಂದ ಸೂಚಿಸುತ್ತಿರುವನು. ಆತನು ಭಕ್ತರ ಭಕ್ತಿಯ ಭಿಕ್ಷೆಯನ್ನು ಬೇಡುತ್ತಿರುವನೆಂಬುದೂ ಆ ಕಪಾಲದ ಸೂಚನೆಯಾಗಿರುತ್ತದೆ. **ಢಕ್ಕೆಯು** ಅಥವಾ ಡಮರುಗವು ವಿದ್ಯಾಸೂಚಕವು ; ಪಾಣಿನಿಗೆ ಸಕಲವ್ಯಾಕರಣವನ್ನೂ ಡಮರುಗಧ್ವನಿಯಿಂದ ಉಪದೇಶಿಸಿದ ಮಹೇಶ್ವರನು ಸಕಲವಿದ್ಯೆಗಳಿಗೂ ಒಡೆಯನು. **ಅಕ್ಷಸೂತ್ರವು** ಅಂತರ್ಮುಖತ್ವದ ಗುರುತು. ಹೊರಗಣ ವಿಷಯಗಳಲ್ಲಿಯೇ ಮನಸ್ಸಿಟ್ಟುಕೊಂಡು 'ಇಂದು ಇದು

ಸಿಕ್ಕಿತು, ಇನ್ನು ಇದನ್ನು ಸಂಪಾದಿಸಬೇಕು' ಎಂದು ಎಣಿಸುತ್ತಿರುವ ವಿಷಯ ದೃಷ್ಟಿಗಿಂತಲೂ ಅಂತರ್ದೃಷ್ಟಿಯಿಂದ ಆತ್ಮಸ್ವರೂಪವನ್ನು ಮತೆ ಮತೆ ಅನುಸಂಧಾನಮಾಡುವದೇ ಒಳ್ಳೆಯದು - ಎಂಬುದನ್ನು ಈ ಜಪಸರವು ನೆನಪು ಕೊಡುತ್ತದೆ. **ನಾಲ್ಕುಮುಖ**ವೆಂಬುದು ನಾಲ್ಕು ವೇದಗಳನ್ನೂ **ತ್ರಿಣೇತ್ರ** ನೆಂಬ ಹೆಸರು ವ್ಯವಹಾರಾತೀತವಾದ ಜ್ಞಾನಚಕ್ಷುಸ್ಸಿನ ಮಹಿಮೆಯನ್ನೂ ಸೂಚಿಸುತ್ತವೆ. ಮುಂದಿನ ಶ್ಲೋಕಗಳಲ್ಲಿಯೂ ಈ ವಿವರವನ್ನು ನೆನಪಿಗೆ ತಂದುಕೊಳ್ಳಬೇಕು.

**ಕುಂದೇಂದುಶಂಖಸ್ಫಟಿಕಾವಭಾಸೋ**
**ವೇದಾಕ್ಷಮಾಲಾವರದಾಭಯಾಂಕಃ ।**
**ತ್ರ್ಯಕ್ಷಶ್ಚತುರ್ವಕ್ತ್ರ ಉರುಪ್ರಭಾವಃ**
**ಸದ್ಯೋಧಿಜಾತೋಽವತು ಮಾಂ ಪ್ರತೀಚ್ಯಾಮ್ ॥ ೧೧ ॥**

೧೧. ಕುಂದಪುಷ್ಪ, ಚಂದ್ರ, ಶಂಖ, ಸ್ಫಟಿಕಶಿಲೆ - ಇವುಗಳಂತೆ ಶುಭ್ರವರ್ಣವಾಗಿರುವವನಾಗಿಯೂ ವೇದ, ಅಕ್ಷಸೂತ್ರ, ವರದಹಸ್ತ, ಅಭಯ ಹಸ್ತ - ಇವುಗಳಿಂದಂಕಿತನಾಗಿಯೂ ಮೂರು ಕಣ್ಣುಗಳುಳ್ಳವನಾಗಿಯೂ ನಾಲ್ಕು ಮುಖಗಳುಳ್ಳವನಾಗಿಯೂ ಇರುವ ಮಹಾಪ್ರಭಾವಶಾಲಿಯಾದ **ಸದ್ಯೋಜಾತನು** ನನ್ನನ್ನು ಪಶ್ಚಿಮದಿಕ್ಕಿನಲ್ಲಿ ಕಾಪಾಡಲಿ!

**ಸದ್ಯೋಜಾತನೆಂದರೆ** ಈಗತಾನೆ ಹುಟ್ಟಿದವನು ಎಂದರ್ಥ. ಪರಮೇಶ್ವರನು ನಿಜವಾಗಿ ಜನ್ಮರಹಿತನಾದರೂ ಅವನು ಬಹುಕಾಲ ದಿಂದಿರುವದರಿಂದ ಬಹುಮುದುಕನಾಗಿರಬಹುದೆಂಬ ಭಾವನೆಯು ಅವಿವೇಕಿ ಗಳಿಗೆ ಉಂಟಾಗಬಹುದು. ಅದನ್ನು ಕಳೆಯುವದಕ್ಕಾಗಿ ಆತನನ್ನು ಸದ್ಯೋಜಾತನು - ಎಂದು ವೇದದಲ್ಲಿ ಕರೆದಿರುತ್ತದೆ ; ಯಾವಾಗ ನೋಡಿದರೂ ಆಗತಾನೆ ಶರೀರಧಾರಣೆಯನ್ನು ಮಾಡಿಕೊಂಡಂತೆ ತೋರುವವನು. ಅಂಥ ಉತ್ಕೃಷ್ಟ ಮನಮೋಹಕಸೌಂದರ್ಯದಿಂದ ಕೂಡಿದ ಆಕಾರವುಳ್ಳವನು - ಎಂದರ್ಥ. ಈ ಸದ್ಯೋಜಾತಮೂರ್ತಿಯು ತನ್ನ ಆಕಾರಕ್ಕೆ ತಕ್ಕಂತೆ ಶಾಂತಿಪ್ರಧಾನನಾಗಿರುತ್ತಾ ನೆಂಬುದು ವರ್ಣನೆಯಿಂದಲೇ ವ್ಯಕ್ತವಾಗುತ್ತದೆ.

**ವರಾಕ್ಷಮಾಲಾಭಯಟಂಕಹಸ್ತಃ**
**ಸರೋಜಕಿಂಜಲ್ಕಸಮಾನವರ್ಣಃ ।**
**ತ್ರಿಲೋಚನಶ್ಚಾರು ಚತುರ್ಮುಖೋ ಮಾಂ**
**ಪಾಯಾದುದೀಚ್ಯಾಂ ದಿಶಿ ವಾಮದೇವಃ ॥ ೧೨ ॥**

೧೨. ವರದಹಸ್ತ, ಅಕ್ಷಸೂತ್ರದಿಂದ ಕೂಡಿದ ಹಸ್ತ, ಅಭಯಹಸ್ತ, ಟಂಕಹಸ್ತ - ಇವುಗಳಿಂದೊಡಗೂಡಿದವನೂ ಕಮಲದ ಕೇಸರದಂತೆ ಮೈಬಣ್ಣವುಳ್ಳವನೂ ಮುಕ್ಕಣ್ಣನೂ ಸುಂದರವಾದ ನಾಲ್ಕು ಮುಖಗಳುಳ್ಳವನೂ ಆಗಿರುವ **ವಾಮದೇವನು** ಉತ್ತರದಿಕ್ಕಿನಲ್ಲಿ ನನ್ನನ್ನು ಕಾಪಾಡಲಿ!

**ವೇದಾಭಯೇಷ್ಟಾಂಕುಶಟಂಕಪಾಶ-**
**ಕಪಾಲಢಕ್ಕಾಕ್ಷಕಶೂಲಪಾಣಿಃ ।**
**ಸಿತದ್ಯುತಿಃ ಪಂಚಮುಖೋಽವತಾನ್ಮಾ-**
**ಮೀಶಾನ ಊರ್ಧ್ವಂ ಪರಮಪ್ರಕಾಶಃ ॥ ೧೩ ॥**

೧೩. ವೇದ, ಅಭಯ, ಇಷ್ಟಾರ್ಥ, ಅಂಕುಶ, ಟಂಕ (ಉಳಿ), ಪಾಶ, ಕಪಾಲ, ಢಕ್ಕೆ, ಅಕ್ಷಸೂತ್ರ, ಶೂಲ - ಇವುಗಳಿಂದೊಡಗೂಡಿದ ಕೈಗಳುಳ್ಳವನಾಗಿಯೂ, ಶುಭ್ರವರ್ಣದವನಾಗಿಯೂ ಐದುಮುಖಗಳಿಂದೊಡಗೂಡಿದವನಾಗಿಯೂ ಇರುವ ಮಹಾಪ್ರಕಾಶಯುಕ್ತನಾದ **ಈಶಾನನು** ಮೇಲುಗಡೆಯಲ್ಲಿ ನನ್ನನ್ನು ಕಾಪಾಡಲಿ!

ಶಿವಪುರಾಣದ **ಸನತ್ಕುಮಾರಸಂಹಿತೆಯಲ್ಲಿ** ಈ ಐದು ಮೂರ್ತಿಗಳ ವಿಷಯದಲ್ಲಿ ಹೀಗೆಂದು ಬರೆದಿದೆ : ''ಶಿವನ ಪ್ರಥಮಮೂರ್ತಿಯು ಕ್ರೀಡೆಯನ್ನು ಮಾಡುತ್ತಿರುತ್ತದೆ, ಎರಡನೆಯದು ತಪಸ್ಸನ್ನು ಮಾಡುತ್ತಿರುತ್ತದೆ, ಮೂರನೆಯದು ಲೋಕಸಂಹಾರವನ್ನು ಮಾಡುತ್ತಿರುತ್ತದೆ, ನಾಲ್ಕನೆಯದು ಪ್ರಜೆಗಳನ್ನು ಸೃಷ್ಟಿಸುತ್ತಿರುತ್ತದೆ, ಐದನೆಯದು ಜ್ಞಾನಪ್ರಧಾನವಾಗಿರುವದರಿಂದ ಸಕಲಜಗತ್ತನ್ನೂ ಆಚ್ಛಾದಿಸಿಕೊಂಡಿರುತ್ತದೆ. ಈ ಈಶಾನ ಮೂರ್ತಿಯೇ ಎಲ್ಲಕ್ಕೂ ಒಡೆಯನು, ಎಲ್ಲದರಲ್ಲಿಯೂ ಇರುವಾತನು, ಸೃಷ್ಟಿ ಸ್ಥಿತಿ ಪ್ರಲಯಗಳನ್ನು

ಮಾಡುವಾತನು.'' ಇದೇ ಶಿವಪುರಾಣದ **ವಾಯವೀಯಸಂಹಿತೆ**ಯಲ್ಲಿ ಬರೆದಿರುವದೇನೆಂದರೆ : ''ಶ್ರೀಶಿವನ **ಈಶಾನ**ವೆಂಬ ಪರಮೋತ್ತಮ ಮೂರ್ತಿಯು ಭೋಕ್ತೃವಾದ ಪುರುಷನಲ್ಲಿ ಅಧಿಷ್ಠಿತವಾಗಿರುತ್ತದೆ ; **ತತ್ಪುರುಷ**ನೆಂಬ ಎರಡನೆಯ ಮೂರ್ತಿಯು ಸತ್ತ್ವವೇ ಮುಂತಾದ ಗುಣಗಳಿಗೆ ಆಶ್ರಯವಾಗಿರುವ ಭೋಗ್ಯಪ್ರಕೃತಿಯಲ್ಲಿ ಅಧಿಷ್ಠಿತವಾಗಿರುತ್ತದೆ ; ಮೂರನೆಯ **ಅಘೋರ**ವೆಂಬ ಮೂರ್ತಿಯು ಧರ್ಮವೇ ಮುಂತಾದ ಅಷ್ಟಾಂಗಗಳಿಂದೊಡಗೂಡಿದ ಬುದ್ಧಿಯಲ್ಲಿರುತ್ತದೆ ; ನಾಲ್ಕನೆಯದಾದ **ವಾಮದೇವ**ನೆಂಬ ಮೂರ್ತಿಯು ಅಹಂಕಾರಕ್ಕೆ ಅಧಿಷ್ಠಾತೃವಾಗಿರುತ್ತದೆ ; ಐದನೆಯ **ಸದ್ಯೋಜಾತ** ಮೂರ್ತಿಯು ಮನಸ್ಸಿನ ಅಧಿಷ್ಠಾತೃವಾಗಿರುತ್ತದೆ.'' ಈ ಎರಡು ವಿವರಗಳೂ ಒಂದಕ್ಕೊಂದು ವಿರುದ್ಧವಲ್ಲ, ಏಕೆಂದರೆ ಮೊದಲನೆಯದು ಆಧಿಭೌತಿಕ ಪ್ರಪಂಚದಲ್ಲಿ ಕಾಣಿಸಿ ಕೊಂಡಿರುವ ಪಂಚಮೂರ್ತಿಯ ರೂಪಗಳನ್ನೂ ಎರಡನೆಯದು ಆಧ್ಯಾತ್ಮಿಕ ಪ್ರಪಂಚದಲ್ಲಿರುವ ಪಂಚಮೂರ್ತಿಯ ರೂಪಗಳನ್ನೂ ತಿಳಿಸುತ್ತವೆ ಎಂತ ಇಟ್ಟುಕೊಳ್ಳಬಹುದಾಗಿದೆ.

**ಮೂರ್ಧಾನಮವ್ಯಾನ್ಮಮ ಚಂದ್ರಮೌಳಿಃ**
**ಫಾಲಂ ಮಮಾವ್ಯಾದಥ ಫಾಲನೇತ್ರಃ ।**
**ನೇತ್ರೇ ಮಮಾವ್ಯಾದ್ಭಗನೇತ್ರಹಾರೀ**
**ನಾಸಾಂ ಸದಾ ರಕ್ಷತು ವಿಶ್ವನಾಥಃ ॥ ೧೪ ॥**

೧೪. ಚಂದ್ರನನ್ನು ತಲೆಯಲ್ಲಿ ಧರಿಸಿರುವ ಈಶ್ವರನು ನನ್ನ ತಲೆಯ ಮೇಲ್ಭಾಗವನ್ನು ಕಾಪಾಡಲಿ ಹಣೆಗಣ್ಣನು ನನ್ನ ಹಣೆಯನ್ನು ಕಾಪಾಡಲಿ ಇಂದ್ರನ ಗರ್ವವನ್ನು ಪರಿಹರಿಸಿದಾತನು ನನ್ನ ನೇತ್ರಗಳನ್ನು ಕಾಪಾಡಲಿ ; ವಿಶ್ವಕ್ಕೇ ಒಡೆಯನಾದವನು ನನ್ನ ಮೂಗನ್ನು ಕಾಪಾಡಲಿ !

ಇದುವರೆಗೆ ಬೇರೆಬೇರೆಯ ದಿಕ್ಕುಗಳಲ್ಲಿ ಕಾಪಾಡಲಿ ಎಂಬ ಪ್ರಾರ್ಥನೆಯನ್ನು ಮಾಡಿದ್ದಾಯಿತು. ಇಲ್ಲಿಂದ ಮುಂದಕ್ಕೆ ಅವಯವಗಳನ್ನು ಕಾಪಾಡಲಿ !- ಎಂಬ ಪ್ರಾರ್ಥನೆಯಿದೆ. ನಮ್ಮ ಪ್ರಾರ್ಥನೆಯಿಂದ ಮನಮರುಗಿ ಆಮೇಲೆ ಈಶ್ವರನು ಕಾಪಾಡುತ್ತಾನೆಂದಾಗಲಿ ಅದಕ್ಕಿಂತ ಮೊದಲು ಆತನಿಗೆ ನಮ್ಮ

ಮೇಲೆ ಕರುಣೆಯಿರುವದಿಲ್ಲವೆಂದಾಗಲಿ ಈ ವಾಕ್ಯಗಳ ಆಶಯವಲ್ಲ, ಪರಮೇಶ್ವರನೇ ನಮ್ಮನ್ನು ನಿಜವಾಗಿ ಯಾವಾಗಲೂ ಕಾಪಾಡುತ್ತಿರುವನಾದರೂ ನಾವು ಅಹಂಕಾರದಿಂದ ನಮ್ಮನ್ನು ನಾವು ಕಾಪಾಡಿಕೊಳ್ಳುವೆವೆಂದು ಹೆಮ್ಮೆಪಡುತ್ತಿರುವದು ನಮಗೂ ಪರಮೇಶ್ವರನಿಗೂ ಇರುವ ನಿಕಟಸಂಬಂಧವನ್ನು ಮರೆಮಾಡುವದಕ್ಕೆ ಕಾರಣವಾಗಿರುತ್ತದೆ. ಈ ಮರೆಯನ್ನು ತೆಗೆದುಹಾಕಿ ಆತನ ಅನುಗ್ರಹದ ಬೆಳದಿಂಗಳಿನಲ್ಲಿ ಹಾಯಾಗಿರುವದಕ್ಕೆ ತಕ್ಕ ಸನ್ನಿವೇಶವನ್ನು ಒದಗಿಸಿಕೊಳ್ಳುವದೇ ಈ ಪ್ರಾರ್ಥನೆಯ ಉದ್ದೇಶವು.

**ಪಾಯಾಚ್ಛ್ರುತೀ ಮೇ ಶ್ರುತಿಗೀತಕೀರ್ತಿಃ**
**ಕಪೋಲಮವ್ಯಾತ್ಸತತಂ ಕಪಾಲೀ ।**
**ವಕ್ತ್ರಂ ಸದಾ ರಕ್ಷತು ಪಂಚವಕ್ತ್ರೋ**
**ಜಿಹ್ವಾಂ ಸದಾ ರಕ್ಷತು ವೇದಜಿಹ್ವಃ ॥ ೧೫ ॥**

೧೫. ಶ್ರುತಿಗಳು ಯಾವಾತನ ಕೀರ್ತಿಯನ್ನು ಗಾನಮಾಡುತ್ತಿವೆಯೋ ಆತನು ನನ್ನ ಕಿವಿಗಳನ್ನು ಕಾಪಾಡಲಿ; ಕಪಾಲಧರನಾದ ಶಿವನು ನನ್ನ ಕೆನ್ನೆಯನ್ನು ಕಾಪಾಡಲಿ ; ಪಂಚಮುಖಗಳಿಂದೊಡಗೂಡಿದ ಶಿವನು ನನ್ನ ಮುಖವನ್ನು ಯಾವಾಗಲೂ ಕಾಪಾಡಲಿ ; ವೇದಗಳೆಂಬ ನಾಲಗೆಯುಳ್ಳ ಶಿವನು ನನ್ನ ನಾಲಗೆಯನ್ನು ಕಾಪಾಡಲಿ!

**ಕಂಠಂ ಗಿರೀಶೋಽವತು ನೀಲಕಂಠಃ**
**ಪಾಣಿದ್ವಯಂ ಪಾತು ಪಿನಾಕಪಾಣಿಃ ।**
**ದೋರ್ಮೂಲಮವ್ಯಾನ್ಮಮ ಧರ್ಮಬಾಹು-**
**ರ್ವಕ್ಷಸ್ಥಲಂ ದಕ್ಷಮಖಾನ್ತಕೋಽವ್ಯಾತ್ ॥ ೧೬ ॥**

೧೬. ಕೈಲಾಸಗಿರಿಯ ಒಡೆಯನಾದ ನೀಲಕಂಠನು ನನ್ನ ಕಂಠವನ್ನು ಕಾಪಾಡಲಿ; ಪಿನಾಕವೆಂಬ ಬಿಲ್ಲನ್ನು ಹಿಡಿದಿರುವ ಶಿವನು ನನ್ನ ಎರಡು ಕೈಗಳನ್ನು ಕಾಪಾಡಲಿ ; ಧರ್ಮವೆಂಬ ಭುಜವುಳ್ಳ ಶಿವನು ನನ್ನ ಭುಜವನ್ನು ಕಾಪಾಡಲಿ ; ದಕ್ಷಯಜ್ಞವನ್ನು ನಾಶಪಡಿಸಿದಾತನು ನನ್ನ ಎದೆಯನ್ನು ಕಾಪಾಡಲಿ!

**ಮಮೋದರಂ ಪಾತು ಗಿರೀಂದ್ರಧನ್ವಾ**
**ಮಧ್ಯಂ ಮಮಾವ್ಯಾನ್ಮದನಾನ್ತಕಾರೀ ।**
**ಹೇರಂಬತಾತೋ ಮಮ ಪಾತು ನಾಭಿಂ**
**ಪಾಯಾತ್ಕಟಿಂ ಧೂರ್ಜಟಿರೀಶ್ವರೋ ಮೇ ॥ ೧೭ ॥**

೧೭. ಪರ್ವತಶ್ರೇಷ್ಠವಾದ ಮೇರುಪರ್ವತವನ್ನು ಬಿಲ್ಲಾಗಿ ಮಾಡಿಕೊಂಡ ಶಿವನು ನನ್ನ ಹೊಟ್ಟೆಯನ್ನು ಕಾಪಾಡಲಿ ; ಮನ್ಮಥನನ್ನು ನಾಶಗೊಳಿಸಿದಾತನು ನನ್ನ ಶರೀರಮಧ್ಯಭಾಗವನ್ನು ಕಾಪಾಡಲಿ ; ಗಣಪತಿಯ ತಂದೆಯು ನನ್ನ ಹೊಕ್ಕುಳನ್ನು ಕಾಪಾಡಲಿ ಧೂಮ್ರವರ್ಣದ ಜಟೆಯುಳ್ಳ ಈಶ್ವರನು ನನ್ನ ಸೊಂಟವನ್ನು ಕಾಪಾಡಲಿ !

**ಊರುದ್ವಯಂ ಪಾತು ಕುಬೇರಮಿತ್ರೋ**
**ಜಾನುದ್ವಯಂ ಮೇ ಜಗದೀಶ್ವರೋಽವ್ಯಾತ್**
**ಜಂಘಾಯುಗಂ ಪುಂಗವಕೇತುರವ್ಯಾ-**
**ತ್ಪಾದೌ ಮಮಾವ್ಯಾತ್ಸುರವಂದ್ಯಪಾದಃ ॥ ೧೮ ॥**

೧೮. ಕುಬೇರನ ಗೆಳೆಯನಾದ ಶಿವನು ನನ್ನ ಎರಡು ತೊಡೆಗಳನ್ನು ಕಾಪಾಡಲಿ ; ಜಗತ್ತಿಗೆಲ್ಲ ಒಡೆಯನಾದವನು ನನ್ನ ಎರಡು ಮೊಣಕಾಲುಗಳನ್ನು ಕಾಪಾಡಲಿ ; ವೃಷಭಧ್ವಜನಾದ ಶಿವನು ನನ್ನ ಎರಡು ಕೆಳಕಾಲುಗಳನ್ನು ಕಾಪಾಡಲಿ ; ದೇವತೆಗಳು ನಮಸ್ಕರಿಸುವದಕ್ಕೆ ಯೋಗ್ಯವಾದ ಪಾದಗಳುಳ್ಳ ಶಿವನು ನನ್ನ ಹೆಜ್ಜೆಗಳೆರಡನ್ನೂ ಕಾಪಾಡಲಿ !

ಇಲ್ಲಿಯವರೆಗೆ ತಲೆಯಿಂದ ಹಿಡಿದು ಹೆಜ್ಜೆಯವರೆಗಿನ ಅವಯವಗಳನ್ನು ಪರಮೇಶ್ವರನು ಕಾಪಾಡಲೆಂದು ಪ್ರಾರ್ಥಿಸಿರುತ್ತದೆ. ಮನುಷ್ಯನ ಶರೀರವೇ ಅನಿತ್ಯ ; ಅದು ಇರುವಷ್ಟು ಕಾಲವೂ ಅದರ ಒಂದೊಂದು ಅವಯವಕ್ಕೂ ಅನಂತವಾದ ಅಪಾಯಗಳಿರುವವು. ಆದರೂ ಈ ಶರೀರದಿಂದಲೇ ನಾವು ಧರ್ಮವನ್ನು ಮಾಡಿ ಪರಗತಿಯನ್ನು ಸಂಪಾದಿಸಿಕೊಳ್ಳಬೇಕಾಗಿರುತ್ತದೆ. ಈ ಶರೀರವನ್ನು ಆರೋಗ್ಯಸ್ಥಿತಿಯಲ್ಲಿಯೂ ಅನಪಾಯಸ್ಥಿತಿಯಲ್ಲಿಯೂ ಇಟ್ಟುಕೊಳ್ಳುವುದಕ್ಕೆ ಮನುಷ್ಯನು ತನ್ನ

ಪ್ರಯತ್ನದಿಂದಲೇ ಏನೂ ಮಾಡಲಾರನು ; ಅವನು ಮಾಡಬಹುದಾದ ಅಲ್ಪಸ್ವಲ್ಪ ಪ್ರಯತ್ನವೂ ಆ ಪರಮೇಶ್ವರನ ನಿಯಮಗಳನ್ನನುಸರಿಸಿ ಆದಾಗಲೇ, ಆತನ ಅನುಗ್ರಹದಿಂದಲೇ, ಸಫಲವಾಗಬೇಕಾಗಿರುತ್ತದೆ. ಆದ್ದರಿಂದ ವಿವೇಕಿಯಾದವನು ಈ ರಹಸ್ಯವನ್ನರಿತು ಮೊದಲಿನಿಂದಲೂ ತನ್ನ ಸಮಸ್ತಶರೀರವನ್ನೂ ಅದರ ವ್ಯಾಪಾರಗಳನ್ನೂ ಆ ಪರಮಶಿವನಿಗೇ ಕಾಣಿಕೆಯಾಗಿ ಒಪ್ಪಿಸಿಬಿಡಬೇಕು. ಆಗ ಅವನು ಮಾಡುವ ಪ್ರಯತ್ನಗಳೆಲ್ಲವೂ ಸಫಲಪ್ರಯತ್ನ ಗಳಾಗುತ್ತವೆ. ಅವನ ಸರ್ವಾಂಗಗಳೂ ಇರಬೇಕಾದ ಸ್ಥಿತಿಯಲ್ಲಿದ್ದು ಈ ಜನ್ಮದಲ್ಲಿ ಅವುಗಳಿಂದಾಗ ಬೇಕಾಗಿರುವ ಪ್ರಯೋಜನವನ್ನು ಮಾಡಿಕೊಡುವಂತೆ ಆ ಮಹಾದೇವನು ಅನುಗ್ರಹಿಸುತ್ತಾನೆ.

ಒಂದೊಂದು ಅವಯವವನ್ನೂ ಕಾಪಾಡಲೆಂದು ಪ್ರಾರ್ಥಿಸುವಾಗಲೂ ಪರಮೇಶ್ವರನಿಗೆ ಒಂದೊಂದು ವಿಶೇಷಣವನ್ನು ಕೊಟ್ಟಿರುತ್ತದೆ. ಚಂದ್ರಮೌಳಿ, ಫಾಲನೇತ್ರ, ಪಂಚವಕ್ತ್ರ, ನೀಲಕಂಠ, ಪಿನಾಕಪಾಣಿ, ದಕ್ಷಮಖಾಂತಕ, ಗಿರೀಂದ್ರ ಧನ್ವ, ಮದನಾಂತಕಾರಿ - ಮುಂತಾಗಿ ಇಲ್ಲಿ ಕೊಟ್ಟಿರುವ ಒಂದೊಂದು ವಿಶೇಷಣವೂ ಅರ್ಥವತ್ತಾಗಿರುತ್ತದೆ. ಇವುಗಳ ಅಭಿಪ್ರಾಯವನ್ನು ತಿಳಿಯುವದಕ್ಕೆ ಶೈವಪುರಾಣಗಳನ್ನು ಭಕ್ತಿಯಿಂದ ಶ್ರವಣಮಾಡಬೇಕು. ಪರಮೇಶ್ವರನ ಶಕ್ತಿ, ಜ್ಞಾನ, ವೀರ್ಯ, ಔದಾರ್ಯ, ಐಶ್ವರ್ಯ, ವೈರಾಗ್ಯ, ಪರೋಪಕಾರಬುದ್ಧಿ, ಕರುಣೆ, ಭಕ್ತಪ್ರೇಮ- ಮುಂತಾದ ಕಲ್ಯಾಣಗುಣಗಳು ಇಂಥ ವಿಶೇಷಣಗಳಲ್ಲಿ ಅಡಗಿರುವವೆಂಬುದನ್ನು ಮನಸ್ಸಿಗೆ ಹತ್ತಿಸಿಕೊಳ್ಳಬೇಕು. ಆಗಲೇ ಶಿವಕವಚವನ್ನು ಹೇಳುವಾಗ ಮನಸ್ಸಿನ ಮೇಲೆ ಉತ್ತಮವಾದ ಪರಿಣಾಮವಾಗುತ್ತದೆ.

**ಮಹೇಶ್ವರಃ ಪಾತು ದಿನಾದಿಯಾಮೇ**
**ಮಾಂ ಮಧ್ಯಯಾಮೇಽವತು ವಾಮದೇವಃ ।**
**ತ್ರಿಲೋಚನಃ ಪಾತು ತೃತೀಯಯಾಮೇ**
**ವೃಷಧ್ವಜಃ ಪಾತು ದಿನಾನ್ತ್ಯಯಾಮೇ** ॥ ೧೯ ॥

೧೯. ದಿವಸದ ಮೊದಲನೆಯ ಯಾಮದಲ್ಲಿ ನನ್ನನ್ನು ಮಹೇಶ್ವರನು ಕಾಪಾಡಲಿ ; ನಡುವಿನ ಯಾಮದಲ್ಲಿ ವಾಮದೇವನು ಕಾಪಾಡಲಿ ; ಮುಕ್ಕಣ್ಣನು

ಮೂರನೆಯ ಯಾಮದಲ್ಲಿ ಕಾಪಾಡಲಿ ; ವೃಷಭಧ್ವಜನು ದಿವಸದ ನಾಲ್ಕನೆಯ ಯಾಮದಲ್ಲಿ ಕಾಪಾಡಲಿ ;

ಪರಮೇಶ್ವರನು ಕಾಲವನ್ನು ಮೀರಿರುವದರಿಂದಲೂ ಕಾಲಕ್ಕೂ ಕಾರಣನಾಗಿರುವದರಿಂದಲೂ ಕಾಲರೂಪದಿಂದ ಆತನೇ ಲೋಕಗಳನ್ನೆಲ್ಲ ವಶಗೊಳಿಸಿಕೊಳ್ಳುತ್ತಿರುವದರಿಂದಲೂ ಆತನು ಕಾಲಕ್ಕೆ ಒಳಗಾಗಿರುವ ನಮ್ಮನ್ನು ಸಕಲಕಾಲಗಳಲ್ಲಿಯೂ ಕಾಲಕೃತವಾದ ಅಪಾಯಗಳಿಂದ ಕಾಪಾಡಲಿ - ಎಂದು ಪ್ರಾರ್ಥಿಸುವದು ಯೋಗ್ಯವೇ ಆಗಿರುತ್ತದೆ. ಈ ಶ್ಲೋಕದಲ್ಲಿಯೂ ಮುಂದಿನ ಶ್ಲೋಕದಲ್ಲಿಯೂ ಈ ಪ್ರಾರ್ಥನೆಯನ್ನು ಮಾಡಿರುತ್ತದೆ.

**ಪಾಯಾನ್ನಿಶಾದೌ ಶಶಿಶೇಖರೋ ಮಾಂ**
**ಗಂಗಾಧರೋ ರಕ್ಷತು ಮಾಂ ನಿಶೀಥೇ ।**
**ಗೌರೀಪತಿಃ ಪಾತು ನಿಶಾವಸಾನೇ**
**ಮೃತ್ಯುಂಜಯೋ ರಕ್ಷತು ಸರ್ವಕಾಲಮ್ ॥ ೨೦ ॥**

೨೦. ರಾತ್ರಿಯ ಮೊದಲುಭಾಗದಲ್ಲಿ ಚಂದ್ರಶೇಖರನು ನನ್ನನು ಕಾಪಾಡಲಿ ; ಗಂಗಾಧರನು ನನ್ನನ್ನು ರಾತ್ರಿ ಸರಿಹೊತ್ತಿನಲ್ಲಿ ಕಾಪಾಡಲಿ ಗೌರೀಪತಿಯು ರಾತ್ರೆಯ ಕೊನೆಯಲ್ಲಿ ಕಾಪಾಡಲಿ ; ಮೃತ್ಯುಂಜಯನು ನನ್ನನ್ನು ಸರ್ವಕಾಲದಲ್ಲಿಯೂ ಕಾಪಾಡಲಿ ;

ಹಗಲು ರಾತ್ರೆಗಳೆಂಬ ಭೇದವೇನೂ ಪರಮೇಶ್ವರನಿಗೆ ಇರುವದಿಲ್ಲ ; ಆದ್ದರಿಂದ ಹಗಲಿನಲ್ಲಿ ಹೇಗೋ ರಾತ್ರೆಯಲ್ಲಿಯೂ ಹಾಗೆಯೇ ನಮ್ಮನ್ನು ಆತನು ಕಾಪಾಡಬಲ್ಲನು.

**ಂ ರಕ್ಷತು ಶಂಕರೋ ಮಾಂ**
**ಸ್ಥಾಣುಃ ಸದಾ ಪಾತು ಬಹಿಃಸ್ಥಿತಂ ಮಾಮ್ ।**
**ತದನ್ತರೇ ಪಾತು ಪತಿಃ ಪಶೂನಾಂ**
**ಸದಾಶಿವೋ ರಕ್ಷತು ಮಾಂ ಸಮನ್ತಾತ್ ॥ ೨೧ ॥**

೨೧. ಒಳಗಿರುವಾಗ ನನ್ನನ್ನು ಶಂಕರನು ಕಾಪಾಡಲಿ ; ಹೊರಗೆ ಇರುವಾಗಲೆಲ್ಲ ನನ್ನನ್ನು ಸ್ಥಾಣುವು ಕಾಪಾಡಲಿ; ನಡುವೆ ಇರುವಾಗ ಪಶುಪತಿಯು ಕಾಪಾಡಲಿ; ಎಲ್ಲೆಲ್ಲಿಯೂ ನನ್ನನ್ನು ಸದಾಶಿವನು ಕಾಪಾಡಲಿ!

ಕಾಲಕ್ಕೆ ಹೇಗೆ ಪರಮೇಶ್ವರನು ಅತೀತನಾಗಿ ಅದನ್ನು ವಶದಲ್ಲಿಟ್ಟು ಕೊಂಡಿರುವನೋ ಆಕಾಶವನ್ನೂ ಹಾಗೆಯೇ ವಶದಲ್ಲಿಟ್ಟುಕೊಂಡಿರುತ್ತಾನೆ. ಆದ್ದರಿಂದ ಅವನಿಗೆ ಅಲ್ಲಿ, ಇಲ್ಲಿ - ಎಂಬ ಭೇದವಿಲ್ಲ ; ಎಲ್ಲೆಲ್ಲಿಯೂ ಇರುತ್ತಾನಾದ್ದರಿಂದ ಅವನು ನಮ್ಮನ್ನು ಸರ್ವದೇಶಗಳಲ್ಲಿಯೂ ಕಾಪಾಡಬಲ್ಲನು.

**ತಿಷ್ಠನ್ತಮವ್ಯಾದ್ಭುವನೈಕನಾಥಃ**
**ಪಾಯಾದ್ ವ್ರಜನ್ತಂ ಪ್ರಮಥಾಧಿನಾಥಃ ।**
**ವೇದಾನ್ತವೇದ್ಯೋಽವತು ಮಾಂ ನಿಷಣ್ಣಂ**
**ಮಾಮವ್ಯಯಃ ಪಾತು ಶಿವಃ ಶಯಾನಮ್ ॥ ೨೨ ॥**

೨೨. ಸಕಲಲೋಕಗಳಿಗೂ ತಾನೊಬ್ಬನೇ ಒಡೆಯನಾಗಿರುವ ಪರಮಶಿವನು ನಿಂತಿರುವ ನನ್ನನ್ನು ಕಾಪಾಡಲಿ; ಪ್ರಮಥಗಣಗಳಿಗೊಡೆಯನಾದ ಶಿವನು ನಡೆಯುತ್ತಿರುವಾಗ ನನ್ನನ್ನು ಕಾಪಾಡಲಿ ; ವೇದಾಂತವಚನಗಳಿಂದ ತಿಳಿಯಬರುವ ಸ್ವರೂಪವುಳ್ಳ ಶಿವನು ನನ್ನನ್ನು ಕುಳಿತಿರುವಾಗ ಕಾಪಾಡಲಿ ; ಅವ್ಯಯನಾದ ಶಿವನು ನನ್ನನ್ನು ಮಲಗಿರುವಾಗ ಕಾಪಾಡಲಿ!

ನಾವು ಯಾವ ಅವಸ್ಥೆಯಲ್ಲಿಯೇ ಇರಲಿ, ಪರಮೇಶ್ವರನು ನಮ್ಮನ್ನು ನೋಡಿಕೊಳ್ಳುವದಕ್ಕೆ ಸಿದ್ಧನಾಗಿರುತ್ತಾನೆ. ನಾವು ಮಾತ್ರ ಆತನ ಸ್ಮರಣೆಯನ್ನು ಬಿಡದೆ ಇರಬೇಕು.

**ಮಾರ್ಗೇಷು ಮಾಂ ರಕ್ಷತು ನೀಲಕಂಠಃ**
**ಶೈಲಾದಿದುರ್ಗೇಷು ಪುರತ್ರಯಾರಿಃ ।**
**[illegible]ಣ್ಯವಾಸಾದಿಮಹಾಪ್ರವಾಸೇ**
**ಪಾಯಾನ್ಮೃಗವ್ಯಾಧ ಉದಾರಶಕ್ತಿಃ ॥ ೨೩ ॥**

೨೩. ಮಾರ್ಗಗಳಲ್ಲಿ ನಡೆಯುತ್ತಿರುವಾಗ ನನ್ನನ್ನು ನೀಲಕಂಠನು ಕಾಪಾಡಲಿ ; ಬೆಟ್ಟವೇ ಮುಂತಾದ ದುರ್ಗಮಪ್ರದೇಶಗಳಲ್ಲಿ ತ್ರಿಪುರಾರಿಯು ನನ್ನನ್ನು ಕಾಪಾಡಲಿ ; ಅರಣ್ಯವಾಸವೇ ಮುಂತಾದ ಸ್ಥಳದಲ್ಲಿ ದೀರ್ಘಪ್ರಯಾಣ ಮಾಡುತ್ತಿರುವಾಗ ಮಹಾಶಕ್ತಿಯಾದ ಮೃಗವ್ಯಾಧರೂಪಿಯಾದ ಶಿವನು ನನ್ನನ್ನು ಕಾಪಾಡಲಿ !

ನಮಗೆ ಪರಿಚಿತವಾದ ಸ್ಥಳವನ್ನು ಬಿಟ್ಟು ದೂರದೇಶಕ್ಕೆ ಹೋದಾಗಲೂ ಕಾಡು, ಬೆಟ್ಟ, ಗುಹೆ-ಮುಂತಾದ ನಿರ್ಜನವಾದ ಮತ್ತು ಆತಂಕ ಬಹಳವಾದ ಪ್ರದೇಶಗಳಲ್ಲಿರುವಾಗಲೂ ಬಹಳವಾಗಿ ಅಂಜಿಕೆಯಾಗುವದು ಸ್ವಭಾವವು. ಅಂಥ ಸ್ಥಳಗಳಲ್ಲೆಲ್ಲ ಪರಮೇಶ್ವರನು ಸನ್ನಿಹಿತನಾಗಿರುವನೆಂಬುದನ್ನು ಮನದಂದು ಆತನ ಸ್ಮರಣೆಯಲ್ಲಿದ್ದರೆ ಮನಸ್ಸಿನ ಅಳುಕು ತಪ್ಪಿಹೋಗುತ್ತದೆ.

**ಕಲ್ಪಾನ್ತಕಾಟೋಪಪಟುಪ್ರಕೋಪ-**
**ಸ್ಫುಟಾಟ್ಟಹಾಸೋಚ್ಚಲಿತಾಂಡಕೋಶಃ ।**
**ಘೋರಾರಿಸೇನಾರ್ಣವದುರ್ನಿವಾರ-**
**ಮಹಾಭಯಾದ್ರಕ್ಷತು ವೀರಭದ್ರಃ॥ ೨೪ ॥**

೨೪. ಕಲ್ಪಾವಸಾನದಲ್ಲಿ ಹೆಚ್ಚಿದ ಮಹಾಕೋಪದಿಂದುಂಟಾದ ಅಟ್ಟಹಾಸದಿಂದ ಬ್ರಹಾಂಡವನ್ನೇ ಅಲುಗಿಸುವ ವೀರಭದ್ರನು, ನಿವಾರಿಸುವ ದಕ್ಕಸದಳವಾದ ಭಯಂಕರವಾದ ಶತ್ರುಸೇನೆಯೆಂಬ ಸಮುದ್ರದ ಮಿಗಿಲಾದ ಅಂಜಿಕೆಯು ಇಲ್ಲದಂತೆ ಕಾಪಾಡಲಿ !

**ಪತ್ತ್ಯಶ್ವಮಾತಂಗರಥಾವರೂಥ**
**ಸಹಸ್ರಲಕ್ಷಾಯುತಕೋಟಿಭೀಷಣಮ್ ।**
**ಅಕ್ಷೌಹಿಣೀನಾಂ ಶತಮಾತತಾಯಿನಾಂ**
**ಛಿನ್ದ್ಯಾನ್ಮೃಡೋ ಘೋರಕುಠಾರಧಾರಯಾ ॥ ೨೫ ॥**

೨೫. ಪದಾತಿಗಳು, ಕುದುರೆಗಳು, ಆನೆಗಳು, ರಥಗಳು - ಇವುಗಳು ಸಾವಿರಾರು, ಲಕ್ಷಗಟ್ಟಲೆ, ಹತ್ತುಸಾವಿರಗಟ್ಟಲೆ, ಕೋಟಿಗಟ್ಟಲೆ ಇರುವದರಿಂದ

ಭಯಂಕರವಾಗಿರುವ ಆತತಾಯಿಗಳ ನೂರು ಅಕ್ಷೋಹಿಣಿಸೇನೆಯನ್ನು ಮೃಡನು ಭಯಂಕರವಾದ ತನ್ನ ಕೊಡಲಿಯ ಅಲುಗಿನಿಂದ ಕತ್ತರಿಸಿಹಾಕಲಿ!

ಆತತಾಯಿಗಳೆಂದರೆ ಬೆಂಕಿಹಾಕುವದು, ವಿಷವನ್ನು ಹಾಕುವದು - ಮುಂತಾದ ದ್ರೋಹವನ್ನು ಮಾಡಿದವರು. ತಮ್ಮ ಆಟವು ಸ್ವಲ್ಪವೂ ನಾಗದೆ ಇರುವಾಗ ಅಂಥವರು ಶತ್ರುವನ್ನು ನೇರಾಗಿ ಯುದ್ಧದಲ್ಲಿಯೇ ಕೊಂದು ಹಾಕುವರು; ಅಥವಾ ಯುದ್ಧದಲ್ಲಿ ಅವರು ಅನ್ಯಾಯವಾಗಿ ವರ್ತಿಸಿ ಬೆಂಕಿ, ವಿಷ - ಮುಂತಾದವುಗಳನ್ನು ಉಪಯೋಗಿಸಲೂಬಹುದು. ಅಂಥ ಪಾಪಿಗಳ ದಂಡು ಪರಮಶಿವನ ಭಕ್ತನೂ ಧರ್ಮಯುದ್ಧಪ್ರಿಯನೂ ಆಗಿರುವ ವೀರಕ್ಷತ್ರಿಯನ ಮೇಲೆ ಲಕ್ಷಗಟ್ಟಲೆಯಾಗಿ ಬಿದ್ದರೂ ಅವನಿಗೆ ಯಾವ ತೊಂದರೆಯೂ ಆಗುವದಿಲ್ಲ; ಏಕೆಂದರೆ ಧರ್ಮಪಕ್ಷಪಾತಿಯಾದ ಶಿವನು ಅವನ ರಕ್ಷಕನಾಗಿರುತ್ತಾನೆ.

**ನಿಹನ್ತು ದಸ್ಯೂನ್ ಪ್ರಲಯಾನಲಾರ್ಚಿ-**
**ರ್ಜ್ವಲತ್ತ್ರಿಶೂಲಂ ತ್ರಿಪುರಾನ್ತಕಸ್ಯ ।**
**ಶಾರ್ದೂಲಸಿಂಹರ್ಕ್ಷವೃಕಾದಿಹಿಂಸ್ರಾನ್**
**ಸಂತ್ರಾಸಯತ್ವೀಶಧನುಃ ಪಿನಾಕಃ ॥ ೨೬ ॥**

೨೬. ಪ್ರಲಯಕಾಲದ ಅಗ್ನಿಯ ಜ್ವಾಲೆಗಳಂತೆ ಭುಗಿಲೆನ್ನುತ್ತಿರುವ ತ್ರಿಪುರಾಂತಕನ ತ್ರಿಶೂಲವು ದಸ್ಯುಗಳನ್ನು ಕೊಲ್ಲಲಿ! ಹುಲಿ, ಸಿಂಹ, ಕರಡಿ, ತೋಳ - ಮುಂತಾದ ಹಿಂಸ್ರಮೃಗಗಳನ್ನು ಈಶ್ವರನ ಪಿನಾಕಧನುಸ್ಸು ಹೆದರಿಸಲಿ!

ದಸ್ಯುಗಳೆಂದರೆ ಧರ್ಮಕ್ಕೆ ಕಟ್ಟುಬೀಳದೆ ಪ್ರಾಂತಪ್ರದೇಶದಲ್ಲಿದ್ದುಕೊಂಡು ಜನರ ಮೇಲೆ ಆಗಾಗ್ಗೆ ಬಿದ್ದು ತೊಂದರೆಮಾಡುತ್ತಿರುವ ಜನರು. ಅಂಥವರನ್ನು ಪ್ರಜಾಪಾಲನತತ್ಪರನಾದ ರಾಜನು ದಮನಮಾಡಬೇಕಷ್ಟೆ? ರಾಜನು ಶಿವಭಕ್ತನಾಗಿದ್ದರೆ ಆ ಕೆಲಸಕ್ಕೆ ಈಶ್ವರನ ಸಹಾಯವಾಗುವದು. ಇದರಂತೆಯೇ ಜನರಿಗೆ ತೊಂದರೆಯನ್ನು ಕೊಡುವ ದುಷ್ಟಮೃಗಗಳ ಭೀತಿಯೂ ಅಂಥವನ ರಾಜ್ಯದಲ್ಲಿ

ಕಡಿಮೆಯಾಗಿರುವದು. ಪ್ರಜೆಗಳಲ್ಲಿ ಯಾರು ಶಿವಭಕ್ತರಾಗಿರುವರೋ ಅವರಿಗೆ ಅಂಥ ಉಪಟಳವಿರುವದಿಲ್ಲ.

**ದುಃಸ್ವಪ್ನದುಶ್ಶಕುನದುರ್ಗತಿದೌರ್ಮನಸ್ಯ -**
**ದುರ್ಭಿಕ್ಷದುರ್ವ್ಯಸನದುಸ್ಸಹದುರ್ಯಶಾಂಸಿ ।**
**ಉತ್ಪಾತತಾಪವಿಷಭೀತಿಮಸದ್ಗ್ರಹಾರ್ತಿಂ**
**ವ್ಯಾಧೀಂಶ್ಚ ನಾಶಯತು ಮೇ ಜಗತಾಮಧೀಶಃ ॥ ೨೭ ॥**

೨೭. ಕೆಟ್ಟಕನಸು, ಕೆಟ್ಟಶಕುನ, ಕೆಟ್ಟಗತಿ, ದುಮ್ಮಾನ, ಕ್ಷಾಮ, ದುಃಖಕರವಾದ ಆಚಾರ, ಸಹಿಸುವದಕ್ಕೆ ಕಷ್ಟವಾದ ಅಪಕೀರ್ತಿಗಳು, ಉತ್ಪಾತಗಳಿಂದಾಗುವ ಸಂಕಟ, ವಿಷದ ಭಯ, ಕೆಟ್ಟ ಗ್ರಹಗಳಿಂದಾಗುವ ಸಂಕಟ - ಇವುಗಳನ್ನೂ ವ್ಯಾಧಿಗಳನ್ನೂ ಸಕಲಲೋಕಗಳಿಗೂ ಒಡೆಯನಾದ ಮಹೇಶ್ವರನು ನಾಶಗೊಳಿಸಲಿ!

ಮುಖ್ಯವಾಗಿ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ - ಎಂಬ ಮೂರು ಬಗೆಯಲ್ಲಿ ಯಾವ ಬಗೆಯ ತಾಪವಾಗಲಿ ಶಿವಭಕ್ತನಿಗೆ ಉಂಟಾಗುವದಿಲ್ಲ. ಆದ್ದರಿಂದ ಯಾವಾಗಲೂ ತಾಪತ್ರಯದಿಂದ ಪರಿಹಾರಮಾಡುವ ಶಿವಸ್ಮರಣೆಯನ್ನು ಕವಚವಾಗಿಟ್ಟುಕೊಳ್ಳಬೇಕು.

## ೧೨. ಸಹಸ್ರಾಕ್ಷರಮಂತ್ರ

ಶಿವಕವಚದಲ್ಲಿ ಪ್ರಧಾನಸ್ತೋತ್ರದ ಮಂತ್ರವೆಂದರೆ ಗದ್ಯಮಯವಾಗಿರುವ ಸಹಸ್ರಾಕ್ಷರಮಂತ್ರವು. ಮಂತ್ರಸಾಹಿತ್ಯದಲ್ಲೆಲ್ಲ ಇದು ನಿರುಪಮವಾಗಿರುತ್ತದೆ. ಇದನ್ನು ಭಕ್ತಿವಿಶ್ವಾಸಗಳಿಂದ ಹೇಳುವಾಗ ರೋಮಾಂಚವಾಗುತ್ತದೆ, ಪರಮೇಶ್ವರನ ಸನ್ನಿಧಿಯಲ್ಲಿದೇನೆಂಬ ಭಾವವಾಗುತ್ತದೆ, ಮೈಮರೆತುಹೋಗುತ್ತದೆ. ಈಶ್ವರನ ನಿಕಟಸಂಬಂಧವುಂಟಾಗಿ ನಮ್ಮ ಮಾನುಷಸ್ವಭಾವದಿಂದ ಎದ್ದು ಉತ್ತಮವಾದ ಒಂದಾನೊಂದು ಭೂಮಿಕೆಯನ್ನು ಏರಿ ಆನಂದವನ್ನು ಅನುಭವಿಸುತ್ತಿರುವಂತೆ ತೋರುತ್ತದೆ. ಇದನ್ನು ಯಾರು ಪ್ರತಿದಿನವೂ ಶ್ರದ್ಧೆಯಿಂದ ಪಠಿಸುವರೋ ಯಾರು ಶಿವಭಾವನೆಯನ್ನು ಮಾಡಿರುವರೋ ಅವರಿಗೆ ಅಶಿವಜಗತ್ತೇ ಇರುವದಿಲ್ಲ.

ಇದರಿಂದಾಗುವ ಫಲವನ್ನು ಮುಂದಿನ ಫಲಶ್ರುತಿಯಲ್ಲಿಯೇ ಕಾಣಬಹುದಾದ್ದರಿಂದ ಇಲ್ಲಿ ಈ ವರ್ಣನೆಯನ್ನು ಇಷ್ಟಕ್ಕೇ ನಿಲ್ಲಿಸಿರುತ್ತದೆ.

**ಸಹಸ್ರಾಕ್ಷರಮಂತ್ರ**ದಲ್ಲಿ ಮೊದಲು ಸಾವಿರ ಅಕ್ಷರಗಳೇ ಇದ್ದವೋ ಅಥವಾ ಅನೇಕವೆಂ ರ್ಥದಲ್ಲಿ ಸಹಸ್ರಶಬ್ದವನ್ನು ಉಪಯೋಗಿಸಿರುತ್ತಾರೋ ಈಗ ಹೇಳುವದಕ್ಕೆ ರುವಂತಿಲ್ಲ. ಬ್ರಹ್ಮೋತ್ತರಖಂಡದಲ್ಲಿರುವದಕ್ಕಿಂತಲೂ ಕೆಲವು ಹೆಚ್ಚಿನ ವಿಶೇಷಣಗಳು ಈಗಿನ ಸ್ತೋತ್ರಪಾಠದಲ್ಲಿ ಕಂಡುಬರುತ್ತವೆ. ಕೆಲವು ಕಡೆಗಳಲ್ಲಿ ಪಾಠಾಂತರಗಳೂ ಇವೆ. ಆದರೂ ಈಗ ಇರುವಂತೆ ಪಾಠವನ್ನು ಹೇಳಿಕೊಳ್ಳುವದರಲ್ಲಿ ಯಾವ ಅಡ್ಡಿಯೂ ಇಲ್ಲ. ಮುಖ್ಯವಾಗಿ ಪರಮಾತ್ಮನ ಸಗುಣನಿರ್ಗುಣರೂಪಗಳೆರಡನ್ನೂ ಇಲ್ಲಿ ಹೇಳಿರುತ್ತದೆ ; ಸಕಲಭೀತಿಗಳ ಭಂಜನೆಯನ್ನೂ ಮಾಡಬಲ್ಲ ಘೋರರೂಪವನ್ನೂ ಮನಸ್ಸಿಗೆ ಜ್ಞಾನವನ್ನೂ ಶಾಂತಿಸುಖಗಳನ್ನೂ ಕೊಡಬಲ್ಲ ಶಾಂತರೂಪವನ್ನೂ ವರ್ಣನೆಮಾಡಿರುತ್ತದೆ. ಇದುವರೆಗೆ ಹೇಳಿರುವ ನ್ಯಾಸಜಪಧ್ಯಾನಗಳನ್ನು ಯಥಾಕ್ರಮವಾಗಿ ಮಾಡಿ ಮನಸ್ಸನ್ನು ಸಂಸ್ಕಾರಗೊಳಿಸಿಕೊಂಡಿರುವವರಿಗೆ ಈ ಸಹಸ್ರಾಕ್ಷರಮಂತ್ರದ ಪಠನದ ಫಲವು ಪೂರ್ಣವಾಗಿ ಮನದಟ್ಟಾಗುವದು. ಅದರ ಆನಂದವನ್ನು ಅಂಥವರು ತಾವು ತಾವೇ ಅನುಭವಿಸಿ ತಿಳಿಯಬೇಕು. ಇಲ್ಲಿ ನಾವು ಮಂತ್ರವನ್ನು ಉದ್ದಕ್ಕೆ ಬರೆಯದೆ ಭಾಗಭಾಗವಾಗಿ ಕೊಟ್ಟು ಅಲ್ಲಲ್ಲಿ ಕೆಲವು ವಿಚಾರಗಳನ್ನು ಪಾಠಕರ ಲಕ್ಷ್ಯಕ್ಕೆ ತರುವೆವು.

**೧. 'ಓಂ ನಮೋ ಭಗವತೇ ಸದಾಶಿವಾಯ, ಸಕಲತತ್ತ್ವಾತ್ಮಕಾಯ, (ಸರ್ವಮನ್ತ್ರಸ್ವರೂಪಾಯ, ಸರ್ವಯನ್ತ್ರಾಧಿಷ್ಠಿತಾಯ, ಸರ್ವತನ್ತ್ರ ಸ್ವರೂಪಾಯ,) ಸಕಲತತ್ತ್ವವಿದೂರಾಯ ॥'**

ಈ ಭಾಗದಲ್ಲಿ ಪರಮೇಶ್ವರನ ಮಹಿಮೆಯನ್ನು ಕೊಂಡಾಡಿರುತ್ತದೆ. ಆತನು **ಭಗವಂತನು,** ಎಂದರೆ ಜ್ಞಾನ, ವೈರಾಗ್ಯ, ಯಶಸ್ಸು, ಸಂಪತ್ತು, ಧರ್ಮ, ಐಶ್ವರ್ಯ - ಇವುಗಳು ಪೂರ್ಣವಾಗಿರುವಾತನು ; ಉತ್ಪತ್ತಿ ಪ್ರಲಯ, ಆಗುಹೋಗು, ವಿದ್ಯಾವಿದ್ಯೆಗಳನ್ನು ಅರಿತಿರುವವನು. **ಸದಾಶಿವನು,** ಎಂದರೆ

ನಿತ್ಯಮಂಗಳಸ್ವರೂಪನಾದವನು. **ಸಕಲತತ್ತ್ವಾತ್ಮಕನು,** ಶೈವಸಿದ್ಧಾಂತದಲ್ಲಿ ಒಪ್ಪಿರುವ ಮೂವತ್ತೆರಡು ತತ್ತ್ವಗಳಿಗೂ ಆತ್ಮನಾಗಿ ಅವುಗಳ ರೂಪದಿಂದಲೂ ತಾನೇ ಕಾಣಿಸಿಕೊಳ್ಳುತ್ತಿರುವಾತನು. **ಸರ್ವಮಂತ್ರಸ್ವರೂಪನು,** ಎಂದರೆ ಪ್ರತಿಯೊಂದು ಮಂತ್ರವೂ ಹೇಳುವ ದೇವತೆಯನ್ನು ತನ್ನ ವಿಭೂತಿಯಾಗುಳ್ಳವನು. ಆಯಾ ಮಂತ್ರವನ್ನು ತನ್ನ ವಿಭೂತಿಯಾಗುಳ್ಳವನು. **ಸರ್ವಮಂತ್ರಗಳಲ್ಲಿಯೂ ಅಧಿಷ್ಠಿತನಾಗಿರುವವನು;** ದೇವತೆಯನ್ನು ಪೂಜೆಮಾಡುವದಕ್ಕೆಂದು ಶಾಸ್ತ್ರೋಕ್ತವಾದ ಯಂತ್ರಗಳಿರುವವಷ್ಟೆ, ಅವುಗಳಲ್ಲೆಲ್ಲಾ ತನ್ನ ಒಂದೊಂದು ಅಂಶದಿಂದ ಸಂನಿಹಿತನಾಗಿರುವವನು. **ಸರ್ವತಂತ್ರಸ್ವರೂಪನು,** ಶೈವ, ಶಾಕ್ತೇಯ, ವೈಷ್ಣವ - ಮುಂತಾದ ತಂತ್ರಗಳೆಲ್ಲವೂ ಪರಮೇಶ್ವರನ ವಿಭೂತಿಯನ್ನೇ ವರ್ಣಿಸುವವು. ಸಕಲತತ್ತ್ವವಿದೂರನು, ಎಂದರೆ ಯಾವದೊಂದು ತತ್ತ್ವದ ಪರಿಚ್ಛೇದವೂ ಇಲ್ಲದೆ ಸ್ವತಂತ್ರನಾಗಿರುವಾತನು.

೨. **"(ಬ್ರಹ್ಮರುದ್ರಾವತಾರಿಣೇ), ನೀಲಕಂಠಾಯ, ಪಾರ್ವತೀ ಮನೋಹರಪ್ರಿಯಾಯ, ಸೋಮಸೂರ್ಯಾಗ್ನಿಲೋಚನಾಯ, ಭಸ್ಮೋದ್ಧೂಳಿತವಿಗ್ರಹಾಯ, ಮಹಾಮಣಿಮುಕುಟಧಾರಣಾಯ, ಮಾಣಿಕ್ಯಭೂಷಣಾಯ, ಸೃಷ್ಟಿಸ್ಥಿತಿಪ್ರಲಯಕಾಲರೌದ್ರಾವತಾರಾಯ, ದಕ್ಷಾಧ್ವರಧ್ವಂಸಕಾಯ, ಮಹಾಕಾಲಭೇದನಾಯ, ಮೂಲಾಧಾರೈಕ ನಿಲಯಾಯ, ತತ್ತ್ವಾತೀತಾಯ, ಗಂಗಾಧರಾಯ, ಸರ್ವದೇವಾಧಿ ದೇವಾಯ, ಷಡಾಶ್ರಯಾಯ, ವೇದಾನ್ತಸಾರಾಯ, ತ್ರಿವರ್ಗ ಸಾಧನಾಯ, ಅನನ್ತಕೋಟಿಬ್ರಹ್ಮಾಂಡನಾಯಕಾಯ, ಅನನ್ತವಾಸುಕಿ ತಕ್ಷಕಕರ್ಕೋಟಕಶಂಖಕುಲಿಕಪದ್ಮಮಹಾಪದ್ಮೇತ್ಯಷ್ಟಮಹಾನಾಗಕುಲ ಭೂಷಣಾಯ ॥"**

ಈ ಭಾಗದಲ್ಲಿ ವಿಶೇಷವಾಗಿ ಈಶ್ವರನ ಸಗುಣರೂಪವನ್ನು ವರ್ಣಿಸಿರುತ್ತದೆ. ಶಿವನು ತನ್ನ ಮಂಗಲಕರಸ್ವರೂಪವನ್ನೇ ಅಲ್ಲದೆ ಸೃಷ್ಟಿಗಾಗಿ ಬ್ರಹ್ಮ ಸ್ವರೂಪವನ್ನೂ ಲಯಕ್ಕಾಗಿ ರುದ್ರನ ರೂಪವನ್ನೂ ಧರಿಸುವನು. ಜಗತ್ತಿನ

ಹಿತಕ್ಕಾಗಿ ಹಾಲಾಹಲವನ್ನು ಪಾನಮಾಡಿ ತನ್ನ ಸ್ವಚ್ಛವಾದ ಶರೀರದ ಕೊರಳಿನ ಭಾಗದಲ್ಲಿ ಅದರ ಕಪ್ಪಿನ ಚಿಹ್ನೆಯನ್ನು ಶಾಶ್ವತವಾಗಿ ಧರಿಸಿ ನೀಲಕಂಠನೆಂದು ಪ್ರಸಿದ್ಧನಾಗಿರುತ್ತಾನೆ. ಹೀಗೆಯೇ ಪಾರ್ವತೀಮನೋಹರಪ್ರಿಯನೇ ಮುಂತಾದವು ಆತನ ಲೀಲೆಗಳನ್ನೂ ಗುಣಗಳನ್ನೂ ಸ್ಮರಣೆಗೆ ತರುವ ವಿಶೇಷಣಗಳಾಗಿರುತ್ತವೆ. **ಷಡಾಶ್ರಯ**ನೆಂದರೆ ಮೂಲಾಧಾರವೇ ಮುಂತಾದ ಆರು ಚಕ್ರಗಳಲ್ಲಿದ್ದುಕೊಂಡು ಯೋಗಿಗಳ ಅನುಭವಕ್ಕೆ ಬರುವವಂಥವನೆಂದರ್ಥ.

**೩. ''ಪ್ರಣವಸ್ವರೂಪಾಯ, ಚಿದಾಕಾಶಾಯ, ಆಕಾಶ ದಿಕ್ಸ್ವರೂಪಾಯ, ಗ್ರಹನಕ್ಷತ್ರಮಾಲಿನೇ, ಸಕಲಾಯ, (ಕಲಂಕ ರಹಿತಾಯ) ಸಕಲಲೋಕೈಕಕರ್ತ್ರೇ, ಸಕಲಲೋಕೈಕಭರ್ತ್ರೇ, ಸಕಲ ಲೋಕೈಕಹರ್ತ್ರೇ, ಸಕಲಲೋಕೈಕಗುರವೇ, ಸಕಲಲೋಕೈಕ ಸಾಕ್ಷಿಣೇ, ಸಕಲನಿಗಮಗುಹ್ಯಾಯ, (ಸಕಲವೇದಾನ್ತಪಾರಗಾಯ), ಸಕಲ ವರಪ್ರದಾಯ, ಸಕಲದುರಿತಾರ್ತಿಭಂಜನಾಯ, ಸಕಲಜಗದಭಯಂಕ-ರಾಯ, ಶಶಾಂಕಶೇಖರಾಯ, ಶಾಶ್ವತನಿಜಾವಾಸಾಯ ॥ ''**

ಈ ಭಾಗದಲ್ಲಿ ಸದಾಶಿವನ ಸಗುಣನಿರ್ಗುಣರೂಪಗಳೆರಡನ್ನೂ ವರ್ಣಿಸಿದೆ. ಆತನು **ಪ್ರಣವಸ್ವರೂಪನು,** ಎಂದರೆ ಯಾವ ಮಂತ್ರವನ್ನು ಅರ್ಥಾನುಸಂಧಾನಪೂರ್ವಕವಾಗಿ ಜಪಿಸುವ ಉತ್ತಮಾಧಿಕಾರಿಗಳಿಗೆ ಪ್ರಪಂಚವು ನಾಶವಾಗಿ ನಿಷ್ಪ್ರಪಂಚರೂಪವಾದ ಅಭಿನವರೂಪವುಂಟಾಗುವದೋ ಅಂಥ ಓಂಕಾರದಿಂದ ವಾಚ್ಯನಾಗಿರುವವನು, ಅದಕ್ಕೆ ಲಕ್ಷ್ಯಾರ್ಥವಾಗಿರುವವನು, ಮತ್ತು ಅದರ ಸ್ವರೂಪದಿಂದಲೇ ಜಗತ್ತನ್ನು ಉದ್ಧಾರಮಾಡುವಾತನು. **ಚಿದಾಕಾಶ ಸ್ವರೂಪನು,** ಎಂದರೆ ಭೂತಾಕಾಶಚಿತ್ತಾಕಾಶಗಳಿಗಿಂತಲೂ ವ್ಯಾಪಕವಾಗಿರುವ ಚಿದ್ರೂಪದಿಂದ ಪ್ರಕಾಶಿಸುವಾತನು. **ಆಕಾಶದಿಕ್ಸ್ವರೂಪನು,** ಎಂದರೆ ಸಕಲಪದಾರ್ಥಗಳಿಗೂ ಅವಕಾಶವನ್ನು ಕೊಟ್ಟು ತನ್ನೊಳಗೇ ಒಳಗೊಳ್ಳುವ ಭೂತಾಕಾಶರೂಪದಿಂದಲೂ ಪೂರ್ವಪಶ್ಚಿಮಾದಿವ್ಯವಹಾರಗಳನ್ನು ಸಾಗಿಸುವ ದಿಕ್ಕುಗಳ ಸ್ವರೂಪದಿಂದಲೂ ಇರುವವನು. **ಗ್ರಹನಕ್ಷತ್ರಮಾಲಿನೇ''**

ಎಂಬುದರಿಂದ **''ಸಕಲಲೋಕೈಕಹರ್ತ್ರೇ''** - ಎಂಬವರೆಗಿನ ವಿಶೇಷಣಗಳ ಅರ್ಥವು ಸ್ಪಷ್ಟವೇ ಆಗಿರುತ್ತದೆ.

**''ಸಕಲಲೋಕೈಕಗುರು''** ಎಂದರೆ ಲೋಕದಲ್ಲಿರುವ ಗುರುಗಳಿಗೆಲ್ಲ ತಾನೊಬ್ಬನೇ ಗುರುವೆನಿಸಿರುವಾತನು ; ವೇದಗಳಿಗೂ ಉಪವೇದಗಳಿಗೂ ಶಾಸ್ತ್ರಗಳಿಗೂ ಮಂತ್ರತಂತ್ರಗಳಿಗೂ ಮೂಲವಾಗಿರುವ ಮುಖ್ಯಗುರುವು ಎಂದರ್ಥ. **''ಸಕಲಲೋಕೈಕಸಾಕ್ಷಿ''** ಎಂದರೆ ಸಮಸ್ತವನ್ನೂ ತನ್ನ ಚಿತ್ಸ್ವರೂಪದಿಂದ ಬೆಳಗುತ್ತಾ ಸಕಲಜೀವರಲ್ಲಿಯೂ ಸಾಕ್ಷಿಯ ರೂಪದಿಂದ ಕಾಣಿಸಿಕೊಳ್ಳುವಾತನು ಎಂದರ್ಥ. **''ಸಕಲವೇದಾಂತಪಾರಗನು''** ಎಂದರೆ ಉಪನಿಷತ್ತುಗಳಲ್ಲಿ ಹೇಳಿರುವ ಅರ್ಥವು ತಾನೇ ಆಗಿರುವದರಿಂದ ಅವುಗಳ ಕೊನೆಯನ್ನು ತನ್ನ ಸಾಕ್ಷ್ಯನುಭವರೂಪದಿಂದಲೇ ಬಲ್ಲವನು.

**''ಸಕಲದುರಿತಾರ್ತಿಭಂಜನನು''**, ಎಂದರೆ ಬಗೆಬಗೆಯ ಪಾಪಗಳ ಸಂಕಟವನ್ನು ನಾಶಗೊಳಿಸುವವನು ; ಏಕೆಂದರೆ ಎಂಥ ಪಾಪಿಯೇ ಆಗಿದ್ದರೂ ಪರಮೇಶ್ವರನ ಭಕ್ತಿಮಾರ್ಗದಲ್ಲಿ ಕಾಲಿಟ್ಟಂದಿನಿಂದ ಪವಿತ್ರನಾಗುತ್ತಾನೆ. **''ಸಕಲಜಗದಭಯಂಕರನು''** ಎಂದರೆ ಎಲ್ಲರಿಗೂ ಅಭಯವನ್ನುಂಟು ಮಾಡುವವನು. **''ಶಶಾಂಕಶೇಖರ''**ನೆಂದರೆ ಚಂದ್ರಮೌಳಿಯು. **''ಶಾಶ್ವತ ನಿಜಾವಾಸ''ನು,** ಎಂದರೆ ಮತ್ತೊಂದು ಆಶ್ರಯವನ್ನು ಬಯಸದೆ ತನ್ನಲ್ಲಿ ತಾನು ನೆಲೆನಿಂತಿರುವವನು.

**೪. ''ನೀರೂಪಾಯ, ನಿರಾಭಾಸಾಯ,. ನಿರಾಮಯಾಯ, (ನಿರ್ಲೋಭಾಯ), ನಿರ್ಮದಾಯ, ನಿಶ್ಚಿನ್ತಾಯ, ನಿರಹಂಕಾರಾಯ, ನಿರಂಕುಶಾಯ, ನಿಷ್ಕಲಂಕಾಯ, ನಿರ್ಗುಣಾಯ, ನಿರುಪಮಾಯ, ನಿಷ್ಕಾಮಾಯ, ನಿರುಪಪ್ಲವಾಯ, ನಿರವದ್ಯಾಯ, ನಿರನ್ತರಾಯ, ನಿಷ್ಕಾರಣಾಯ, ನಿರಾತಂಕಾಯ, ನಿಷ್ಪ್ರಪಂಚಾಯ, ನಿರ್ದ್ವಂದ್ವಾಯ, ನಿಸ್ಸಂಗಾಯ, ನಿರ್ಮಲಾಯ, (ನಿರಾಧಾರಾಯ), ನೀರಾಗಾಯ, ನಿಷ್ಕ್ರೋಧಾಯ, ನಿರ್ಗಮಾಯ, ನಿಷ್ಪಾಪಾಯ, ನಿರ್ಭಯಾಯ,**

ನಿರ್ವಿಕಲ್ಪಾಯ, ನಿರ್ಭೇದಾಯ, ನಿಷ್ಕ್ರಿಯಾಯ, ನಿಸ್ತುಲಾಯ, ನಿಸ್ಸಂಶಯಾಯ, (ನಿರಂಜನಾಯ), ನಿತ್ಯರೂಪವಿಭವಾಯ, ನಿರುಪಮವಿಭವಾಯ, ನಿತ್ಯಶುದ್ಧಬುದ್ಧಪರಿಪೂರ್ಣಸಚ್ಚಿದಾನನ್ದಾದ್ವ-ಯಾಯ, ಪರಮಶಾನ್ತಸ್ವರೂಪಾಯ, ತೇಜೋರೂಪಾಯ, (ತೇಜೋಮಯಾಯ) ॥''

ಈ ಭಾಗದಲ್ಲಿ ಪರಮಶಿವನು ಸಾಮಾನ್ಯಜೀವರಂತೆ ದೇಹೇಂದ್ರಿಯ ಪ್ರಾಣಮನೋಬುದ್ಧಿಗಳಿಂದಾಗುವ ಯಾವದೊಂದು ಕಲಂಕವೂ ಇಲ್ಲದವನೆಂದು ವರ್ಣಿಸಿದೆ. ಇಲ್ಲಿರುವ ಕೆಲವು ವಿಶೇಷಣಗಳಿಗೆ ಮಾತ್ರ ಅರ್ಥವನ್ನು ತಿಳಿಸುತ್ತೇವೆ; ಮಿಕ್ಕವುಗಳ ಅರ್ಥವು ಸ್ಪಷ್ಟವಾಗಿರುತ್ತದೆ.

''**ನಿರಾಭಾಸನು**'' ಎಂದರೆ ತನ್ನಂತೆ ಇರುವ ಪ್ರತಿಬಿಂಬವಿಲ್ಲದವನು, ಅದ್ವಿತೀಯನು ಎಂದರ್ಥ. ''**ನಿರಾಮಯನು**'' ಎಂದರೆ ಯಾವ ರೋಗವೂ ಇಲ್ಲದವನು. ''**ನಿರಂಕುಶನು**'' ಎಂದರೆ ಯಾರೊಬ್ಬರ ಅಡಚಣೆಯೂ ಇಲ್ಲದವನು. ''**ನಿರುಪಪ್ಲವನು**'' ಎಂದರೆ ಯಾವದೊಂದು ತೊಂದರೆಯೂ ಇಲ್ಲದವನು ''**ನಿರವದ್ಯನು**'' ಎಂದರೆ ಯಾವ ದೋಷವೂ ಇಲ್ಲದವನು.''**ನಿರನ್ತರನು**'' ಎಂದರೆ ಪರಿಚ್ಛೇದಶೂನ್ಯನು. '**ನಿಸ್ತುಲನು**' ಎಂದರೆ ತನಗೆ ಸಮಾನರು ಯಾರೂ ಇಲ್ಲದವನು.

**೫. ''ಜಯ ಜಯ ಮಹಾರುದ್ರ, ಮಹಾರೌದ್ರ, ಭದ್ರಾವತಾರ ದುಃಖದಾವದಾರಣ, ಮಹಾಭೈರವ, ಕಾಲಭೈರವ, ಕಲ್ಪಾನ್ತಭೈರವ, ಕಪಾಲಮಾಲಾಧರ, ಖಟ್ವಾಂಗಖಡ್ಗಚರ್ಮಪಾಶಾಂಕುಶಡಮರುಶೂಲಚಾಪಬಾಣಗದಾಶಕ್ತಿಭಿಣ್ಡಿಪಾಲ ತೋಮರ ಮುಸಲ ಮುದ್ಗರಪ್ರಾಸಪಟ್ಟಿಶಪರಶುಪರಿಘಭುಶುಣ್ಡೀಶತಘ್ನೀಚಕ್ರಾದ್ಯಾಯುಧಭೀಷಣಕರ, ಸಹಸ್ರಮುಖ, ದಂಷ್ಟ್ರಾಕರಾಲ(ವದನ), ವಿಕಟಾಟ್ಟಹಾಸ ವಿಸ್ಫಾರಿತಬ್ರಹ್ಮಾಂಡಮಣ್ಡಲ, ನಾಗೇಂದ್ರಕುಣ್ಡಲ, ನಾಗೇಂದ್ರಹಾರ, (ನಾಗೇಂದ್ರವಲಯ), ನಾಗೇಂದ್ರಚರ್ಮಧರ,**

ಮೃತ್ಯುಂಜಯ, ತ್ರ್ಯಂಬಕ, ತ್ರಿಪುರಾನ್ತಕ, (ವಿಶ್ವರೂಪ), ವಿರೂಪಾಕ್ಷ, ವಿಶ್ವೇಶ್ವರ, ವೃಷಭವಾಹನ, ವಿಷಭೂಷಣ, ವಿಶ್ವತೋಮುಖ, ಸರ್ವ(ತೋಮುಖ ಮಾಂ) ರಕ್ಷರಕ್ಷ, ಜ್ವಲಜ್ವಲ, ಮಹಾ ಮೃತ್ಯುಭಯಮಪಮೃತ್ಯುಭಯಂ ನಾಶಯ ನಾಶಯ, ರೋಗ ಭಯಮುತ್ಸಾದಯೋತ್ಸಾದಯ, ವಿಷಸರ್ಪಭಯಂ ಶಮಯ ಶಮಯ, ಚೋರಾನ್ ಮಾರಯ ಮಾರಯ, ಮಮ ಶತ್ರೂನು-ಚ್ಚಾಟಯೋಚ್ಚಾಟಯ, ತ್ರಿಶೂಲೇನ ವಿದಾರಯ ವಿದಾರಯ, ಕುಠಾರೇಣ ಭಿನ್ಧಿಭಿನ್ಧಿ, ಖಡ್ಗೇನ ಛಿನ್ಧಿ ಛಿನ್ಧಿ, ಖಟ್ವಾಂಗೇನ ವಿಪೋಥಯ ವಿಪೋಥಯ, ಮುಸಲೇನ ನಿಷ್ಪೇಷಯ ನಿಷ್ಪೇಷಯ, ಬಾಣೈಃ ಸನ್ತಾಡಯ ಸನ್ತಾಡಯ, ರಕ್ಷಾಂಸಿ ಭೀಷಯ ಭೀಷಯ, (ಅಶೇಷ) ಭೂತಾನಿ ವಿದ್ರಾವಯ ವಿದ್ರಾವಯ, ಕೂಷ್ಮಾಂಡಭೂತ ವೇತಾಲಮಾರೀಗಣಬ್ರಹ್ಮರಾಕ್ಷಸಗಣಾನ್ ಸಂತ್ರಾಸಯ, ಸಂತ್ರಾಸಯ, ಮಮಾಭಯಂ ಕುರು ಕುರು, ವಿತ್ರಸ್ತಂ ಮಾಮಾಶ್ವಾಸಯಾಶ್ವಾಸಯ, ನರಕ(ಮಹಾ)ಭಯಾನ್ಮಾಮುದ್ಧರೋದ್ಧರ,ಸಂಜೀವಯ ಸಂಜೀವಯ, ಕ್ಷುತ್ತೃಡ್ಭ್ಯಾಂ ಮಾಮಾಪ್ಯಾಯಯಾಪ್ಯಾಯಯ ದುಃಖಾತುರಂ ಮಾಮಾನನ್ದಯಾನನ್ದಯ, ಶಿವಕವಚೇನ ಮಾಮಾಚ್ಛಾದಯಾ-ಚ್ಛಾದಯ, ಮೃತ್ಯುಂಜಯ, ತ್ರ್ಯಮ್ಬಕ, ಸದಾಶಿವ, ನಮಸ್ತೇ ನಮಸ್ತೇ॥'

ಈ ಭಾಗದಲ್ಲಿ ಸದಾಶಿವನ ಸಕಲಭಯಭಯಂಕರಮೂರ್ತಿಯು ತನ್ನ ಎದುರಿಗೇ ಇದ್ದಂತೆ ಭಾವಿಸಿ ತನ್ನ ಎಲ್ಲಾ ಅಂಜಿಕೆಗಳನ್ನೂ ಹೋಗಲಾಡಿಸ ಬೇಕೆಂದು ಕೇಳಿಕೊಂಡಿರುತ್ತದೆ.

ಇಲ್ಲಿ ಮಾಡಿರುವ ಪ್ರಾರ್ಥನೆಯಲ್ಲಿ ಕಳ್ಳರು, ಶತ್ರುಗಳು, ರಾಕ್ಷಸರು, ಭೂತವೇತಾಲಾದಿಗಳು - ಇವೇ ಮುಂತಾದವುಗಳ್ನು ದಂಡಿಸಿ ತನಗೆ ಚಿತ್ತ ಸಮಾಧಾನವನ್ನು ಕೊಡಬೇಕೆಂದೂ ನರಕದ ಭೀತಿಯನ್ನು ತಪ್ಪಿಸಬೇಕೆಂದೂ ಇಹಲೋಕದ ಹಸಿವು, ಬಾಯಾರಿಕೆ, ಋಣ, ರೋಗ, ದಾರಿದ್ರ್ಯ- ಮುಂತಾದವು

ಗಳಿಂದಾಗುವ ದುಃಖಪರಂಪರೆಯನ್ನು ತಪ್ಪಿಸಬೇಕೆಂದೂ ಬೇಡಿಕೊಂಡಿದೆ ಯಷ್ಟೆ? ಈ ವಿಷಯದಲ್ಲಿ ತಿಳಿದುಕೊಳ್ಳಬೇಕಾದ ಒಂದು ವಿಶೇಷ ರಹಸ್ಯವಿದೆ. ಅದೇನೆಂದರೆ ನಮಗೆ ಶತ್ರುಗಳಿದ್ದರೆ ಅವರನ್ನು ಕೊಲ್ಲಬೇಕೆಂದಾಗಲಿ ದಂಡಿಸಬೇಕೆಂದಾಗಲಿ ಪರಮೇಶ್ವರನನ್ನು ಪ್ರಾರ್ಥಿಸಿದರೆ, ಆ ಶತ್ರುಗಳಿಗೂ ನಾವು ಶತ್ರುಗಳಾಗಿರುವದರಿಂದ ಅವರೂ ಹಾಗೆಂದೇ ಶಿವನನ್ನು ಪ್ರಾರ್ಥಿಸ ಬಹುದಲ್ಲವೆ? ಆಗ ಈಶ್ವರನು ಯಾರ ಪ್ರಾರ್ಥನೆಯನ್ನು ಕೇಳಬೇಕು ? -ಎಂಬುದೊಂದು ಸಂಶಯವು ಕೆಲವರನ್ನು ಬಾಧಿಸುವದುಂಟು. ಆದರೆ ಇಲ್ಲಿ ನಿಜವೇನೆಂದರೆ, ಮನುಷ್ಯನ ಚಿತ್ತವು ಹಲವು ಅಂತಸ್ತುಗಳಲ್ಲಿರುತ್ತದೆ. ಅದು ಅತ್ಯಂತ ಕೀಳಾದ ಅಂತಸ್ತಿನಲ್ಲಿರುವಾಗ ಮನುಷ್ಯನು ತನ್ನನ್ನು ತಾನೇ ಕಾಪಾಡಿಕೊಳ್ಳ ಬಲ್ಲೆನೆಂದು ಹೆಮ್ಮೆಪಡುತ್ತಾ ಆಸುರಸಂಪತ್ತಿನಿಂದ ಮೆರೆಯುತ್ತಿರುತ್ತದೆ ; ಸ್ವಲ್ಪ ಮೇಲಿನ ಅಂತಸ್ತಿಗೆ ಅವನು ಹೋದರೆ ಪರಮೇಶ್ವರನೊಬ್ಬನು ಇದಾನೆಂಬುದು ಹೇಗೋ ಅವನಿಗೆ ಹೊಳೆಯುವದು. ಅಂಥ ಅವಸ್ಥೆಯಲ್ಲಿ ಮನುಷ್ಯನು ''ದೇವ, ನನ್ನ ಸಕಲ ಇಷ್ಟಾರ್ಥಗಳನ್ನೂ ಈಡೇರಿಸು ; ನನಗೆ ಎಲ್ಲೆಲ್ಲಿಯೂ ಜಯವಾಗಲಿ; ನನ್ನ ಶತ್ರುಗಳೆಲ್ಲ ನಾಶವಾಗಲಿ !'' ಎಂದು ಪ್ರಾರ್ಥಿಸಿಕೊಳ್ಳುತ್ತಾನೆ. ಸಾಧಕನ ಚಿತ್ತವು ಅದಕ್ಕಿಂತಲೂ ಮೇಲಿನ ಅಂತಸ್ತನ್ನು ಮುಟ್ಟಿದರೆ ಪರಮೇಶ್ವರನು ಸಕಲರಿಗೂ ಕಲ್ಯಾಣವನ್ನುಂಟುಮಾಡುವವನೇ ಹೊರತು ಅವನು ಯಾರೊಬ್ಬರ ಪಕ್ಷವನ್ನೂ ವಹಿಸುವವನಲ್ಲವೆಂದು ನಿಶ್ಚಿತವಾಗಿ ತಿಳಿಯುತ್ತದೆ. ಆಗ ಮನುಷ್ಯನಿಗೆ ಉಂಟಾಗಿರುವ ಅಂಜಿಕೆಗಳೆಲ್ಲವೂ ಪರಮೇಶ್ವರನ ಸಾಮೀಪ್ಯವನ್ನು ಬಿಟ್ಟು ಹೊರಮುಖವಾಗಿರುವದರಿಂದಲೇ ಆಗಿರುವವೆಂಬ ತಿಳಿವಳಿಕೆಯೂ ಉಂಟಾಗು ತ್ತದೆ. ಆದರೂ ವ್ಯವಹಾರದಲ್ಲಿ ತೋರುವ ಬಗೆಬಗೆಯ ಅಂಜಿಕೆಗಳನ್ನು ಮೀರಿ ಆ ಪರಮೇಶ್ವರನ ಸಾಮೀಪ್ಯವನ್ನು ಪಡೆದುಕೊಳ್ಳುವದಕ್ಕೆ ನಮ್ಮ ಬರಿಯ ಪ್ರಯತ್ನವೇ ಸಾಲದೆಂಬ ಅರಿವು ಮನದಲ್ಲಿ ಮಿಂಚಿದಂತೆಲ್ಲ ''ದೇವ, ನಿನ್ನ ಪಾದತಲವನ್ನೇ ಯಾವಾಗಲೂ ಸ್ಮರಿಸುವಂತೆ ಮನಸ್ಸಿಗೆ ಬಲವನ್ನು ಕೊಡು, ಸ್ಮರಣೆಗೆ ಅಡ್ಡಿಯಾಗಿರುವ ಹೊರಗಿನ ವಿಘ್ನಪರಂಪರೆಗಳನ್ನೆಲ್ಲ ಗೆಲ್ಲುವಂತೆ ಮನೋಬಲವನ್ನೂ ಅನುಗ್ರಹಿಸು'' ಎಂದು ಸಾಧಕನು ಬೇಡಿಕೊಳ್ಳುತ್ತಾನೆ. ಈ

ಅಂತಸ್ತಿನಲ್ಲಿ ಹಸಿವು ಬಾಯಾರಿಕೆಗಳೆಂದರೆ ವಿಷಯಗಳಲ್ಲಿರುವ ತೃಷ್ಣೆಯೇ, ರೋಗವೆಂದರೆ ವಿಷಯದ ಚಿಂತನೆಯನ್ನು ಬಿಡದಂತೆ ಮಾಡಿರುವ ವಾಸನೆಯೇ ; ದಾರಿದ್ರ್ಯವೆಂದರೆ ಪರಶಿವನ ಭಕ್ತಿಯು ಪೂರ್ಣವಾಗದೆ ಇರುವದೇ ; ಋಣವೆಂದರೆ ಪ್ರಾರಬ್ಧಬಲದಿಂದ ನಾವು ಅನುಭವಿಸಿಯೇ ತೀರಬೇಕಾಗಿರುವ ಪ್ರಾಪಂಚಿಕದುಃಖವೇ, ಶತ್ರುಗಳೆಂದರೆ ಕಾಮಕ್ರೋಧಾದಿಗಳೇ - ಎಂದು ಅರ್ಥಮಾಡಿಕೊಳ್ಳಬೇಕು. ಈ ಬಗೆಯ ಅಂಜಿಕೆಗಳನ್ನೆಲ್ಲ ತೊಲಗಿಸೆಂದು ಬೇಡುವದು ಸಾತ್ತ್ವಿಕರೆಲ್ಲರಿಗೂ ಯುಕ್ತವಾಗಿಯೇ ಇರುತ್ತದೆ.

ಈಗ ಮತ್ತೊಂದು ವಿಷಯವನ್ನು ಮನಸ್ಸಿಗೆ ತಂದುಕೊಳ್ಳುವದು ಅವಶ್ಯವಾಗಿದೆ. ಪರಮೇಶ್ವರನು ಯಾವಾಗಲೂ ನಮ್ಮೆಲ್ಲರ ಹೃದಯದಲ್ಲಿಯೂ ಇದ್ದುಕೊಂಡೇ ಇರುತ್ತಾನೆ. ನಮಗೆ ಯಾವದೊಂದೂ ಕಷ್ಟವಿಲ್ಲದಂತೆ ನೋಡಿಕೊಳ್ಳುವದೇ, ನಮಗೆ ಬೇಕಾದ ಸುಖಸಂಪತ್ತುಗಳನ್ನೆಲ್ಲ ಒದಗಿಸುತ್ತಿರುವದೇ ಆತನ ಸ್ವಭಾವವು. ಇಷ್ಟೇ ಅಲ್ಲ. ಆತನ ಉತ್ತಮದೃಷ್ಟಿಯಿಂದ ನೋಡಿದರೆ ನಾವೆಲ್ಲರೂ ಆತನ ಅಂಶಗಳೇ, ಆತನಿಗೂ ನಮಗೂ ಒಂದಿಷ್ಟೂ ಭೇದವಿಲ್ಲ. ಆದ್ದರಿಂದ ಆತನಿಗೆ ಹೇಗೆ ಒಂದಿಷ್ಟೂ ಅಂಜಿಕೆಯು ಏತರಿಂದಲೂ ಹೇಗೂ ಇಲ್ಲವೋ, ಆತನ ಅಂಶಭೂತರಾದ ನಮಗೂ ಹಾಗೆಯೇ. ಆ ದೃಷ್ಟಿಯಿಂದ ಒಂದಿಷ್ಟು ಕಷ್ಟವಾಗಲಿ, ಅಂಜಿಕೆಯಾಗಲಿ ಇಲ್ಲವೇ ಇಲ್ಲ. ಆ ದೃಷ್ಟಿಯನ್ನು ತಂದುಕೊಳ್ಳುವದಕ್ಕಾಗಿಯೇ ಆ ಪರಮಶಿವನ ಸ್ಮರಣೆಯನ್ನು ಮಾಡಿ ಆತನ ಸ್ವರೂಪದ ಕವಚವನ್ನು ನಾವು ಧರಿಸುವದು. ಆಮೇಲೆ ನಮಗೆ ಆತನ ಅದ್ಭುತಶಕ್ತಿಯ ಬೆಂಬಲವಿರುವದರಿಂದ ನಾವು ಏತಕ್ಕೂ ಅಂಜಬೇಕಾದ ಕಾರಣವಿರುವದೇ ಇಲ್ಲ.

ಈಗ ಐದನೆಯ ಭಾಗದಲ್ಲಿ ಉಪಯೋಗಿಸಿರುವ ಕೆಲವು **ವಿಶೇಷಣಗಳ** ಅರ್ಥವನ್ನು ಸಂಗ್ರಹವಾಗಿ ಬರೆದು ಸಹಸ್ರಾಕ್ಷರಮಂತ್ರ ವಿಚಾರವನ್ನು ಇಲ್ಲಿಗೆ ಉಪಸಂಹಾರಮಾಡುತ್ತೇವೆ.

**ಜಯ ಜಯ ರುದ್ರ !** ಇಲ್ಲಿ ಹೇಳಿರುವ 'ಜಯ ಜಯ' ಶಬ್ದವನ್ನು ಉಚ್ಚರಿಸುವಾಗ ಪರಮೇಶ್ವರನು ತನ್ನ ಎದುರಿಗೆ ಇದ್ದಂತೆ ಭಾವಿಸಿಕೊಂಡು ತನ್ನ ಸಕಲದುಃಖವನ್ನೂ ನಿವೃತ್ತಿಮಾಡುವದಕ್ಕೆಂದು ಸನ್ನಿಹಿತನಾದ ಆ ಶಿವನ ಜಯಕಾರವನ್ನುಚ್ಚರಿಸುತ್ತಿದೇನೆಂದು ಸಾಧಕನು ಭಾವಿಸಿಕೊಳ್ಳಬೇಕು. ಪರಮಾತ್ಮನ ಸನ್ನಿಧಿಯ ಭಾವನೆಯಿಂದ ಸಕಲವಿಧವಾದ ದುಃಖಗಳೂ ನಿವೃತ್ತಿಯಾಗುತ್ತವೆ. ಇಲಿರುವ 'ರುದ್ರ ಎಂಬ ಶಬ್ದಕ್ಕೆ ದುಃಖವನ್ನು ಹೋಗಲಾಡಿಸುವ ಪ್ರಶಸ್ತಮೂರ್ತಿಯಾದ ಶಿವನು - ಎಂದು ಅರ್ಥ. ರುದ್ರರೂಪಿಯಾದ ಶಿವನಿಗೆ ಘೋರರೂಪವೆಂದೂ ಶಾಂತರೂಪವೆಂದೂ ಎರಡು ವಿಧವಾದ ರೂಪಗಳಿರುವವು ; ಶಾಂತವು ಸಾಯುಧವೆಂದೂ ನಿರಾಯುಧವೆಂದೂ ಎರಡು ವಿಧವು. ಇಲ್ಲಿ ಶಾಂತಸಾಯುಧರೂಪವನ್ನು ಭಕ್ತನು ಸ್ಮರಿಸಿಕೊಳ್ಳಬೇಕು. ಇದರಿಂದ ನಿರ್ಭೀತಿಯೂ ಶಾಂತಿಯೂ ಉಂಟಾಗುತ್ತವೆ.

**ಮಹಾರೌದ್ರ :** ಇದು ಶಿವನ ಭಯಂಕರರೂಪವನ್ನು ತಿಳಿಸುತ್ತದೆ. ರಾಜಸಗುಣತಾಮಸಗುಣಗಳ ಉಪಾಧಿಯಿಂದ ಈ ರೂಪವನ್ನು ಆತನು ಧರಿಸುತ್ತಾನೆಂದು ಪುರಾಣಗಳಲ್ಲಿ ವರ್ಣನೆಯಿದೆಯಾದರೂ ನಮಗೆ ತೊಂದರೆಯನ್ನುಂಟುಮಾಡುವ ಅಶುಭವಾಸನೆಗಳನ್ನೂ ಅವುಗಳ ಫಲವಾಗಿರುವ ದುಃಖತರಸನ್ನಿವೇಶಗಳನ್ನೂ ಪ್ರಲಯಗೊಳಿಸುವ ಕರುಣಾಮಯಮೂರ್ತಿಯನ್ನು ಇಲ್ಲಿ ಮನಸ್ಸಿಗೆ ತಂದುಕೊಳ್ಳಬೇಕು. ಶಿವನ ಮಹಾರೌದ್ರಮೂರ್ತಿಯನ್ನು ಕಂಡರೆ ಭಕ್ತರಿಗೆ ಸಂತೋಷವೇ ಆಗುವದು ; ಏಕೆಂದರೆ ''ಶಿವಃ ಶಿವಾನಾಮಶಿವೋಽಶಿವಾನಾಮ್'' ಎಂಬಂತೆ ಆತನು ಸಾತ್ತ್ವಿಕರಿಗೆ ಶಿವನೂ ಮಿಕ್ಕವರಿಗೆ ಅಶಿವನೂ ಆಗಿ ಕಾಣಿಸಿಕೊಳ್ಳುತ್ತಾನೆ.

**ಭದ್ರಾವತಾರ :** ದಕ್ಷಾಧ್ವರವನ್ನು ನಾಶಮಾಡುವದಕ್ಕಾಗಿ ವೀರಭದ್ರನ ರೂಪವನ್ನು ಸೃಷ್ಟಿಸಿದಾತನು. ದರ್ಪವನ್ನು ಆಗಿಂದಾಗಲೇ ಕಳೆದು ಸರಿಯಾದ ಮಾರ್ಗದಲ್ಲಿ ಬಿಡುವವನು - ಎಂಬುದನ್ನು ಈ ವಿಶೇಷಣವು ಸೂಚಿಸುವದು. ತನ್ನ ಪ್ರಿಯೆಯಾದ ಸತೀದೇವಿಗೆ ಆದ ಅಪಮಾನವನ್ನು ಒಂದಿಷ್ಟೂ ಸಹಿಸದೆ ಆಕೆಯ ಕಷ್ಟಕ್ಕೆ ಪ್ರತೀಕಾರವನ್ನು ಮಾಡುವದಕ್ಕೆ ವೀರಭದ್ರನನ್ನು ಸೃಷ್ಟಿಸಿದಂತೆ ತನ್ನ ಭಕ್ತರಿಗೆ

ಆಗುವ ಸಕಲ ಅನಿಷ್ಟಗಳನ್ನೂ ಆಗಿಂದಾಗಲೇ ಪರಿಹರಿಸುವಾತನು ಎಂಬುದನ್ನೂ ಇದು ಸೂಚಿಸುವದು.

**ಕಾಲಭೈರವ, ಕಲ್ಪಾಂತಭೈರವ** : ಇವೆರಡೂ ಪ್ರಲಯಕಾಲದಲ್ಲಿ ಈಶ್ವರನು ಧರಿಸಿರುವ ರೂಪಭೇದಗಳನ್ನು ತಿಳಿಸುವ ವಿಶೇಷಣಗಳು. ಎಂಥ ಕಷ್ಟಕಾಲವು ಬಂದರೂ ಆಗಲೂ ಲೀಲಾಮಾತ್ರದಿಂದಲೇ ಅವುಗಳನ್ನು ಸಹಿಸಿ ಕೊಳ್ಳುವ ಶಕ್ತಿಯನ್ನು ಅನುಗ್ರಹಿಸಬಲ್ಲಾತನು - ಎಂಬುದನ್ನು ಇವು ಸೂಚಿಸುವವು.

**ಕಪಾಲಮಾಲಾಧರ** : ಅನೇಕ ಕಲ್ಪಗಳಲ್ಲಿ ಬ್ರಹ್ಮನ ಶಿರಸ್ಸನ್ನು ಚಿಗುಟಿಹಾಕಿ ಆ ಕಪಾಲಗಳ ಮಾಲೆಯನ್ನೇ ಧರಿಸಿದಾತನೆಂಬ ಪುರಾಣಗಳ ಕಥೆಯನ್ನು ತಿಳಿಸುವ ವಿಶೇಷಣವಿದು. ಇದರಿಂದ ಬ್ರಹ್ಮನಿಗಿಂತಲೂ ಬಲವುಳ್ಳಾತನೆಂದೂ ಅನೇಕ ಬ್ರಹ್ಮರಕಲ್ಪಗಳು ಮುಗಿದಮೇಲೂ ಇರುವವ ನೆಂದೂ ಆದ್ದರಿಂದ ಈ ಸೃಷ್ಟಿಯಲ್ಲಿ ಭಕ್ತರಿಗೊದಗುವ ಕಷ್ಟಗಳನ್ನು ಪರಿಹರಿಸು ವದು ಆತನಿಗೆ ಲೀಲಾಮಾತ್ರವೆಂದೂ ಸೂಚಿತವಾಗುತ್ತದೆ.

**ಖಟ್ವಾಂಗ.......ಚಕ್ರಾದ್ಯಾಯುಧಭೀಷಣಕರ** : ಇಲ್ಲಿ ಹೇಳಿರುವ ವಿವಿಧವಾದ ಆಯುಧಗಳನ್ನು ಪರಮೇಶ್ವರನು ಬೇರೆಬೇರೆ ಸಂದರ್ಭಗಳಲ್ಲಿ ಲೋಕಕಲ್ಯಾಣಕ್ಕಾಗಿಯೂ ತನ್ನ ಮಹಿಮೆಯನ್ನು ಜೀವರಿಗೆ ಪ್ರಕಟಿಸುವದಕ್ಕಾಗಿಯೂ ಧರಿಸಿದನೆಂದು ಪುರಾಣಪ್ರಸಿದ್ಧಿಯಿದೆ. ಉದಾಹರಣೆಗೆ **ಖಟ್ವಾಂಗ**ವೆಂಬುದು ಮಂಚದ ಕಾಲು ; ಇಚ್ಛಾಜ್ಞಾನಕ್ರಿಯಾಶಕ್ತಿಗಳಿಂದ ಸತ್ತ್ವಗುಣವನ್ನು ಪ್ರವರ್ತಿಸುವಂತೆ ಮಾಡುವವನೆಂಬುದನ್ನು ಇದು ಸೂಚಿಸುತ್ತದೆಯೆಂದು ಶಿವಾಗಮವಚನವಿರುತ್ತದೆ. **ಪರಶು**ವೆಂಬ ಗಂಡು ಕೊಡಲಿಯು ಈತನು ಸತ್ಯನಿಷ್ಠನೆಂದು ಸೂಚಿಸುತ್ತದೆಯೆಂದೂ **ಶೂಲವು** ತ್ರಿಗುಣಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರುವನೆಂಬುದನ್ನು ಸೂಚಿಸುವದೆಂದೂ ಶಿವಾಗಮವಚನವಿರುತ್ತದೆ. ಇದರಂತೆಯೇ ಮಿಕ್ಕ ಆಯುಧಗಳಿಗೂ ಪುರಾಣಾದಿಗಳಲ್ಲಿ ಹೇಳಿರುವ ಪ್ರಯೋಜನವನ್ನು ಊಹಿಸಿಕೊಳ್ಳಬೇಕು.

**ಸಹಸ್ರಮುಖ :** ಸಾವಿರಾರು ರೂಪದಿಂದ ಪ್ರಪಂಚವನ್ನೆ ವ್ಯಾಪಿಸಿರುವನೆಂದೂ ಆತನು ಎಲ್ಲಾ ಕಡೆಗೂ ಮುಖವನ್ನು ತಿರುಗಿಸಿಕೊಂಡು ಕಾಣಿಸಿಕೊಳ್ಳುತ್ತಿರುವನೆಂದೂ ಶ್ರುತಿವಚನವಿದೆ. ಈ ವಿಶೇಷಣದ ಅನುಸಂಧಾನ ದಿಂದ ಎಲ್ಲೆಲ್ಲಿಯೂ ಶಿವಭಾವನೆಯನ್ನು ಮಾಡುವದಕ್ಕೂ ತಾನು ಧ್ಯಾನ ಮಾಡುವಲ್ಲೇ ಶಿವನು ಸನ್ನಿಹಿತನಾಗಿರುವನೆಂಬುದನ್ನು ನೆನಪಿಗೆ ತಂದುಕೊಳ್ಳುವ ದಕ್ಕೂ ಸಹಾಯವಾಗುತ್ತದೆ. ತನಗೆ ಸಾವಿರಾರು ಕಷ್ಟಗಳು ಒಂದೇ ಕಾಲದಲ್ಲಿ ಒದಗಿದರೂ ಅವುಗಳೆಲ್ಲವನ್ನೂ ಧ್ವಂಸಮಾಡಬಲ್ಲ ಸಹಸ್ರಮುಖನಾದ ಶಿವನು ತನ್ನ ಬೆಂಬಲಕ್ಕಿರುವನೆಂಬ ಧೈರ್ಯವೂ ಎದೆಯಲ್ಲಿ ಮೂಡುತ್ತದೆ.

**ದಂಷ್ಟ್ರಾಕರಾಲವದನ, ವಿಕಟಾಟ್ಟಹಾಸವಿಸ್ಫಾರಿತಬ್ರಹ್ಮಾಣ್ಡ ಮಂಡಲ :** ಇವು ಪ್ರಲಯಕಾಲದಲ್ಲಿ ಕೋರೆದಾಡೆಯಿಂದೊಡಗೂಡಿದ ಭಯಂಕರರೂಪವನ್ನು ತಾಳಿ ಗಟ್ಟಿಯಾಗಿ ನಕ್ಕ ಧ್ವನಿಯಿಂದಲೇ ಬ್ರಹ್ಮಾಂಡ ಕಟಾಹವನ್ನು ಸೀಳುವ ಪರಮೇಶ್ವರನ ವೀರ್ಯವನ್ನು ನೆನಪಿಗೆ ತರುವವು. ಅಂಥ ಮಹಾದೇವನು ಆತನನ್ನು ನಂಬಿರುವ ನಮ್ಮ ಭೀತಿಗಳನ್ನು ಹೋಗಲಾಡಿಸಲಾರನೆ? ಇನ್ನು ನಾವೇಕೆ ಅಂಜಬೇಕು ?- ಎಂಬ ಧೈರ್ಯಕ್ಕೆ ಈ ವಿಶೇಷಣಗಳು ಪುಷ್ಟಿಯನ್ನು ಕೊಡುವವು.

**ನಾಗೇಂದ್ರಹರ, ನಾಗೇಂದ್ರಚರ್ಮಧರ :** ಕಾಶಿಯಲ್ಲಿ ಶಿವಭಕ್ತರನ್ನು ಕೊಲ್ಲುವದಕ್ಕೆಂದು ಬಂದ ಗಜಾಸುರನನ್ನು ಸಂಹರಿಸಿ ಆತನ ಚರ್ಮವನ್ನು ಈಶ್ವರನು ಧರಿಸಿಕೊಂಡನೆಂದು ಪುರಾಣದಲ್ಲಿ ಕಥೆಯಿದೆ. ಅಹಂಕಾರವೆಂಬ ಮದದಾನೆಯು ನಮ್ಮನ್ನೆಲ್ಲರನ್ನೂ ಕೊಲ್ಲುತ್ತಿರುವದು ; ಅದನ್ನು ಶಿವಭಕ್ತಿಯಿಂದ ಸಂಹರಿಸಿಕೊಂಡರೆ ಸಾತ್ತ್ವಿಕಾಹಂಕಾರವೆಂಬ ಅದರ ಚರ್ಮವೇ ನಮ್ಮ ಹೃದಯ ದಲ್ಲಿರುವ ಶಿವನಿಗೆ ಭೂಷಣವಾಗುವದು - ಎಂಬುದನ್ನು ಈ ವಿಶೇಷಣಗಳು ಸೂಚಿಸುವವು.

**ಮೃತ್ಯುಂಜಯ** ಅಮೃತಸ್ವರೂಪನಾದ್ದರಿಂದ ಶಿವನಿಗೆ ಮೃತ್ಯುವಿನ ಭಯವಿಲ್ಲ. ಮೃತ್ಯುವೇ ಆತನ ಭೀತಿಯಿಂದ ವರ್ತಿಸುತ್ತಾ, ಕರ್ಮವಶರಾಗಿ

ಆಯುಸ್ಸನ್ನು ಕಳೆದುಕೊಂಡವರನ್ನು ತನ್ನ ವಶಕ್ಕೆ ತೆಗೆದುಕೊಳ್ಳುತ್ತಾನೆ. ಆದ್ದರಿಂದ ಶಿವಭಕ್ತನಾದವನಿಗೆ ಮೃತ್ಯುವಿನ ಭಯವು ಕೂಡ ಇಲ್ಲ- ಎಂಬುದನ್ನು ಪುರಾಣೋಕ್ತವಾದ ಮಾರ್ಕಂಡೇಯಾದಿಗಳ ಚರಿತ್ರೆಯ ದೃಷ್ಟಾಂತದೊಡನೆ ಈ ವಿಶೇಷಣವು ಸೂಚಿಸುತ್ತದೆ.

**ತ್ರ್ಯಂಬಕ :** ಜ್ಞಾನಶಕ್ತಿ, ಇಚ್ಛಾಶಕ್ತಿ, ಕ್ರಿಯಾಶಕ್ತಿಗಳೇ ಪರಮೇಶ್ವರನಿಗೆ ಮೂರು ಕಣ್ಣುಗಳೆಂದು ಆಗಮಗಳಲ್ಲಿ ಹೇಳಿರುತ್ತದೆ. ನಮ್ಮಲ್ಲಿರುವ ಈ ಶಕ್ತಿಗಳು ಆ ಪರಮೇಶ್ವರನ ಶಕ್ತಿತ್ರಯದ ಅಂಶಗಳೆಂಬುದನ್ನು ಅನುಸಂಧಾನಮಾಡುವದಕ್ಕೆ ಈ ವಿಶೇಷಣವು ಉಪಯೋಗವಾಗುತ್ತದೆ.

**ತ್ರಿಪುರಾಂತಕ :** ಅಸುರರ ತ್ರಿಪುರವನ್ನು ನಾಶಮಾಡಿದವನು ಅಸುರರಂತೆ ಹೊರಗಣ್ಣಿನ ತಿಳಿವಿನಿಂದ ಇರುವವರು ತಾವೂ ಕಷ್ಟಪಟ್ಟು ಇತರರನ್ನೂ ಸಂಕಟಗೊಳಿಸುವ ಸಂಸಾರದಲ್ಲಿ ತೊಳಲುವರೆಂದೂ ಯಾರು ಪರಮೇಶ್ವರನನ್ನೇ ಭಕ್ತಿಯಿಂದ ಶರಣುಹೋಗುವರೋ ಅವರಿಗೆ ಆತನು ಅವಸ್ಥಾತ್ರಯಾತೀತವಾದ **ತುರೀಯಾತ್ಮರೂಪದ** ಜ್ಞಾನವನ್ನು ಅನುಗ್ರಹಿಸಿ ಕಾಪಾಡುವನೆಂದೂ ಇಲ್ಲಿ ಸೂಚಿತವಾಗಿದೆ.

**ವಿಶ್ವರೂಪ :** ಎಲ್ಲವೂ ಪರಮೇಶ್ವರನ ರೂಪವೇ ಎಂಬ ಅರ್ಥವುಳ್ಳ ವಿಶೇಷಣವಿದು.

**ವಿರೂಪಾಕ್ಷ :** ಲೋಕವಿರುದ್ಧವಾದ ಕಣ್ಣುಗಳುಳ್ಳವನು. ಪರಮೇಶ್ವರನ ಆಕಾರವು ಮನುಷ್ಯರ ದೇಹಾದಿಗಳಂತೆ ಭೌತಿಕವಾದದ್ದಲ್ಲ ; ಆತನ ಇಂದ್ರಿಯಗಳೂ ಭೌತಿಕವಲ್ಲ. ಆತನ ಶರೀರವು ಶುದ್ಧ ಚೈತನ್ಯಮಯವಾದುದು : ಆತನ ಕಣ್ಣುಗಳು ದ್ವೈತವನ್ನು ನೋಡುವ ನಮ್ಮಗಳ ಕಣ್ಣಿನಂತಲ್ಲ ; ಜ್ಞಾನವೇ ಆತನ ಚಕ್ಷುಸ್ಸು.

**ವಿಶ್ವೇಶ್ವರ :** ಎಲ್ಲಕ್ಕೂ ಆತನೇ ಒಡೆಯನು.

**ವೃಷಭವಾಹನ :** ವೃಷಭವು ಧರ್ಮದ ಚಿಹ್ನವು. ಧರ್ಮವೇ ಪರಮೇಶ್ವರನ ವಾಹನವು.

**ವಿಷವಿಭೂಷಣ :** ಸಮುದ್ರಮಥನಕಾಲದಲ್ಲಿ ಹುಟ್ಟಿದ ಹಾಲಾಹಲವನ್ನು ಕುಡಿದು ಲೋಕೋದ್ಧಾರವನ್ನು ಮಾಡಿದ ಕರುಣಾನಿಧಿಯೆಂದರ್ಥ. ನಮ್ಮ ನಮಸ್ತ ಅಪರಾಧಗಳನ್ನೂ ಮನ್ನಿಸಿ ಒಂದಿಷ್ಟು ಭಕ್ತಿಯುಂಟಾದರೂ ಅದರಿಂದಲೇ ಪ್ರಸನ್ನನಾಗುವನೆಂದು ಇದರಿಂದ ಸೂಚಿತವಾಗುತ್ತದೆ.

**ವಿಶ್ವತೋಮುಖ :** ಹಿಂದೆ ಬಂದಿರುವ ''ಸಹಸ್ರಮುಖ''ವೆಂಬ ವಿಶೇಷಣದಲ್ಲಿ ಸಾವಿರಾರು ಬೇರೆಬೇರೆ ಮುಖವುಳ್ಳ ವಿರಾಡ್ರೂಪನೆಂಬ ಅರ್ಥವೂ ಸೇರಿದೆ. ತಾನು ಇದ್ದಂತೆಯೇ ಇದ್ದು ಎಲ್ಲಾ ಕಡೆಗೂ ದೃಷ್ಟಿಯನ್ನು ಪ್ರಸಾರಿಸಬಲ್ಲನೆಂಬುದು ಈ ವಿಶೇಷಣದಲ್ಲಿ ಮುಖ್ಯವಾಗಿ ತೋರುತ್ತದೆ.

**ಮಾಂ ರಕ್ಷ ರಕ** ಇಲ್ಲಿಂದ ಮುಂದಕ್ಕಿರುವ ಭಾಗವು ಪ್ರಾರ್ಥನೆಯ ರೂಪದಲ್ಲಿದ್ದರೂ ಇಲ್ಲಿ ಕೇಳಿಕೊಂಡಿರುವ ಅಭೀಷ್ಟವನ್ನೆಲ್ಲ ಪರಮೇಶ್ವರನು ನಮಗೆ ಅನುಗ್ರಹಿಸಿರುವನೆಂದೇ ಭಾವಿಸಿಕೊಳ್ಳಬೇಕು. ಶಿವನು ಸಕಲಭಯ ಭಯಂಕರರೂಪನಾಗಿರುವದರಿಂದ ಆತನ ಕವಚವನ್ನು ಧರಿಸಿರುವ ನಮಗೆ ಇನ್ನು ಮೇಲೆ ಯಾವದರ ಅಂಜಿಕೆಯೂ ಎಳ್ಳಷ್ಟೂ ಇರುವದಿಲ್ಲ ಎಂಬ ಭಾವನೆಯು ಈ ಭಾಗವನ್ನು ಉಚ್ಚಾರಣೆ ಮಾಡುವಾಗಲೇ ಮನಸ್ಸಿನಲ್ಲಿ ಮೂಡಿರಬೇಕು. ಆಗಲೇ ಮೃತ್ಯುಂಜಯನೂ ತ್ರ್ಯಂಬಕನೂ ಆದ ಸದಾಶಿವನ ಅನುಗ್ರಹವು ನಮಗೆ ಆಗುವದು.

# ೧೩. ಫಲಶ್ರುತಿ

ಇದರಲ್ಲಿ ಎರಡು ಭಾಗಗಳಿವೆ; ವೃಷಭಯೋಗೀಶ್ವರನು ರಾಜಪುತ್ರನಿಗೆ ಶಿವಕವಚವನ್ನು ಉಪದೇಶಿಸಿದ ಬಳಿಕ ಹೇಳಿದ ಫಲವಾಕ್ಯಗಳಿರುವ ಭಾಗವೊಂದು : ಈ ಕಥೆಯನ್ನು ಶೌನಕಾದಿಗಳಿಗೆ ಹೇಳಿದ ಸೂತರು ಹೇಳಿರುವ ಫಲಭಾಗವೊಂದು- ಇವೆರಡನ್ನೂ ಉದ್ದೇಶಪೂರ್ವಕವಾಗಿಯೇ ಇಲ್ಲಿ ಸೇರಿಸಿರುತ್ತದೆ. ಉಪದೇಶವನ್ನು ಮಾಡುವವರು ಈ ಕವಚದ ಮಹಿಮೆಯನ್ನು ತಿಳಿಸಿಯೇ ಉಪದೇಶಿಸಬೇಕೆಂಬ ಆಚಾರಕ್ರಮವನ್ನು ತಿಳಿಸಿಕೊಡುವದಕ್ಕೆ ಮೊದಲನೆಯ ಭಾಗವು ಬಂದಿದೆ. ಇದು ಸುಮ್ಮನೆ ರಾಜಪುತ್ರನನ್ನು ಉಬ್ಬಿಸುವದಕ್ಕೆ ಹೇಳಿದ್ದಲ್ಲ, ನಿಜವಾಗಿಯೂ ಇಂಥ

ಫಲವು ಅವನಿಗೆ ಆಗಿಯೇ ಆಯಿತು ; ಮುಂದೆ ಯಾರು ಬೇಕಾದರೂ ಶ್ರದ್ಧೆಯಿಂದ ಈ ಕವಚವನ್ನು ಧರಿಸಿ ಇದರ ಫಲವನ್ನು ಅನುಭವಿಸಬಹುದು - ಎಂಬುದನ್ನು ದೃಢಪಡಿಸುವದಕ್ಕೆ ಎರಡನೆಯ ಭಾಗವು ಬಂದಿದೆ. ಆದ್ದರಿಂದ ಸಾಧಕನಾದವನು ಶ್ರದ್ಧೆಯಿಂದಲೇ ಶಿವಕವಚವನ್ನು ಪಠಿಸಬೇಕು. ಪಠನಕಾಲದಲ್ಲಿಯೇ ತನ್ನ ಇಷ್ಟಾರ್ಥವೆಲ್ಲವೂ ನೆರವೇರಿ ತಾನು ಶಿವಸಾನ್ನಿಧ್ಯದ ಫಲವನ್ನು ಹೊಂದಿದಂತೆಯೇ ಭಾವಿಸಬೇಕು. ಹಾಗಾದರೆ ಮಾತ್ರ ಇದರ ಪೂರ್ಣ ಪ್ರಯೋಜನವನ್ನು ಮನಗಾಣಬಹುದು.

**ಋಷಭ ಉವಾಚ -**

**ಇತ್ಯೇತತ್ಕವಚಂ ಶೈವಂ ವರದಂ ವ್ಯಾಹೃತಂ ಮಯಾ ।**
**ಸರ್ವಬಾಧಾಪ್ರಶಮನಂ ರಹಸ್ಯಂ ಸರ್ವದೇಹಿನಾಮ್ ॥ ೨೮ ॥**

೨೮. ಋಷಭಯೋಗೀಶ್ವರನು ಹೇಳಿದ್ದೇನೆಂದರೆ : ಇಗೋ ಈ ಇಷ್ಟಾರ್ಥವನ್ನು ಸಲ್ಲಿಸುವ ಶಿವಕವಚವನ್ನು ನಿನಗೆ ಹೇಳಿರುತ್ತೇನೆ; ಇದು ಯಾವ ಜೀವರಿಗಾದರೂ ಸರ್ವವಿಧವಾದ ತೊಂದರೆಗಳನ್ನೂ ನಾಶಮಾಡುವ ರಹಸ್ಯವು.

**ಯಃ ಸದಾ ಧಾರಯೇನ್ಮರ್ತ್ಯಃ ಶೈವಂ ಕವಚಮುತ್ತಮಮ್ ।**
**ನ ತಸ್ಯ ಜಾಯತೇ ಕ್ವಾಪಿ ಭಯಂ ಶಮ್ಭೋರನುಗ್ರಹಾತ್ ॥ ೨೯ ॥**

೨೯. ಈ ಉತ್ತಮವಾದ ಶಿವಕವಚವನ್ನು ಯಾವ ಮರ್ತ್ಯನು ಯಾವಾಗಲೂ ಧರಿಸಿರುವನೋ ಅವನಿಗೆ ಶಂಭುವಿನ ಅನುಗ್ರಹದಿಂದ ಎಲ್ಲಿಯೂ ಅಂಜಿಕೆಯುಂಟಾಗುವದಿಲ.

**ಕ್ಷೀಣಾಯುಃ ಪ್ರಾಪ್ತಮೃತ್ಯುರ್ವಾ ಮಹಾರೋಗಹತೋಽಪಿ ವಾ ।**
**ಸದ್ಯಃ ಸುಖಮವಾಪ್ನೋತಿ ದೀರ್ಘಮಾಯುಶ್ಚ ವಿನ್ದತಿ ॥ ೩೦ ॥**

೩೦. ಆಯುಸು ಕಳೆದುಹೋದವನಾಗಿರಲಿ, ಮೃತ್ಯುಕಾಲವು ಬಂದವನಾಗಿರಲಿ, ಕೆಟ್ಟರೋಗದಿಂದ ನರಳುತ್ತಿರುವವನಾಗಿರಲಿ- ಇದರಿಂದ ಕೂಡಲೆ ಸುಖವನ್ನು ಹೊಂದುತ್ತಾನೆ. ದೀರ್ಘಾಯುಸ್ಸನ್ನೂ ಪಡೆದುಕೊಳ್ಳುತ್ತಾನೆ.

**ಸರ್ವದಾರಿದ್ರ್ಯಶಮನಂ ಸೌಮಙ್ಗಲ್ಯವಿವರ್ಧನಮ್ ।**
**ಯೋ ಧತ್ತೇ ಕವಚಂ ಶೈವಂ ಸ ದೇವೈರಪಿ ಪೂಜ್ಯತೇ ॥ ೩೧ ॥**

೩೧. ಎಲ್ಲಾ ಬಗೆಯ ಬಡತನವನ್ನೂ ನಾಶಗೊಳಿಸುವದಾಗಿಯೂ ಸುಕ್ಷೇಮವನ್ನು ಹೆಚ್ಚಿಸುವದಾಗಿಯೂ ಇರುವ ಶಿವಕವಚವನ್ನು ಯಾವನು ಧರಿಸಿರುವನೋ ಅವನು ದೇವತೆಗಳಿಂದಲೂ ಪೂಜ್ಯನಾಗುವನು.

**ಮಹಾಪಾತಕಸಂಘಾತೈರ್ಮುಚ್ಯತೇ ಚೋಪಪಾತಕೈಃ ।**
**ದೇಹಾನ್ತೇ ಮುಕ್ತಿಮಾಪ್ನೋತಿ ಶಿವವರ್ಮಾನುಭಾವತಃ ॥ ೩೨ ॥**

೩೨. ಶಿವಕವಚದ ಮಹಿಮೆಯಿಂದ ಮಹಾಪಾತಕಗಳ ರಾಶಿಗಳಿಂದಲೂ ಉಪಪಾತಕಗಳಿಂದಲೂ ಬಿಡುಗಡೆಯನ್ನು ಹೊಂದಿ ದೇಹಾಂತದಲ್ಲಿ ಶಿವನನ್ನು ಸೇರಿಕೊಳ್ಳುತ್ತಾನೆ.

**ತ್ವಮಪಿ ಶ್ರದ್ಧಯಾ ವತ್ಸ ಶೈವಂ ಕವಚಮುತ್ತಮಮ್ ।**
**ಧಾರಯಸ್ವ ಮಯಾ ದತ್ತಂ ಸದ್ಯಃ ಶ್ರೇಯೋ ಹ್ಯವಾಪ್ಸ್ಯಸಿ ॥ ೩೩ ॥**

೩೩. ಮಗುವೆ, ನೀನೂ ಕೂಡ ನಾನು ನಿನಗೆ ಕೊಟ್ಟಿರುವ ಉತ್ತಮವಾದ ಶಿವಕವಚವನ್ನು ಶ್ರದ್ಧೆಯಿಂದ ಧರಿಸಿಕೊ, ಬೇಗನೆ ಶ್ರೇಯಸ್ಸನ್ನು ಹೊಂದುವೆ.

ಶಿವಕವಚವೆಂಬುದು ಜೀವರಿಗೆ ಒಂದು ಅಮೋಘವಾದ ಅಕ್ಷಯವಾದ ರಕ್ಷಣೆಯು. ಎಲ್ಲೆಲ್ಲಿಯೂ ಶಿವನ ಮಂಗಲಸ್ವರೂಪವನ್ನೇ ನೋಡುತ್ತಾ ಆತನ ಆಶ್ರಯದಲ್ಲಿಯೇ ಇದ್ದುಕೊಂಡು ಆತನೇ ನಮಗೆ ಸರ್ವಶ್ರೇಯಸ್ಸಿಗೂ ಮೂಲವು, ಆತನೇ ಸರ್ವಬಂಧವಿಮೋಚಕನು, ಸರ್ವಭಯಪರಿಹಾರಕನು, ಸರ್ವಶಕ್ತಿಪ್ರದಾಯಕನು, ಸರ್ವೋತ್ಸಾಹದಾತೃವು, ಸರ್ವಕರ್ಮಫಲದಾತೃವು, ಬಂಧುವು, ಮಾತಾಪಿತೃಸ್ವರೂಪನು, ಸಖನು, ಶರಣನು, ಆತ್ಮನು - ಎಂಬ ದೃಢವಾದ ಶ್ರದ್ಧೆಯಿಂದ ವ್ಯವಹರಿಸುವವನೇ ಶಿವಕವಚವನ್ನು ನಿಜವಾಗಿ ಧರಿಸಿದಾತನು. ಈ ಕವಚವನ್ನು ಧರಿಸಿ ಬಾಳುವೆನೆಂದು ಯಾವನು ಎಂದು ನಿಶ್ಚಯಿಸುವನೋ ಅವನಿಗೆ ಅಂದಿನಿಂದ ಹಿಂದೆ ಮಾಡಿದ ಪಾತಕಗಳ ಫಲವು

ಅಂಟದಂತೆ ಶಿವನೇ ನೋಡಿಕೊಳ್ಳುವನು, ಆ ಪಾತಕಗಳ ಫಲವಾಗಿ ಉಂಟಾಗಬೇಕಾಗಿದ್ದ ರೋಗ, ದಾರಿದ್ರ್ಯ, ಅಪಮೃತ್ಯು - ಮುಂತಾದವುಗಳನ್ನೆಲ್ಲ ಹತ್ತಿರಕ್ಕೆ ಬರದಂತೆ ಶಿವನು ಹೊಡೆದಟ್ಟುವನು, ಯಾವ ವಿಧವಾದ ಅಂಜಿಕೆಗೂ ಕಾರಣವಿಲ್ಲವೆಂಬ ಉತ್ತಮಜ್ಞಾನವನ್ನೂ ಅನುಗ್ರಹಿಸುವನು. ಈ ಫಲಕ್ಕೆಲ್ಲ ಶ್ರದ್ಧೆಯೇ ಮೂಲವು. ಸರ್ವಜ್ಞನೂ ಸರ್ವಶಕನೂ ಸರ್ವವ್ಯಾಪಕನೂ ದಯಾಮಯನೂ ಸರ್ವರ ಆತ್ಮನೂ ಆಗಿರುವ ಶಿವನು ಋಷಭಯೋಗೀಶ್ವರ, ಭದ್ರಾಯು - ಮುಂತಾದವರಿಗೆ ಪ್ರಸನ್ನನಾದಂತೆ ಈಗಲೂ ಪ್ರಸನ್ನನಾಗಿಯೇ ಇರುವನೆಂಬ ಗಟ್ಟಿಯಾದ ನಂಬಿಕೆಯಿಂದ ಆತನ ಸೇವೆ, ಸ್ತೋತ್ರ, ಧ್ಯಾನಗಳಲ್ಲಿ ಮಗ್ನನಾಗುವದೊಂದೇ ಇಲ್ಲಿ ಅವಶ್ಯವಾಗಿರುತ್ತದೆ.

**ಸೂತ ಉವಾಚ-**

**ಇತ್ಯುಕ್ತ್ವಾ ಋಷಭೋ ಯೋಗೀ ತಸ್ಮೈ ಪಾರ್ಥಿವಸೂನವೇ ।**
**ದದೌ ಶಂಖ ಮಹಾರಾವಂ ಖಡ್ಗಂ ಚಾರಿನಿಷೂದನಮ್ ॥ ೩೪ ॥**

೩೪. ಸೂತರು ಹೇಳಿದ್ದು : ಋಷಭಯೋಗಿಯು ಹೀಗೆಂದು ನುಡಿದು ಆ ರಾಜಕುಮಾರನಿಗೆ ಮಹಾಧ್ವನಿಯುಕ್ತವಾದ ಶಂಖವನ್ನೂ ಶತ್ರುಗಳನ್ನು ಕೊಲ್ಲುವ ಕತ್ತಿಯನ್ನೂ ಕೊಟ್ಟನು.

**ಪುನಶ್ಚ ಭಸ್ಮ ಸಮ್ಮಂತ್ರ್ಯ ತದಂಗಂ ಪರಿತೋಽಸ್ಪೃಶತ್ ।**
**ಗಜಾನಾಂ ಷಟ್ಸಹಸ್ರಸ್ಯ ದ್ವಿಗುಣಸ್ಯ ಬಲಂ ದದೌ ॥ ೩೫ ॥**

೩೫. ಮತ್ತೊಮ್ಮೆ ಭಸ್ಮವನ್ನು ಮಂತ್ರಿಸಿ ಆತನ ಮೈಗೆಲ್ಲ ಸವರಿದನು. ಆರುಸಾವಿರ ಆನೆಗಳ ಬಲಕ್ಕೆ ಇಮ್ಮಡಿಯಾದ ಬಲವನ್ನು ಕೊಟ್ಟನು.

**ಭಸ್ಮಪ್ರಬಾವಾತ್ ಸಂಪ್ರಾಪ್ತಬಲೈಶ್ವರ್ಯಧೃತಿಸ್ಮೃತಿಃ ।**
**ಸ ರಾಜಪುತ್ರಃ ಶುಶುಭೇ ಶರದರ್ಕ ಇವ ಶ್ರಿಯಾ ॥ ೩೬ ॥**

೩೬. ಭಸ್ಮದ ಪ್ರಭಾವದಿಂದ ಬಲ, ಐಶ್ವರ್ಯ, ಧೃತಿ, ಸ್ಮೃತಿ - ಇವುಗಳನ್ನು ಪಡೆದುಕೊಂಡ ಆ ರಾಜಪುತ್ರನು ಶರತ್ಕಾಲದ ಸೂರ್ಯನು ಕಾಂತಿಯಿಂದ ಹೊಳೆಯುವಂತೆ ಹೊಳೆಯುತ್ತಿದ್ದನು.

**ತಮಾಹ ಪ್ರಾಂಜಲಿಂ ಭೂಯಃ ಸ ಯೋಗೀ ನೃಪನಂದನಮ್ ।**
**ಏಷ ಖಡ್ಗೋ ಮಯಾ ದತ್ತಃ ತಪೋಮಂತ್ರಾನುಭಾವಿತಃ ॥ ೩೭ ॥**

೩೭. ಕೈಮುಗಿದು ನಿಂತುಕೊಂಡಿದ್ದ ಆ ದೊರೆಮಗನನ್ನು ನೋಡಿ ಆ ಯೋಗಿಯು ಮತ್ತೆ ಇಂತೆಂದನು : ''ಇಗೊ, ಈ ಖಡ್ಗವನ್ನು ತಪಸ್ಸು, ಮಂತ್ರ - ಇವುಗಳ ಮಹಿಮೆಯನ್ನು ಸೇರಿಸಿ ನಿನಗೆ ಕೊಟ್ಟಿರುತ್ತೇನಷ್ಟೆ;

**ಶಿತಧಾರಮಿಮಂ ಖಡ್ಗಂ ಯಸ್ಮೈ ದರ್ಶಯಸೇ ಸ್ಫುಟಮ್ ।**
**ಸ ಸದ್ಯೋ ಮ್ರಿಯತೇ ಶತ್ರುಃ ಸಾಕ್ಷಾನ್ಮೃತ್ಯುರಪಿ ಸ್ವಯಮ್ ॥ ೩೮ ॥**

೩೮. ''ಈ ಹರಿತವಾದ ಅಲುಗಿನ ಕತ್ತಿಯನ್ನು ನೀನು ಯಾರ ಕಡೆಗೆ ಸರಿಯಾಗಿ ತೋರಿಸುವೆಯೋ, ಆತನು ಸಾಕ್ಷಾನ್ಮೃತ್ಯುವೇ ಆಗಿರಲಿ, ಕೂಡಲೇ ಸತ್ತುಹೋಗುತ್ತಾನೆ.

**ಅಸ್ಯ ಶಂಖಸ್ಯ ನಿರ್ಹ್ರಾದಂ ಯೇ ಶೃಣ್ವನ್ತಿ ತವಾಹಿತಾಃ ।**
**ತೇ ಮೂರ್ಛಿತಾಃ ಪತಿಷ್ಯನ್ತಿ ನ್ಯಸ್ತಶಸ್ತ್ರಾ ವಿಚೇತನಾಃ ॥ ೩೯ ॥**

೩೯. ''ಈ ಶಂಖದ ನಾದವನ್ನು ನಿನ್ನ ಶತ್ರುಗಳಲ್ಲಿ ಯಾರು ಯಾರು ಕೇಳುವರೋ ಅವರು ಶಸ್ತ್ರಗಳ್ನು ಬಿಸುಟು ಎಚ್ಚರತಪ್ಪಿ ಮೂರ್ಛಿತರಾಗಿ ಬೀಳುವರು.

**ಖಡ್ಗಶಂಖಾವಿಮೌ ದಿವ್ಯೌ ಪರಸೈನ್ಯವಿನಾಶನೌ ।**
**ಸಕ್ಷಾಣಾಂ ಶೌರ್ಯತೇಜೋವಿವರ್ಧನೌ ॥ ೪೦ ॥**

೪೦. ''ಈ ದಿವ್ಯವಾದ ಖಡ್ಗಶಂಖಗಳೆರಡೂ ಶತ್ರುಸೇನೆಯನ್ನು ನಾಶಮಾಡುವವು ; ನಿನ್ನ ಕಡೆಯ ಸೈನ್ಯದವರಿಗೆಲ್ಲ ಶೌರ್ಯ, ತೇಜಸ್ಸು - ಇವುಗಳನ್ನು ಹೆಚ್ಚಿಸುವವು.

**ಏತಯೋಶ್ಚ ಪ್ರಭಾವೇಣ ಶೈವೇನ ಕವಚೇನ ಚ ।**
**ದ್ವಿಷಟ್ಸಹಸ್ರನಾಗಾನಾಂ ಬಲೇನ ಮಹತಾಪಿ ಚ ॥ ೪೧ ॥**

**ಭಸ್ಮಧಾರಣಸಾಮರ್ಥ್ಯಾಚ್ಛತ್ರುಸೈನ್ಯಂ ವಿಜೇಷ್ಯಸಿ ।**
**ಪ್ರಾಪ್ಯ ಸಿಂಹಾಸನಂ ಪಿತ್ರ್ಯಂ ಗೋಪ್ತಾಽಸಿ ಪೃಥಿವೀಮಿಮಾಮ್ ॥ ೪೨ ॥**

೪೧ - ೪೨. ''ಈ ಎರಡರ ಮಹಿಮೆಯಿಂದಲೂ ಶಿವಕವಚದಿಂದಲೂ ಹನ್ನೆರಡುಸಾವಿರ ಆನೆಗಳ ಮಹಾಬಲದಿಂದಲೂ ಭಸ್ಮಧಾರಣ ಮಾಡಿದ್ದರಿಂದಲೂ ಶತ್ರುಸೈನ್ಯವನ್ನು ನೀನು ಜಯಿಸುವೆ, ನಿನ್ನ ತಂದೆಯ ಸಿಂಹಾಸನವನ್ನು ಪಡೆದು ಈ ಪೃಥ್ವಿಯನ್ನು ಆಳುವೆ.''

ಋಷಭಯೋಗೀಶ್ವರನು ಶಿವಕವಚವನ್ನುಪದೇಶಿಸಿದಮೇಲೂ ದೃಷ್ಟೋಪಾಯಗಳನ್ನೇನೂ ಮರೆಯಹೇಳಲಿಲ್ಲ. ಆಗಿನ ಕಾಲದಲ್ಲಿ ಯುದ್ಧಕ್ಕೆ ಉಪಯೋಗಿಸುತ್ತಿದ್ದ ಖಡ್ಗವೊಂದನ್ನೂ ಶಂಖವೊಂದನ್ನೂ ಕೊಟ್ಟನೆಂಬುದು ಇದಕ್ಕೆ ನಿದರ್ಶನವಾಗಿರುತ್ತದೆ. ಅದರಂತೆ ಈಗಲೂ ನಾವು ವ್ಯವಹಾರದಲ್ಲಿ ನಮಗೆ ಬಂದೊದಗಬಹುದಾದ ಆಯಾ ಕಷ್ಟಗಳಿಗೆ ನಮಗೆ ಆಯಾ ಸಮಯಕ್ಕೆ ತೋಚಬಹುದಾದ ಉಪಾಯಗಳನ್ನು ಅವಶ್ಯವಾಗಿ ಉಪಯೋಗಿಸಿಕೊಳ್ಳಬೇಕು. ''ನಾನು ಶಿವನನ್ನು ನಂಬಿದವನಾದ್ದರಿಂದ ನನಗೆ ಲೌಕಿಕಸಾಧನಗಳೇನೂ ಬೇಕೇ ಇಲ್ಲ'' ಎಂದು ಸೋಮಾರಿಯಾಗಿ ಕೂತುಕೊಳ್ಳಬಾರದು. ಆದರೆ ಇಲ್ಲಿ ನೆನಪಿಡಬೇಕಾದದ್ದು ಮತ್ತೊಂದು ವಿಷಯವಿದೆ ; ನಾವು ಉಪಯೋಗಿಸುವ ಲೌಕಿಕೋಪಾಯಗಳೆಂಬಿವೂ ತಮಗೆ ತಾವೇ ಸಾಕಾಗಿರುವ ಸಾಧನಗಳೆಂದು ಮಾತ್ರ ನಾವು ಎಂದಿಗೂ ನಂಬಬಾರದು. ಲೌಕಿಕೋಪಾಯಗಳೆಂಬಿವೂ ನಿಜವಾಗಿ ಪರಮೇಶ್ವರನ ಅನುಗ್ರಹವೇ ಎಂಬುದನ್ನು ತಪ್ಪದೆ ನೆನಪಿನಲ್ಲಿಟ್ಟಿರಬೇಕು. ಯೋಗಿವರ್ಯನು ಭದ್ರಾಯುವಿಗೆ ಖಡ್ಗವನ್ನೂ ಶಂಖವನ್ನೂ ಕೊಟ್ಟನಾದರೂ ಅವುಗಳಲ್ಲಿ ತನ್ನ ತಪೋಬಲವನ್ನೂ ಕೂಡಿಸಿಕೊಟ್ಟನು ; ಇದಲ್ಲದೆ ಆಮೇಲೂ ತಾನು ಪರಮೇಶ್ವರನ ಸ್ಮರಣೆಯಿಂದ ಅಭಿಮಂತ್ರಿಸಿದ ಭಸ್ಮವನ್ನು ಅವನ ಮೈಗೆಲ್ಲ ಸವರಿ ವಜ್ರಕವಚವನ್ನು ತೊಡಿಸಿದನು. ಅವನಿಗೆ ಹನ್ನೆರಡು ಸಾವಿರ ಆನೆಗಳ ಬಲವನ್ನು ತಪೋಬಲದಿಂದ ಅನುಗ್ರಹಮಾಡಿಕೊಟ್ಟರೂ ಆಮೇಲೂ ಶಿವಕವಚದ ಮಹಿಮೆಯನ್ನು ಮರೆಯಲಾಗದೆಂದು ನೆನಪುಕೊಟ್ಟಿರುತ್ತಾನೆ. ಆದ್ದರಿಂದ

ಪ್ರಯತ್ನವನ್ನು ಮಾಡುವದು ನಮ್ಮ ಕಡೆಯದೆಂದೂ ಅದನ್ನು ಸಫಲಗೊಳಿಸುವದು ಈಶ್ವರನ ಕಡೆಯ ಮಾತೆಂದೂ ನಾವು ಎಂದಿಗೂ ಮರೆಯದೆ ಇರಬೇಕು.

ಈಗ ನಾವೇನೂ ಭದ್ರಾಯುವಿನಂತೆ ಯಾವ ಶತ್ರುಗಳೊಡನೆಯೂ ಹೋರಾಡಬೇಕಾದದ್ದಿಲ್ಲ ; ನಾವು ಯಾವ ರಾಜ್ಯವನ್ನೂ ಕಳೆದುಕೊಂಡೂ ಇರುವದಿ ೦ದರೆ ಈ ಜೀವನಸಂಗ್ರಾಮದಲ್ಲಿ ಇಲ್ಲದಸಲ್ಲದ ಅಂಜಿಕೆಗಳೂ ವಿಘ್ನಪರಂಪರೆಗಳೂ ಎದುರಿಗೆ ಬಂದು ನಮಗೆ ತೊಂದರೆಯನ್ನುಂಟು ಮಾಡುತ್ತಿವೆ. ಅವುಗಳನ್ನು ಎದುರಿಸುವದಕ್ಕೆ ನಾವು ಅವಶ್ಯವಾಗಿ ಸ್ವಪ್ರಯತ್ನವನ್ನು ಮಾಡಬೇಕಾದರೂ ಪ್ರಯತ್ನದ ಮೂಲವಾದ, ಮತ್ತು ಅದನ್ನು ಸಫಲ ಗೊಳಿಸುವ, ಪರಮೇಶ್ವರನ ಸ್ಮರಣೆಯನ್ನು ಎಂದಿಗೂ ಮರೆಯಬಾರದು.

ಆಗ ನಾವು ಯಾವ ಕಾರ್ಯದಲ್ಲಿ ತೊಡಗಿದರೂ ಅದಕ್ಕೆ ಅಡ್ಡಿಯಾಗಿ ಬರುವ ಘಟನೆಗಳಿಗೆ ನಮ್ಮ ಪ್ರಯತ್ನವೇ ಖಡ್ಗವಾಗಿ ಪರಿಣಮಿಸುವದು ; ನಾವು ಆಡುವ ಸಾತ್ತ್ವಿಕವಚನವೇ ನಮ್ಮ ಎದುರಾಳಿಗಳಿಗೆ ಭೀಕರವಾದ ಶಂಖಧ್ವಾನ ವಾಗುವದು. ನಮಗೆ ಎದುರಾಗುವ ಎಲ್ಲಾ ಬಗೆಯ ವಿಘ್ನಪರಂಪರೆಗಳನ್ನೂ ಧೈರ್ಯದಿಂದ ತಾಳಿಕೊಂಡು ಅಥವಾ ಪರಿಹರಿಸಿಕೊಂಡು ಮುಂದುವರಿಯುವ ಧೈರ್ಯವೂ ಬಲವೂ ಕೂಡಿಕೊಳ್ಳುವವು. ಭದ್ರಾಯುವು ಶತ್ರುಗಳು ಆಕ್ರಮಿಸಿಕೊಂಡಿದ್ದ ತನ್ನ ಹಕ್ಕಾದ ಪಿತ್ರಾರ್ಜಿತಸಿಂಹಾಸನವನ್ನು ಹೇಗೆ ಪಡೆದು ಕೊಂಡನೋ ಅದರಂತೆಯೇ ನಾವೂ ನಮ್ಮೆಲ್ಲರ ಪರಮಪಿತನಾದ ಮಹೇಶ್ವರನು ನಮಗಾಗಿ ಕಾದಿಟ್ಟಿರುವ ಶಾಂತಿಸುಖಸ್ಥಾನವನ್ನು ನಿರ್ವಿಘ್ನವಾಗಿ ಪಡೆದುಕೊಳ್ಳುವೆವು. ಇವೆಲ್ಲಕ್ಕೂ ಶಿವಕವಚದ ಪಠನ, ಶಿವನ ಸ್ಮರಣಧ್ಯಾನಗಳು - ಇವೇ ಕಾರಣವಾಗುವವು.

**ಇತಿ ಭದ್ರಾಯುಷಂ ಸಮ್ಯಗನುಶಾಸ್ಯ ಸಮಾತೃಕಮ್ ।**
**ತಾಭ್ಯಾಂ ಸಂಪೂಜಿತಃ ಸೋಽಥ ಯೋಗೀ ಸ್ವೈರಗತಿರ್ಯಯೌ ॥**

೪೩. ಇಂತೆಂದು ತಾಯಿಯೊಡಗೂಡಿದ ಭದ್ರಾಯುವಿಗೆ ಉಪದೇಶಿಸಿ ಅವರಿಬ್ಬರ ಪೂಜೆಯನ್ನು ಕೈಕೊಂಡು ಆ ಯೋಗಿಯು ತನ್ನ ಮನಬಂದಂತೆ ಹೊರಟುಹೋದನು.

ಋಷಭಯೋಗೀಶ್ವರನು ಯಾವದೊಂದು ನಿಮಿತ್ತವೂ ಇಲ್ಲದೆಯೇ ಭದ್ರಾಯುವಿನ ಮೇಲೆ ಕೃಪೆದೋರಿದನು. ಆ ರಾಜಕುಮಾರನು ಅಲ್ಪಾಯುವಾಗಿ ಮರಣೋನ್ಮುಖನಾಗಿರಲು ತನ್ನ ತಪೋಮಹಿಮೆಯಿಂದ ಅವನನ್ನು ಬದುಕಿಸಿ, ಅವನಿಗೆ ಧರ್ಮೋಪದೇಶವನ್ನು ಮಾಡಿ, ಕೊನೆಗೆ ಇಹಪರಗಳೆರಡರಲ್ಲಿಯೂ ಸತ್ಫಲವನ್ನು ಕೊಡುವ ಶಿವಕವಚವನ್ನು ಅವನಿಗೆ ಉಪದೇಶಮಾಡಿದನು. ಅನ್ಯಾಯವಾಗಿ ಶತ್ರುರಾಜರು ಇವನಿಗೆ ತೊಂದರೆಯನ್ನು ಕೊಡುತ್ತಿದ್ದಾರೆಂಬುದು ತನಗೆ ಶರಣಾಗತನಾದ ಭದ್ರಾಯುವಿನ ತಾಯಿಯಿಂದ ತಿಳಿದಕೂಡಲೆ ಅವನ ಹೃದಯವು ಕರಗಿ ನೀರಾಯಿತು. ಆದರ ಫಲವೇ ಶಿವಕವಚೋಪದೇಶವು. ಆಮೇಲೆ ಆ ಯೋಗೀಶ್ವರನು ಅಲ್ಲಿ ನಿಲ್ಲಲಿಲ್ಲ. ಅವರಿಬ್ಬರಿಗೂ ತನ್ನ ಕೈಯಲ್ಲಾದ ಸಹಾಯವನ್ನು ಮಾಡಿದ ಮೇಲೆ ತನ್ನ ಕೆಲಸವು ಮುಗಿಯಿತೆಂದು ತನ್ನ ಎಂದಿನ ಶಿವಸ್ಮರಣೆಯಲ್ಲಿಯೇ ನಿರತನಾಗಿ ಹೊರಟುಹೋದನು. ಹೀಗೆ ಖ್ಯಾತಿ, ಲಾಭ, ಗೌರವ - ಮುಂತಾದ ಯಾವದೊಂದು ಪ್ರತಿಫಲವನ್ನೂ ಬಯಸದೆ ಋಷಭ ಯೋಗೀಶ್ವರನು ಅನುಗ್ರಹಿಸಿದ ಉತ್ತಮಸಾಧನವಾಗಿರುವ ಈ ಕವಚವನ್ನು ಜೀವನವನ್ನು ಸುಖದಿಂದ ಸಾಗಿಸಿ ಕೊನೆಯಲ್ಲಿ ಶಿವಸಾಯುಜ್ಯವನ್ನೇ ಪಡೆಯಬೇಕೆನ್ನುವವರು ಅರ್ಥಾನುಸಂಧಾನಪೂರ್ವಕವಾಗಿ ಪಠಿಸಿ ಇದರಿಂದಾಗುವ ಪರಮಲಾಭವನ್ನು ಪಡೆದುಕೊಳ್ಳಬೇಕು - ಎಂಬುದು ಸೂತರ ವಚನದ ತಾತ್ಪರ್ಯವು.

# ೧೪. ಉತ್ತರನ್ಯಾಸ, ದಿಗ್ವಿಮೋಕ

ಹಿಂದೆ ಹೇಳಿರುವಂತೆ ಅಂಗನ್ಯಾಸವನ್ನೂ ದಿಗ್ಬಂಧವನ್ನೂ ಮಾಡಿರುವವರು ಮತ್ತೆ ನ್ಯಾಸವನ್ನು ಮಾಡಿ ''ಓಂ ಭೂರ್ಭುವಃಸ್ವರೋಮ್'' ಎಂದು ದಿಗ್ವಿಮೋಕವನ್ನು ಮಾಡಬೇಕು. ಪರಮೇಶ್ವರನ ಸಾನ್ನಿಧ್ಯದಿಂದಲೇ ಈಗ ನಾನು ಹೊರಕ್ಕೆ ಬಂದಿರುವೆನೆಂಬ ವಾಸನಾನಂದವನ್ನು ಅನುಭವಿಸುವದಕ್ಕೆ ಇದು ಕಾರಣವಾಗುವದು. ಹಿಂದೆ ನ್ಯಾಸವನ್ನು ಮಾಡದೆ ಇದ್ದರೆ ಇಲ್ಲಿಯೂ

ಮಾಡಬೇಕಾಗಿರುವದಿಲ್ಲ. ಕೈಯಲ್ಲಿ ಶುದ್ಧವಾದ ಭಸ್ಮವನ್ನು ಹಿಡಿದು ಮೇಲೆ ಹೇಳಿದಂತೆ ಪಠಿಸಿದ ಬಳಿಕ ಫಲಶ್ರುತಿಯನ್ನು ಹೇಳಿ ಮೈಗೆಲ್ಲ ಅದನ್ನು ಉದ್ಧೂಳನಮಾಡಿಕೊಂಡು -ತ್ರಿಪುಂಡ್ರವನ್ನು ಧಾರಣಮಾಡಬೇಕು. ಮೊದಲೇ ತ್ರಿಪುಂಡ್ರವನ್ನು ಧಾರಣಮಾಡಿರುವವರು ಹಾಗೆಯೇ ಶ್ರದ್ಧೆಯಿಂದ ಉದ್ಧೂಳನವನ್ನು ಮಾಡಿಕೊಳ್ಳಬೇಕು. ಇದು ಈಗ ನಾನು ಸಾಕ್ಷಾತ್ತಾಗಿಯೇ ಶಿವಕವಚವನ್ನು ಧರಿಸಿರುವೆನೆಂಬ ಭಾವನೆಯನ್ನು ತಂದುಕೊಳ್ಳುವದಕ್ಕೆ ಸಹಕಾರಿಯಾಗುತ್ತದೆ.

**ಓಂ ತತ್ಸತ್, ಸಾಂಬಸದಾಶಿವಾರ್ಪಣಮಸ್ತು**

॥ ನಮೋ ಭಗವತ್ಯೈ ॥

# ಇಂದ್ರಾಕ್ಷೀಸ್ತೋತ್ರಮ್[1]

ಅಸ್ಯ ಶ್ರೀ ಇಂದ್ರಾಕ್ಷೀಸ್ತೋತ್ರಮಹಾಮಂತ್ರಸ್ಯ, ಶಚೀಪುರಂದರ ಋಷಿಃ, ಅನುಷ್ಟುಪ್ಛಂದಃ, ಇಂದ್ರಾಕ್ಷೀ ದುರ್ಗಾದೇವತಾ, ಲಕ್ಷ್ಮೀರ್ಬೀಜಂ, ಭುವನೇಶ್ವರೀತಿ ಶಕ್ತಿಃ, ಭವಾನೀತಿ ಕೀಲಕಂ, ಮಮ ಇಂದ್ರಾಕ್ಷೀಪ್ರಸಾದ ಸಿದ್ಧ್ಯರ್ಥೇ ಜಪೇ ವಿನಿಯೋಗಃ ॥

## ಅಥ ನ್ಯಾಸಃ

ಇಂದ್ರಾಕ್ಷೀಂ ಅಂಗುಷ್ಠಾಭ್ಯಾಂ ನಮಃ । ಮಹಾಲಕ್ಷ್ಮೀಂ ತರ್ಜನೀಭ್ಯಾಂ ನಮಃ । ಮಾಹೇಶ್ವರೀಂ ಮಧ್ಯಮಾಭ್ಯಾಂ ನಮಃ । ಅಂಬುಜಾಕ್ಷೀಂ ಅನಾಮಿಕಾಭ್ಯಾಂ ನಮಃ । ಕಾತ್ಯಾಯಿನೀಂ ಕನಿಷ್ಠಿಕಾಭ್ಯಾಂ ನಮಃ । ಕೌಮಾರೀಂ ಕರತಲಕರಪೃಷ್ಠಾಭ್ಯಾಂ ನಮಃ । ಇಂದ್ರಾಕ್ಷೀಂ ಹೃದಯಾಯ ನಮಃ । ಮಹಾಲಕ್ಷ್ಮೀಂ ಶಿರಸೇ ಸ್ವಾಹಾ । ಮಹೇಶ್ವರೀಂ ಶಿಖಾಯೈ ವಷಟ್ ।

ಅಂಬುಜಾಕ್ಷೀಂ ಕವಚಾಯ ಹುಮ್ । ಕಾತ್ಯಾಯಿನೀಂ ನೇತ್ರತ್ರಯಾಯ ವೌಷಟ್। ಕೌಮಾರೀಂ ಅಸ್ತ್ರಾಯ ಫಟ್ ಭೂರ್ಭುವಸ್ಸುವರೋಮಿತಿ ದಿಗ್ಬಂಧಃ ॥

## ಅಥ ಧ್ಯಾನಮ್

ನೇತ್ರಾಣಾಂ ದಶಭಿಶ್ಶತೈಃ ಪರಿವೃತಾಮತ್ಯುಗ್ರಚರ್ಮಾಂಬರಾಂ
ಹೇಮಾಭಾಂ ಮಹತೀಂ ವಿಲಂಬಿತಶಿಖಾಮಾಮುಕ್ತಕೇಶಾನ್ವಿತಾಮ್[1]
ಘಂಟಾಮಂಡಿತಪಾದಪದ್ಮಯುಗಲಾಂ ನಾಗೇಂದ್ರಕುಂಭಸ್ತನೀಂ
ಇಂದ್ರಾಕ್ಷೀಂ ಪರಿಚಿಂತಯಾಮಿ ಮನಸಾ ಕಲ್ಪೋಕ್ತಸಿದ್ಧಿಪ್ರದಾಮ್ ॥೧॥
ಇಂದ್ರಾಕ್ಷೀಂ ದ್ವಿಭುಜಾಂ ದೇವೀಂ ಪೀತವಸ್ತ್ರದ್ವಯಾನ್ವಿತಾಮ್ ।
ವಾಮಹಸ್ತೇ ವಜ್ರಧರಾಂ ದಕ್ಷಿಣೇನ ವರಪ್ರದಾಮ್ ॥೨॥
ಇಂದ್ರಾಕ್ಷೀಂ ಶಿವಯುವತೀಂ ನಾನಾಲಂಕಾರಭೂಷಿತಾಮ್ ।
ಪ್ರಸನ್ನವದನಾಂಭೋಜಾಮಪ್ಸರೋಗಣಸೇವಿತಾಮ್ ॥೩॥
ಪೀತಾಂಬರಾಂ ವಜ್ರಧರೈಕಹಸ್ತಾಂ ನಾನಾವಿಧಾಲಂಕರಣಾಂ ಪ್ರಸನ್ನಾಮ್ ।
ತ್ವಾಮಪ್ಸರಸ್ಸೇವಿತಪಾದಪದ್ಮಾಮಿಂದ್ರಾಕ್ಷಿ ವಂದೇ ಶಿವಧರ್ಮಪತ್ನೀಮ್ ॥೪॥

(ಇತಿ ಧ್ಯಾತ್ವಾ ಪುರಾ ಶಕ್ರಃ ಸ್ತೋತ್ರಮೇತಚ್ಚಕಾರ ಹ ।
ಸ್ತುತಾ ಶಕ್ತಿಂ ದದೌ ತಸ್ಮೈ ಸೇಂದ್ರಶಕ್ತಿಸ್ತದಾ ಭುವಿ ॥೫॥
ಪ್ರಖ್ಯಾತಾ ಸರ್ವಲೋಕೇಽಭೂದಿಂದ್ರಶಕ್ತ್ಯಭಿವರ್ಧನಾತ್ ।
ಸ್ತೋತ್ರಂ ಪಠಾಮಿ ತತ್ಪ್ರೋಕ್ತಂ ಸರ್ವರೋಗನಿವಾರಣಮ್)[2] ॥೬॥

## ಅಥ ಇಂದ್ರಾಕ್ಷೀಸ್ತೋತ್ರಪ್ರಾರಂಭಃ

**ಇಂದ್ರ ಉವಾಚ-**

**ಇಂದ್ರಾಕ್ಷೀ ಪೂರ್ವತಃ ಪಾತು ಪಾತ್ವಾಗ್ನೇಯ್ಯಾಂ ತಥೇಶ್ವರೀ ।**
**ಕೌಮಾರೀ ದಕ್ಷಿಣೇ ಪಾತು ನೈರ್ಋತ್ಯಾಂ ಪಾತು ಪಾರ್ವತೀ ॥೧**

1. ಇದರ ಮೂಲವು ನಮಗೆ ದೊರೆತಿಲ್ಲ. ಪ್ರಚಾರದಲ್ಲಿರುವ ಪಾಠಗಳನ್ನು ಆದಷ್ಟು ಶೋಧಿಸಿ ಪ್ರಕಟಿಸಿದೆ. 2. ಈ ಭಾಗವನ್ನು ಕೆಲವರು ಹೇಳುವುದಿಲ್ಲ

**ವಾರಾಹೀ ಪಶ್ಚಿಮೇ ಪಾತು ವಾಯವ್ಯೇ ನಾರಸಿಂಹ್ಯಪಿ ।**
**ಉದೀಚ್ಯಾಂ ಕಾಲರಾತ್ರಿರ್ಮಾಮೀಶಾನ್ಯಾಂ ಸರ್ವಶಕ್ತಯಃ ॥ ೨ ॥**
**ಭೈರವ್ಯೂರ್ಧ್ವಂ ಸದಾ ಪಾತು ಪಾತ್ವಧೋ ವೈಷ್ಣವೀ ತಥಾ ।**
**ಏವಂ ದಶದಿಶೋ ರಕ್ಷೇತ್ಸರ್ವಾಂಗಂ ಭುವನೇಶ್ವರೀ ॥ ೩ ॥**

[1](ಓಂ ನಮೋ ಭಗವತಿ, ಇಂದ್ರಾಕ್ಷಿ, ಮಹಾಲಕ್ಷ್ಮಿ, ಸರ್ವಜನವಶಂಕರಿ, ಸರ್ವದುಷ್ಟಗ್ರಹಸ್ತಂಭಿನಿ, ಸ್ವಾಹಾ । ಓಂ ನಮೋ ಭಗವತಿ, ಪಿಂಗಳಭೈರವಿ, ತ್ರೈಲೋಕ್ಯರಕ್ಷಿಣಿ, ತ್ರೈಲೋಕ್ಯಮೋಹಿನಿ, ಇಂದ್ರಾಕ್ಷಿ, ಮಾಂ ರಕ್ಷ ರಕ್ಷ, ಹುಂ ಫಟ್ ಸ್ವಾಹಾ । ಓಂ ನಮೋ ಭಗವತಿ, ಭದ್ರಕಾಳಿ. ಮಹಾದೇವಿ, ಕೃಷ್ಣವರ್ಣೇ, ತುಂಗಸ್ತನಿ, ಶೂರ್ಪಹಸ್ತೇ, ಕಪಾಟವಕ್ಷಸ್ಥಲೇ, ಕಪಾಲಧರೇ, ಚರ್ಮಧರೇ, ಚಾಪಧರೇ, ವಿಕೃತರೂಪಧರೇ, ವಿಕೃತರೂಪಮಹಾಕೃಷ್ಣಸರ್ಪಯಜ್ಞೋಪವೀತಿನಿ, ಭಸ್ಮೋದ್ಧೂಲಿತಸರ್ವಗಾತ್ರಿ, ಇಂದ್ರಾಕ್ಷಿ, ಮಾಂ ರಕ್ಷ ರಕ್ಷ, ಹುಂ ಫಟ್ ಸ್ವಾಹಾ । ಓಂ ನಮೋ ಭಗವತಿ, ಪ್ರಾಣೇಶ್ವರಿ, ಪ್ರೇತಾಸನೇ, ಸಿಂಹವಾಹನೇ, ಮಹಿಷಾಸುರಮರ್ದಿನಿ, ಉಷ್ಣಜ್ವರಪಿತ್ತಜ್ವರಶೀತಜ್ವರವಾತಜ್ವರಶ್ಲೇಷ್ಮಜ್ವರಕಫಜ್ವರಾಲಾಪಜ್ವರಾತಿಸಾರಜ್ವರ ಮಾಹೇಂದ್ರಜ್ವರ ಕೃತ್ರಿಮಜ್ವರಸನ್ನಿಪಾತಜ್ವರ ಕೃತ್ಯಾದಿಜ್ವರೈಕಾಹಿಕಜ್ವರದ್ವ್ಯಾಹಿಕಜ್ವರತ್ರ್ಯಾಹಿಕಜ್ವರಚಾತುರ್ಥಿಕಜ್ವರಪಕ್ಷಜ್ವರ ಮಾಸಜ್ವರಷಾಣ್ಮಾಸಿಕಜ್ವರ ಸಂವತ್ಸರಜ್ವರಾದಿಸರ್ವಜ್ವರಾನ್ನಾಶಯ ನಾಶಯ, ಹರ ಹರ, ಹನ ಹನ, ದಹ ದಹ, ಪಚ ಪಚ, ತಾಡಯ ತಾಡಯಾಕರ್ಷಯ ಆಕರ್ಷಯ, ವಿದ್ವೇಷಯ ವಿದ್ವೇಷಯ, ಸ್ತಂಭಯ ಸ್ತಂಭಯ, ಮೋಹಯ ಮೋಹಯೋಚ್ಚಾಟಯೋಚ್ಚಾಟಯ, ಹುಂ ಫಟ್ ಸ್ವಾಹಾ । ಓಂ ನಮೋ ಭಗವತಿ, ಪ್ರಾಣೇಶ್ವರಿ, ಪ್ರೇತಾಸನೇ, ಲಂಬೋಷ್ಠಿ, ಕಂಬುಕಂಠಿ, ಕಂಕಾಳಿ, ಕಾಲರೂಪಿಣಿ, ಕಾಮರೂಪಿಣಿ, ಘೋರರೂಪಿಣಿ, ಪರಮಂತ್ರಪರಯಂತ್ರಪರತಂತ್ರಪ್ರಭೇದಿನಿ, ಪ್ರತಿಭಟವಿಧ್ವಂಸಿನಿ, ಪರಬಲತುರಗವಿಮರ್ದಿನಿ, ಶತ್ರುಕರಚ್ಛೇದಿನಿ, ಶತ್ರುಮಾಂಸ

1. ಇದನ್ನು ಪುರಶ್ಚರಣೆಮಾಡುವಾಗ ಹೇಳಿಕೊಳ್ಳುವರು ; ಮಂತ್ರಶಾಸ್ತ್ರಜ್ಞರಿಂದ ಇದರ ವಿಚಾರವನ್ನು ತಿಳಿದುಕೊಳ್ಳಬೇಕು.

# ಇಂದ್ರಾಕ್ಷೀಸ್ತೋತ್ರಮ್

ಭಕ್ಷಿಣಿ, ಐಕಾಹಿಕಜ್ವರದ್ವ್ಯಾಹಿಕಜ್ವರತ್ರ್ಯಾಹಿಕಜ್ವರಚಾತುರ್ಥಿಕಜ್ವರ ಪಕ್ಷಜ್ವರಪಿತ್ತ ಜ್ವರಶೀತಜ್ವರವಾತಜ್ವರಶ್ಲೇಷ್ಮಜ್ವರಕಫಜ್ವರಸನ್ನಿಪಾತಜ್ವರ ಮಾಹೇಂದ್ರಜ್ವರ ಕೃತ್ರಿಮಜ್ವರ ಕೃತ್ಯಾದಿಜ್ವರ ನಿವಾರಿಣಿ, ಭೂತಪ್ರೇತ ಪಿಶಾಚ ಬ್ರಹ್ಮರಾಕ್ಷಸಯಕ್ಷಯಮ ದೂತಶಾಕಿನೀಡಾಕಿನೀಕಾಮಿನೀಸ್ತಂಭಿನೀ ಮೋಹಿನೀವಂಶಕರಿ, ಕುಕ್ಷಿರೋಗ ಶಿರೋರೋಗನೇತ್ರರೋಗಕ್ಷಯಾಪಸ್ಮಾರ ಕುಷ್ಠಾದಿಮಹಾರೋಗನಿವಾರಿಣಿ, ಮಮ ಸರ್ವಜ್ವರಂ ನಾಶಯ ನಾಶಯ । ಹ್ರಾಂ ಹ್ರೀಂ ಹ್ರೂಂ ಹ್ರೈಂ ಹ್ರೌಂ ಹ್ರಃ ಹುಂ ಫಟ್ ಸ್ವಾಹಾ । ಓಂ ಐಂ ಶ್ರೀಂ ಹುಂ ದುಂ ಇಂದ್ರಾಕ್ಷಿ, ಮಾಂ ರಕ್ಷ ರಕ್ಷ, ಮಮ ಶತ್ರೂನ್ ನಾಶಯ ನಾಶಯ, ಜಲರೋಗಂ ಶೋಷಯ ಶೋಷಯ, ದುಃಖ ವ್ಯಾಧೀನ್ ಸ್ಫೋಟಯ ಸ್ಫೋಟಯ, ಕ್ರೂರಾನರೀನ್ಭಂಜಯ ಭಂಜಯ ಮನೋಗ್ರಂಥಿಪ್ರಾಣಗ್ರಂಥಿಶಿರೋಗ್ರಂಥೀನ್ ಘಾತಯ ಘಾತಯ, ಇಂದ್ರಾಕ್ಷಿ, ಮಾಂ ರಕ್ಷ ರಕ್ಷ, ಹುಂ ಫಟ್ ಸ್ವಾಹಾ । ಓಂ ನಮೋ ಭಗವತಿ, ಮಾಹೇಶ್ವರಿ, ಮಹಾ ಚಿಂತಾಮಣಿ, ದುರ್ಗೇ, ಸಕಲಸಿದ್ಧೇಶ್ವರಿ, ಸಕಲಜನಮನೋಹಾರಿಣಿ, ಕಾಳರಾತ್ರಿ, ಅನತೇ, ಅಜಿತೇ, ಅಭಯೇ, ಮಹಾಘೋರರೂಪಪ್ರತಿಭಟ - ಧ್ವಂಸಿನಿ, ವೈಷ್ಣವಿ, ಬ್ರಹ್ಮಾಸ್ತ್ರೇಣ ವಿಷ್ಣುಚಕ್ರೇಣ ರುದ್ರಶೂಲೇನ ಯಮದಂಡೇನ ವರುಣಪಾಶೇನ ಸರ್ವಾನರೀನ್ ಭಂಜಯ ಭಂಜಯ, ಯಕ್ಷಗ್ರಹರಾಕ್ಷಸಗ್ರಹಭೂತಗ್ರಹ ವಿನಾಯಕಗ್ರಹ ಬಾಲಗ್ರಹಚೋರಗ್ರಹಕೂಷ್ಮಾಂಡಗ್ರಹಾದೀನ್ನಿಗ್ರಹ ನಿಗ್ರಹ, ರಾಜಯಕ್ಷ್ಮಾಕ್ಷಯರೋಗತಾಪಜ್ವರನಿವಾರಿಣಿ, ಮಮ ಸರ್ವಜ್ವರಂ ನಾಶಯ ನಾಶಯ, ಸರ್ವಗ್ರಹಾನುಚ್ಚಾಟಯೋಚ್ಚಾಟಯ, ಹುಂ ಫಟ್ ಸ್ವಾಹಾ ॥)

ಇಂದ್ರಾಕ್ಷೀ ನಾಮ ಸಾ ದೇವೀ ದೈವತೈಸ್ಸಮುದಾಹೃತಾ ।
ಗೌರೀ ಶಾಕಂಭರೀ ದೇವೀ ದುರ್ಗಾನಾಮ್ನೀತಿ -ವಿಶ್ರುತಾ ॥ ೪ ॥
ನಿತ್ಯಾನಂದಾ ನಿರಾಹಾರಾ ನಿಷ್ಕಲಾಯೈ ನಮೋಽಸ್ತು ತೇ ।
ಕಾತ್ಯಾಯನೀ ಮಹಾದೇವೀ ಛಿನ್ನಘಂಟಾ ಮಹಾತಪಾಃ ॥ ೫ ॥
ಸಾವಿತ್ರೀ ಸಾ ಚ ಗಾಯತ್ರೀ ಬ್ರಹ್ಮಾಣೀ ಬ್ರಹ್ಮವಾದಿನೀ ।
ನಾರಾಯಣೀ ಭದ್ರಕಾಳೀ ರುದ್ರಾಣೀ ಕೃಷ್ಣಪಿಂಗಲಾ ॥ ೬ ॥

ಅಗ್ನಿಜ್ವಾಲಾ ರೌದ್ರಮುಖೀ ಕಾಲರಾತ್ರಿಸ್ತಪಸ್ವಿನೀ ।
ಮೇಘಸ್ವನಾ ಸಹಸ್ರಾಕ್ಷೀ ವಿಕಟಾಂಗೀ ಜಡೋದರೀ ॥ ೭

ಮಹೋದರೀ ಮುಕ್ತಕೇಶೀ ಘೋರರೂಪಾ ಮಹಾಬಲಾ ।
ಅಜಿತಾ ಭದ್ರದಾನಂತಾ ರೋಗಹರ್ತ್ರೀ ಶಿವಪ್ರಿಯಾ ॥ ೮ ॥

ಶಿವದೂತೀ ಕರಾಲೀ ಚ ಪ್ರತ್ಯಕ್ಷಪರಮೇಶ್ವರೀ ।
ಇಂದ್ರಾಣೀ ಇಂದ್ರರೂಪಾ ಚ ಇಂದ್ರಶತ್ರುಪಲಾಯಿನೀ[1] ॥ ೯ ॥

ಸದಾ ಸಮ್ಮೋಹಿನೀ ದೇವೀ ಸುಂದರೀ ಭುವನೇಶ್ವರೀ ।
ಏಕಾಕ್ಷರೀ ಪರಬ್ರಾಹ್ಮೀ ಸ್ಥೂಲಸೂಕ್ಷ್ಮ ಪ್ರವರ್ಧನೀ ॥ ೧೦ ॥

ರಕ್ತಾಕ್ಷೀ ರಕ್ತದಂತಾ ಚ ರಕ್ತಮಾಲ್ಯಾಂಬರಾ ಪರಾ ।
ಮಹಿಷಾಸುರಸಂಹರ್ತ್ರೀ ಚಾಮುಂಡಾ ಸಪ್ತಮಾತೃಕಾ[2] ॥ ೧೧ ॥

ವಾರಾಹೀ ನಾರಸಿಂಹೀ ಚ ಭೀಮಾ ಭೈರವನಾದಿನೀ ।
ಶ್ರುತಿಸ್ಮೃತಿರ್ಧೃತಿರ್ಮೇಧಾ ವಿದ್ಯಾ ಲಕ್ಷ್ಮೀಸ್ಸರಸ್ವತೀ ॥ ೧೨ ॥

ಅನಂತಾ ವಿಜಯಾಪರ್ಣಾ ಮಾನಸ್ತೋಕಾಪರಾಜಿತಾ ।
ಭವಾನೀ ಪಾರ್ವತೀ ದುರ್ಗಾ ಹೈಮವತ್ಯಂಬಿಕಾ ಶಿವಾ ॥ ೧೩ ॥

ಶಿವಾ ಭವಾನೀ ರುದ್ರಾಣೀ ಶಂಕರಾರ್ಧಶರೀರಿಣೀ ।
ಐರಾವತಗಜಾರೂಢಾ ವಜ್ರಹಸ್ತಾ ವರಪ್ರದಾ ॥ ೧೪ ॥

(ಭಸ್ಮಾಯುಧಾಯ ವಿದ್ಮಹೇ ರಕ್ತನೇತ್ರಾಯ ಧೀಮಹಿ ।
ತನ್ನೋ ಜ್ವರಹರಃ ಪ್ರಚೋದಯಾತ್ ॥)

## ಅಥ ಫಲಶ್ರುತಿಃ

ಏತೈರ್ನಾಮಪದೈರ್ದಿವ್ಯೈಃ[3] ಸ್ತುತಾ ಶಕ್ರೇಣ ಧೀಮತಾ ।
ವರಂ ಪ್ರಾದಾನ್ಮಹೇಂದ್ರಾಯ ದೇವರಾಜ್ಯಂ ಚ ಶಾಶ್ವತಮ್ ॥ ೧೫ ॥

1. ಇಂದ್ರಶಕ್ತಿಃ ಪರಾಯಣೀ - ಎಂದು ಪಾಠಾಂತರ. 2. ಖಡ್ಗಧಾರಿಣೀ - ಎಂದು ಪಾಠಾಂತರ.

3. ಪರ್ಣೈರ್ದೇವೀ - ಎಂದು ಪಾಠಾಂತರ.

## ಇಂದ್ರಾಕ್ಷೀಸ್ತೋತ್ರಮ್

ಆಯುರಾರೋಗ್ಯಮೈಶ್ವರ್ಯಮಪಮೃತ್ಯುಭಯಾಪಹಮ್ ।
ಕ್ಷಯಾಪಸ್ಮಾರಕುಷ್ಠಾದಿತಾಪಜ್ವರನಿವಾರಣಮ್ ॥ ೧೬ ॥
ಚೋರವ್ಯಾಘ್ರಭಯಾರಿಷ್ಟಶೀತಜ್ವರನಿವಾರಣಮ್ ।
ಶತಮಾವರ್ತಯೇದ್ಯಸ್ತು ಮುಚ್ಯತೇ ವ್ಯಾಧಿಬಂಧನಾತ್ ॥ ೧೭ ॥
ಆವರ್ತಯನ್ ಸಹಸ್ರಂ ತು ಲಭತೇ ವಾಂಛಿತಂ ಫಲಮ್ ।
ಏತತ್ ಸ್ತೋತ್ರಂ ಮಹಾಪುಣ್ಯಂ ಜಪೇದಾಯುಷ್ಯವರ್ಧನಮ್ ॥ ೧೮ ॥
ವಿನಾಶಾಯ ಚ ರೋಗಾಣಾಮಪಮೃತ್ಯುಹರಾಯ ಚ ।
ದ್ವಿಜೈರ್ನಿತ್ಯಮಿದಂ ಜಪ್ಯಂ ಭಾಗ್ಯಾರೋಗ್ಯಮಭೀಪ್ಸುಭಿಃ ॥ ೧೯ ॥
ಸರ್ವಮಂಗಲಮಾಂಗಲ್ಯೇ ಶಿವೇ ಸರ್ವಾರ್ಥಸಾಧಕೇ ।
ಶರಣ್ಯೇ ತ್ರ್ಯಂಬಕೇ ದೇವಿ ನಾರಾಯಣಿ ನಮೋಽಸ್ತು ತೇ[1] ॥ ೨೦ ॥

**ಇತಿ ಇಂದ್ರಾಕ್ಷೀಸ್ತೋತ್ರಂ ಸಂಪೂರ್ಣಮ್**

## ಶಿವನಿಗೆ ಜಯಕಾರ

ಜಯ ದೇವ ಜಗನ್ನಾಥ ಜಯ ಶಂಕರ ಶಾಶ್ವತ ।
ಜಯ ಸರ್ವಸುರಾಧ್ಯಕ್ಷ ಜಯ ಸರ್ವಸುರಾರ್ಚಿತ ॥ ೧ ॥
ಜಯ ಸರ್ವಗುಣಾತೀತ ಜಯ ಸರ್ವವರಪ್ರದ ।
ಜಯ ನಿತ್ಯ ನಿರಾಧಾರ ಜಯ ವಿಶ್ವಂಭರಾವ್ಯಯ ॥ ೨ ॥
ಜಯ ವಿಶ್ವೈಕವಂದ್ಯೇಶ ಜಯ ನಾಗೇಂದ್ರಭೂಷಣ ।
ಜಯ ಗೌರೀಪತೇ ಶಂಭೋ ಜಯ ನಿತ್ಯ ನಿರಂಜನ ॥ ೩ ॥
ಜಯ ನಾಥ ಕೃಪಾಸಿಂಧೋ ಜಯ ಭಕ್ತಾರ್ತಿಭಂಜನ ।
ಜಯ ದುಸ್ತಾರಸಂಸಾರಸಾಗರೋತ್ತಾರಣ ಪ್ರಭೋ ॥ ೪ ॥
ಪ್ರಸೀದ ಮೇ ಮಹಾದೇವ ಸಂಸಾರಾದದ್ಯ ಖಿದ್ಯತಃ ।
ಸರ್ವಪಾಪಕ್ಷಯಂ ಕೃತ್ವಾ ರಕ್ಷ ಮಾಂ ಪರಮೇಶ್ವರ ॥ ೫ ॥

---

1. 'ಇಂದ್ರಾಕ್ಷೀಂ ಹೃದಯಾಯ ನಮಃ ಎಂದು ಮುಂತಾಗಿ ಹೇಳಿಕೊಂಡು 'ಭೂರ್ಭುವಸ್ಸುವರೋಮಿತಿ ದಿಗ್ವಿಮೋಕಃ' ಎಂದು ಹೇಳಿ ಮುಗಿಸಬೇಕು.

ಮಹಾದಾರಿದ್ರ್ಯದಗ್ಧಸ್ಯ ಮಹಾಪಾಪಹತಸ್ಯ ಚ।
ಮಹಾಶೋಕನಿವಿಷ್ಟಸ್ಯ ಮಹಾರೋಗಾತುರಸ್ಯ
ಋಣಭಾರಪರೀತಸ್ಯ ದಹ್ಯಮಾನಸ್ಯ ಕರ್ಮಭಿಃ ।
ಗ್ರಹೈಃ ಪ್ರಪೀಡ್ಯಮಾನಸ್ಯ ಪ್ರಸೀದ ಮಮ ಶಂಕರ ॥ ೭ ॥
ದೀರ್ಘಮಾಯುಸ್ಸದಾರೋಗ್ಯಂ ಕೋಶವೃದ್ಧಿರ್ಬಲೋನ್ನತಿಃ ।
ಮಮಾಸ್ತು ನಿತ್ಯಮಾನಂದಃ ಪ್ರಸಾದಾತ್ತವ ಶಂಕರ ॥ ೮ ॥
ಶತ್ರವಶ್ಚ ಕ್ಷಯಂ ಯಾಂತು ಪ್ರಸೀದನ್ತು ಮಮ ಪ್ರಜಾಃ ।
ನಶ್ಯನ್ತು ದಸ್ಯವೋ ರಾಜ್ಯೇ ಜನಾಸ್ಸನ್ತು ನಿರಾಪದಃ ॥ ೯ ॥
ದುರ್ಭಿಕ್ಷಮಗ್ನಿಸಂತಾಪಾಃ ಶಮಂ ಯಾಂತು ಮಹೀತಲೇ ।
ಸರ್ವಸಸ್ಯಸಮೃದ್ಧಿಶ್ಚ ಭೂಯಾತ್ ಸುಖಮಯಾಃ ದಿಶಃ ॥ ೧೦ ॥

## ಆರುತಿ

**ಓಂ** ಮಂಗಳಂ । ಓಂಕಾರ ಮಂಗಳಮ್ ।
ಓಂ ನ-ಮ-ಶ್ಶಿ-ವಾ-ಯ-ಮಂಗಳಮ್ ॥ ಪ ॥
**ನ** ಮಂಗಳಮ್ । ನಕಾರ ಮಂಗಳಮ್ ।
ನಾದಬಿಂದುಕಲಾತೀತ ಗುರುವೆ ಮಂಗಳಮ್ ॥ ೧ ॥
**ಮ** ಮಂಗಳಮ್ । ಮಕಾರ ಮಂಗಳಮ್ ।
ಮಹಾದೇವ ತಾನಾದ ಶಿವಗೆ ಮಂಗಳಮ್ ॥ ೨ ॥
**ಶಿ** ಮಂಗಳಮ್ । ಶಿಕಾರ ಮಂಗಳಮ್ ।
ಸಿದ್ಧಬುದ್ಧರೂಪನಾದ ಹರಗೆ ಮಂಗಳಮ್ ॥ ೩ ॥
**ವಾ** ಮಂಗಳಮ್ । ವಕಾರ ಮಂಗಳಮ್ ।
ವಾದಭೇದದೂರನಾದ ಭವಗೆ ಮಂಗಳಮ್ ॥ ೪ ॥
**ಯ** ಮಂಗಳಮ್ । ಯಕಾರ ಮಂಗಳಮ್ ।
ಯ(ಎ)ಲ್ಲಾ ವಸ್ತು ತಾನಾದ ಮೃಡಗೆ ಮಂಗಳಮ್ ॥ ೫ ॥

ಹರ ನಮಃ ಪಾರ್ವತೀಪತಯೇ ॥ ಹರಹರ ಮಹಾದೇವ ॥

# ವಿನೋದಕಾಲಕ್ಷೇಪವನ್ನೂ ತತ್ತ್ವವಿಚಾರವನ್ನೂ ಏಕಕಾಲದಲ್ಲಿ ಒದಗಿಸುವ ಕಥೆಗಳು

೧. **ವೇದಾಂತಕಥಾವಳಿ** : ಇದರಲ್ಲಿ ಇಪ್ಪತ್ತೊಂದು ಪುಟ್ಟ ಕಥೆಗಳಿವೆ. ಒಂದೊಂದು ಕಥೆಯ ಕೆಳಗೂ ಅದರಿಂದ ತಿಳಿದುಕೊಳ್ಳಬೇಕಾದ ತತ್ತ್ವವನ್ನು ಬಹುಸರಳವಾದ ಭಾಷೆಯಲ್ಲಿ ವಿವರಿಸಿದೆ. ವೇದಾಂತ ವಿಷಯದ ಎಷ್ಟೋ ತಪ್ಪುತಿಳಿವಳಿಕೆಗಳು ಇದನ್ನು ಓದುವದರಿಂದ ಮಾಯವಾಗುವವು. ಮೊದಲನೆಯಸಲಕ್ಕೆ ವೇದಾಂತವನ್ನು ಓದುವವರಿಗೆ ತಕ್ಕದ್ದಾಗಿದೆ.

೨. **ವಿಲಕ್ಷಣಮೌನಿ** : 'ಅರುಣಗಿರಿ'(ಕೆ. ಕೃಷ್ಣಸ್ವಾಮಿ ಅಯ್ಯರ್)ಯವರು ಬರೆದಿರುವ ಸಂಭಾಷಣರೂಪವಾದ ಕಥೆಯಿದು. ಇದರಲ್ಲಿ ಭೋಜರಾಜನಿಗೆ ಒಬ್ಬ ಮುನಿವರ್ಯರು ಸೂತ್ರರೂಪವಾಗಿ ಉಪದೇಶಿಸಿದ ದಶೋಪನಿಷತ್ತುಗಳ ಮಹಾತಾತ್ಪರ್ಯವನ್ನು ವಿವರಿಸಿದೆ. ಉಪನಿಷತ್ತುಗಳೆಲ್ಲವೂ ಬ್ರಹ್ಮಾತ್ಮೈಕತ್ವಪರವೆಂಬುದನ್ನು ಮನಗಾಣಿಸುವ ಗ್ರಂಥವಿದು.

೩. **ಉಪನಿಷತ್ತುಗಳ ಮೊದಲನೆಯ ಪರಿಚಯ** : ಉಪನಿಷತ್ತುಗಳಲ್ಲಿರುವ ಕಥಾಸಂದರ್ಭಗಳು ; ದೃಷ್ಟಾಂತಗಳು, ಸಿದ್ಧಾಂತ, ಸಾಧನ - ಇಷ್ಟು ವಿಷಯಗಳನ್ನು ಲಲಿತವಾದ ಶೈಲಿಯಲ್ಲಿ ಬರೆದಿದೆ. ಉಪನಿಷತ್ತುಗಳಲ್ಲಿರುವ ವಿಚಾರಕ್ರಮವನ್ನು ಭಾಷ್ಯಸಂಪ್ರದಾಯಾನುಸಾರವಾಗಿ ವಿಚಾರಮಾಡಬೇಕೆಂಬ ಜಿಜ್ಞಾಸುಗಳಿಗೆ ಉತ್ತಮಪುಸ್ತಕವಿದು. ಸ್ತ್ರೀಯರಿಗೂ ಮಕ್ಕಳಿಗೂ ಸಹ ತಿಳಿಯುವಂತಿದೆ.

೪. **ಶ್ರೀರಾಮಗೀತೆ** : ಅಧ್ಯಾತ್ಮರಾಮಾಯಣದಿಂದ ಆರಿಸಿದ ಭಾಗವಿದು. ಶ್ರೀರಾಮನು ಲಕ್ಷ್ಮಣನಿಗೆ ಮಾಡಿದ ಅಮೋಘವಾದ ಉಪದೇಶವು ಇದರಲ್ಲಿದೆ. ಇದರಲ್ಲಿ ಮಹಾವಾಕ್ಯವಿಚಾರವೂ, ಪರಮಾತ್ಮನಲ್ಲಿ ಪ್ರಪಂಚವನ್ನೆಲ್ಲ ಲಯಗೊಳಿಸಿಕೊಳ್ಳುವ ಸಾಧನ ಕ್ರಮವೂ - ಉಕ್ತವಾಗಿದೆ. ಜ್ಞಾನಕ್ಕೆ ಭಕ್ತಿಯೇ ಸಾಧನವೆಂದೂ ಪ್ರತಿಪಾದಿಸಿದೆ.

೫. **ಮೋಹಮುದ್ಗರ** 'ಭಜಗೋವಿಂದಸ್ತೋತ್ರ'ವೆಂಬ ಹೆಸರಿನಿಂದ ಪ್ರಸಿದ್ಧವಾಗಿರುವ 'ದ್ವಾದಶಮಂಜರಿ, ಚತುರ್ದಶಮಂಜರಿ' - ಎರಡೂ ಇವೆ.